[5] ಲಿಂಗನಾಮಾಸ್ಯ ಚೋಚ್ಯತೇ—ಫ

[6] ಅಮೂರ್ತಿರೇವಮಾಖ್ಯಾತಾ—ಪ.

[7] ಸಮೂರ್ತಿಂ ತು—ಫ.
ಸಮೂರ್ತಂ ಚ—ಪ.

ಇಚ್ಛಾಶಕ್ತಿಶ್ಚ ವಿದ್ಯಾ ಚ
ತಸ್ಯಾಃ[1] ಪರ್ಯಾಯವಾಚಕಃ ।
ತಚ್ಛಕ್ತೇಸ್ತು[2] ದಶಾಂಶೇನ
ಮೂರ್ತಸಾದಾಖ್ಯಸಂಭವಃ[3] ॥ ॥ ೫೬ ॥

ಇಚ್ಛಾಶಕ್ತೇಃ ಗುಣತ್ವಾಚ್ಚ[4]
ತಸ್ಮಾನ್ಮೂರ್ತಮುದಾಹೃತಮ್[5] ।
ಮೂರ್ತತ್ವಾಚ್ಚ[6] ಕಲಾಯುಕ್ತಂ
ರೂಪಂ ಚೇತಿ ಪ್ರಕೀರ್ತಿತಮ್ ॥ ॥ ೫೭ ॥

ಜ್ವಾಲಾಗ್ನಿಸದೃಶಪ್ರಖ್ಯಾ[7]
ದಿವ್ಯಲಿಂಗಾಕೃತಿರ್ಭವೇತ್[8] ।
ತಸ್ಯಾರ್ಧಾರ್ಧ್ಯೈಕ[9]ಭಾಗೇ ತು[10]
ಚೈಕವಕ್ತ್ರಸಮನ್ವಿತಮ್[11] ॥ ॥ ೫೮ ॥

ಶಿವನ ನಿಷ್ಕಲಸ್ವರೂಪವಾದ ಇಚ್ಛಾಶಕ್ತಿಯೇ ವಿದ್ಯಾಕಲೆ. ಇದು ಇಚ್ಛಾಶಕ್ತಿಯ ಪರ್ಯಾಯನಾಮ. ಇಚ್ಛಾಶಕ್ತಿಯ ಹತ್ತರಲ್ಲೊಂದಂಶದಿಂದ ಮೂರ್ತಸಾದಾಖ್ಯತತ್ತ್ವವು ಸಂಭವಿಸುತ್ತದೆ. ॥ ೫೬ ॥

ಇಚ್ಛಾಶಕ್ತಿಯ ಗುಣವಾದುದರಿಂದ ಇದನ್ನು ಮೂರ್ತಸಾದಾಖ್ಯವೆನ್ನುತ್ತಾರೆ. ಇದು ಮೂರ್ತಿರೂಪವಾದುದರಿಂದ ಕಲಾಸಹಿತವಾದ ಸ್ವರೂಪವನ್ನುಳ್ಳದ್ದು. ॥೫೭॥

ಈ ಸ್ವರೂಪವು ಉರಿಯುವ ಅಗ್ನಿಗೆ ಸದೃಶವಾದ ಕಾಂತಿಯನ್ನು ಹೊಂದಿ ದಿವ್ಯಲಿಂಗಾಕಾರವನ್ನುಳ್ಳದ್ದಾಗಿರುತ್ತದೆ. ಈ ದಿವ್ಯಲಿಂಗದ ನಾಲ್ಕನೆಯ ಒಂದು ಭಾಗದಲ್ಲಿ ಒಂದು ಮುಖ— ॥ ೫೮ ॥

---

[1] ತಸ್ಯ—ಕ, ಚ, ಢ, ಪ.
[2] ಇಚ್ಛಾಶಕ್ತೇಃ—ಘ.
[3] ಮೂರ್ತಿಸಾದಾಖ್ಯಸಂಭವಃ—ಧ.
ಜ್ಯೋತೀರೂಪಮಿಹೋಚ್ಯತೇ—ಖ, ಗ, ಚ.
[4] ಇಚ್ಛಾಶಕ್ತಿಗುಣತ್ವಾಚ್ಚ—ಕ, ಘ, ಛ, ದ, ಧ, ಪ, ಬ.
[5] ರ್ತಿರುದಾಹೃತಾ—ಖ. ಗ. ಚ, ಝ.
[6] ಮೂರ್ತಿತ್ವಾಚ್ಚ—ಧ, ಬ.
[7] ಮೂಲಾಗ್ನಿಸದೃಶಪ್ರಖ್ಯ—ಪ.
[8] ಕೃತಿರ್ಧ್ರವಮ್—ಧ.
[9] ತಸ್ಯೋರ್ಧ್ವಾಂಶೈಕ—ಖ, ಗ, ಚ, ಝ.
[10] ಭಾಗೇನ—ಕ.
[11] ಚೈಕವಕ್ತ್ರೇಣ ಸಂಯುತಮ್—ಘ.

ತ್ರಿಣೇತ್ರಂ[1] ಚಾರುವದನಂ
    ಸರ್ವಾವಯವಸುಂದರಮ್[2] ।
[3]ಕೃಷ್ಣಾ ಪರಶುಹಸ್ತಂ ಚ
    ವರಾಭಯಚತುರ್ಭುಜಮ್ ॥ ॥ ೫೯ ॥

[4]ಏವಂ ಲಕ್ಷಣಸಂಯುಕ್ತಂ
    ಲಿಂಗಮೂರ್ತಮುದಾಹೃತಮ್ ।
ಏವಮೇಕಾನನೋಪೇತಾ[5]
    ದಿವ್ಯಲಿಂಗಾಕೃತಿರ್ಭವೇತ್[6] ॥ ॥ ೬೦ ॥

[7]ಮೂರ್ತ[8]ಸಾದಾಖ್ಯಮಿತ್ಯುಕ್ತಂ[9]
    ಕರ್ತೃಸಾದಾಖ್ಯಮುಚ್ಯತೇ ।

—ಮೂರು ಕಣ್ಣುಗಳು, ಸುಂದರವಾದ ಮುಖ, ಸುಂದರವಾದ ಸಮಸ್ತ ಅವಯವಗಳಿಂದ ಕೂಡಿ, ಎರಡು ಕೈಗಳಲ್ಲಿ ಕೃಷ್ಣಮೃಗ ಮತ್ತು ಪರಶುಗಳನ್ನೂ, ಮತ್ತೆರಡು ಕೆಗಳಲ್ಲಿ ವರ ಮತ್ತು ಅಭಯ ಮುದ್ರೆಗಳನ್ನೂ ಧರಿಸಿದ ॥ ೫೯ ॥

—ಸ್ವರೂಪವನ್ನು ಲಿಂಗರೂಪವಾದ ಮೂರ್ತಸಾದಾಖ್ಯವೆಂದು ಹೇಳುತ್ತಾರೆ. ಹೀಗೆ ಒಂದು ಮುಖವನ್ನುಳ್ಳ ದಿವ್ಯಲಿಂಗಾಕಾರವಾಗುತ್ತದೆ. ॥ ೬೦ ॥

ಮೂರ್ತಸಾದಾಖ್ಯನಿರೂಪಣೆಯ ನಂತರ ಕರ್ತೃಸಾದಾಖ್ಯವನ್ನು ಹೇಳುತ್ತೇನೆ.

---

[1] ತ್ರಿಣಯನಂ—ಟ, ಠ.
[2] ಸಂಯುತಂ—ಖ, ಗ, ಚ, ಝ.
[3] ಈ ಅರ್ಧಪದ್ಯ—ಕ, ಘ, ಛ, ಟ, ಠ. ಡ, ಢ, ತ, ಥ, ದ, ಧ. ಪ, ಬ. ಪುಸ್ತಕಗಳಲ್ಲಿಲ್ಲ.
[4] ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ. ಪುಸ್ತಕಗಳಲ್ಲಿಲ್ಲ
[5] ಏವಮೇಕಾಸನೋಪೇತಂ—ಖ, ಗ, ಚ, ಝ.
ಏಕಮೇಕಾನಮೋಪೇತಂ—ಥ, ದ, ಬ.
[6] ಲಿಂಗಾಕೃತಿರಿತೀರಿತಾ—ಥ.
ಲಿಂಗಮೂರ್ತಿರುದಾಹೃತಾ—ಝ. (ಪಾ)
[7] ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ. ತ, ಥ, ಧ. ಪ. ಪುಸ್ತಕಗಳಲ್ಲಿಲ್ಲ.
[8] ಮೂರ್ತಿ—ಖ, ಗ, ಚ, ಝ.
[9] ಮೇವೋಕ್ತಂ—ಫ.

ಜ್ಞಾನಂ ಚೈವ ಪ್ರತಿಷ್ಠಾ ಚ[1]
ತಸ್ಯ[2] ಪರ್ಯಾಯವಾಚಕಃ ॥ ॥ ೬೧ ॥

ಜ್ಞಾನಶಕ್ತೇರ್ದಶಾಂ[3]ಶೇನ
ಕರ್ತೃಸಾದಾಖ್ಯಸಂಭವಃ[4] ।
ಜ್ಞಾನಂ ಕರ್ತೃಸ್ವಭಾವತ್ವಾತ್[5]
ಕರ್ತೃನಾಮೇತಿ ಕೀರ್ತಿತಮ್ ॥ ॥ ೬೨ ॥

[6]ಜ್ಞಾನಂ ಹಿ[7] ಶುದ್ಧಭಾವತ್ವಾತ್[8]
ಸ್ಫಾಟಿಕಾಭಾಸ[9]ಮುಚ್ಯತೇ ।
ದಿವ್ಯಲಿಂಗಂ ಮಹಾಸ್ಥೂಲಂ
ಮಹಾದೀರ್ಘತಯಾಽನ್ವಿತಮ್ ॥ ॥ ೬೩ ॥

ನಿಷ್ಕಲಸ್ವರೂಪವಾದ ಜ್ಞಾನಶಕ್ತಿಯೇ ಪ್ರತಿಷ್ಠಾಕಲೆ. ಇದು ಜ್ಞಾನಶಕ್ತಿಯ ಪರ್ಯಾಯನಾಮ. ॥ ೬೧ ॥

ಜ್ಞಾನಶಕ್ತಿಯ ಹತ್ತರಲ್ಲೊಂದಂಶದಿಂದ ಕರ್ತೃಸಾದಾಖ್ಯವು ಪ್ರಾದುರ್ಭವಿಸುತ್ತದೆ. ಚಿಚ್ಛಕ್ತಿಗೆ ಜಗನ್ನಿರ್ಮಾಣಸ್ವಭಾವವಿರುವುದರಿಂದ ಇದನ್ನು ಕರ್ತೃಸಾದಾಖ್ಯವೆನ್ನುತ್ತಾರೆ. ॥ ೬೨ ॥

ಜ್ಞಾನತತ್ತ್ವವನ್ನು ಅದರ ಶುದ್ಧಸ್ವಭಾವದಿಂದ ಸ್ಫಟಿಕಪ್ರಭೆಯುಳ್ಳದ್ದೆಂದು ಹೇಳುತ್ತಾರೆ. ಈ ಶಿವಲಿಂಗವು ಅತಿಸ್ಥೂಲವೂ ಅತಿದೀರ್ಘವೂ ಆದುದು. ॥ ೬೩ ॥

---

[1] ಜ್ಞಾನಶಕ್ತಿಃ ಪ್ರತಿಷ್ಠಾ ಚ—ಫ.

[2] ತಸ್ಯಾಃ—ಖ, ಗ, ಚ, ಝ.

[3] ಶಕ್ತಿದಶಾಂ—ಖ, ಗ, ಚ, ಝ.

[4] ಖ್ಯಮುದ್ಭವಂ—ಕ, ಘ, ಛ, ಟ, ಠ, ಡ, ಢ, ತ, ಥ.

[5] ಜ್ಞಾನಶಕ್ತೇಃ ಸ್ವಭಾವತ್ವಾತ್—ಢ.

[6] ಈ ಅರ್ಧಪದ್ಯ ಕ, ಘ, ಛ, ಟ, ಠ, ಡ, ತ, ಥ, ಪ, ಪ. ಪುಸ್ತಕಗಳಲ್ಲಿಲ್ಲ.

[7] ಜ್ಞಾನಸ್ಯ—ಧ.

[8] ರುದ್ಧರೂಪತ್ವಾತ್—ಖ, ಗ, ಚ, ಝ.

[9] ಸ್ಫಟಿಕಾಭಾಸ—ಕ, ಠ.

[1]ತಸ್ಯ ಮಧ್ಯ[2]ಸ್ಥಿತಾ ಮೂರ್ತಿಃ
ಈಶ್ವರಃ ಸರ್ವಕಾರಣಮ್ ।
ಚತುರ್ಮೂರ್ಧಂ ಚತುರ್ವಕ್ತ್ರಂ[3]
ನೇತ್ರದ್ವಾದಶಸಂಯುತಮ್[4] ॥ ॥ ೬೪ ॥

ಚತುರಾಸ್ಯಚತುರ್ವರ್ಣಂ
ವಸುಶ್ರೋತ್ರಸಮನ್ವಿತಮ್ ।
ಅಷ್ಟಹಸ್ತಂ ದ್ವಿಪಾದಂ ಚ
ಸರ್ವಲಕ್ಷಣಸಂಯುತಮ್[5] ॥ ॥ ೬೫ ॥

ಶೂಲಂ ಪರಶುಖಡ್ಗಂ ಚಾ-
ಪ್ಯಭಯಂ ದಕ್ಷಿಣೇ ಕರೇ ।
ಪಾಶಂ ನಾಗಂ ಚ ಘಂಟಾಂ ಚ
ವರದಂ ವಾಮಹಸ್ತಕೇ ॥ ॥ ೬೬ ॥

ಆ ಶಿವಲಿಂಗದ ಮಧ್ಯದಲ್ಲಿರುವ ಸಮಸ್ತಕ್ಕೂ ಕಾರಣವಾದ ಮೂರ್ತಿಯು ಈಶ್ವರ. ಈ ಮೂರ್ತಿಯು:—ನಾಲ್ಕು ತಲೆಗಳು, ನಾಲ್ಕು ಮುಖಗಳು, ಹನ್ನೆರಡು ಕಣ್ಣುಗಳು— ॥ ೬೪ ॥

—ನಾಲ್ಕು ಮುಖಗಳಲ್ಲಿ ನಾಲ್ಕು ಬಣ್ಣಗಳು, ಎಂಟು ಕಿವಿಗಳು, ಎಂಟು ಕೈಗಳು ಮತ್ತು ಎರಡು ಪಾದಗಳನ್ನುಳ್ಳದ್ದಾಗಿ ಸಕಲ ಲಕ್ಷಣಗಳಿಂದ ಕೂಡಿ— ॥ ೬೫ ॥

ಬಲದ ನಾಲ್ಕು ಹಸ್ತಗಳಲ್ಲಿ ಕ್ರಮವಾಗಿ ತ್ರಿಶೂಲ, ಪರಶು, ಖಡ್ಗಾಯುಧ, ಅಭಯಮುದ್ರೆಗಳನ್ನೂ, ಮತ್ತು ಎಡದ ನಾಲ್ಕು ಹಸ್ತಗಳಲ್ಲಿ ಕ್ರಮವಾಗಿ ಪಾಶ, ಸರ್ಪ, ಘಂಟೆ ಮತ್ತು ವರದ ಮುದ್ರೆಗಳನ್ನೂ ಧರಿಸಿ— ॥ ೬೬ ॥

---

[1] ಈ ಅರ್ಧಪದ್ಯ—ಡ, ಪ. ಪುಸ್ತಕಗಳಲ್ಲಿಲ್ಲ.

[2] ಮಧ್ಯೇ—ಠ, ಢ, ತ, ದ.

[3] ಚತುರ್ಮೂರ್ಧಚತುರ್ವಕ್ತ್ರ—ಝ.
ಷಂಚಮೂರ್ಧ್ನಾಚತುರ್ವಕ್ತ್ರಂ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

[4] ಭಿರ್ಯುತಂ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

[5] ಸಂಯುಕ್ತಂ—ಛ, ಥ.

[1]ಸರ್ವಾಯವಸಂಯುಕ್ತಂ
ಸರ್ವಾಭರಣಭೂಷಿತಮ್ ।
[2]ಏವಂ ತಮೀಶ್ವರಂ ವಿದ್ಯಾತ್
ಕರ್ತೃಸಾದಾಖ್ಯಲಿಂಗಕಮ್[3] ॥ ॥ ೬೭ ॥

ಕರ್ತೃಸಾದಾಖ್ಯಮಿತ್ಯುಕ್ತಂ[4]
ಕರ್ಮಸಾದಾಖ್ಯಮುಚ್ಯತೇ ।
ನಿವೃತ್ತಿಃ ಸ್ಯಾತ್ ಕ್ರಿಯಾಶಕ್ತಿಃ
ತಸ್ಯಾಃ ಪರ್ಯಾಯವಾಚಕಃ ॥ ॥ ೬೮ ॥

ಕ್ರಿಯಾಶಕ್ತೇಃ ದಶಾಂಶೇನ[5]
ಕರ್ಮಸಾದಾಖ್ಯಸಂಭವಃ[6] ।

ಸಕಲಾವಯವಗಳಿಂದ ಕೂಡಿ ಸಮಸ್ತಾಭರಣಗಳಿಂದ ಅಲಂಕೃತವಾಗಿರುತ್ತದೆ. ಈ ರೀತಿಯ ಈಶ್ವರಸ್ವರೂಪವನ್ನು ಕರ್ತೃಸಾದಾಖ್ಯಲಿಂಗವೆಂದು ತಿಳಿಯಬೇಕು. ॥ ೬೭ ॥

ಕರ್ತೃಸಾದಾಖ್ಯದನಂತರ ಕರ್ಮಸಾದಾಖ್ಯವನ್ನು ನಿರೂಪಿಸುವೆನು. ನಿಷ್ಕಲವಾದ ಕ್ರಿಯಾಶಕ್ತಿಯೇ ನಿವೃತ್ತಿಕಲೆ. ಇದು ಕ್ರಿಯಾಶಕ್ತಿಯ ಪರ್ಯಾಯನಾಮ. ॥ ೬೮ ॥

ನಿಷ್ಕಲಕ್ರಿಯಾಶಕ್ತಿಯ ಹತ್ತರಲ್ಲೊಂದಂಶದಿಂದ ಕರ್ಮಸಾದಾಖ್ಯದ ಆವಿರ್ಭಾವವಾಗುತ್ತದೆ. ಕ್ರಿಯೆಯನ್ನು ಕರ್ಮವೆಂದು ತಿಳಿಯಬೇಕು. ಆದ್ದರಿಂದ ಇದಕ್ಕೆ ಕರ್ಮಸಾದಾಖ್ಯವೆಂಬ ಹೆಸರು ಬಂದಿದೆ. ಮನ್ತ್ರಜಾತಪಟಲದಲ್ಲಿ ನಿರೂಪಿಸಲ್ಪಡುವ

---

[1] ಈ ಅರ್ಧಪದ್ಯ ಡ, ಪ. ಪುಸ್ತಕಗಳಲ್ಲಿಲ್ಲ.

[2] ಈ ಅರ್ಧಪದ್ಯ ಪ. ಪುಸ್ತಕದಲ್ಲಿಲ್ಲ.

[3] "ಏವಂ ತದ್ಧೀಶ್ವರಂ ಪ್ರೋಕ್ತಂ ಕರ್ತೃಲಿಂಗಮಿಹೋಚ್ಯತೇ"—ಕ, ಖ, ಘ, ಛ, ಟ, ಠ, ಢ, ತ, ಥ, ಪ.

[4] ಕರ್ತೃಸಾದಾಖ್ಯಮೇವೋಕ್ತಂ—ಘ.
ಕರ್ತೃಲಿಂಗಸಮಾಹ್ವಯಂ—ಥ.

[5] ಶಕ್ತಿದಶಾಂಶೇನ—ಖ, ಗ, ಜ, ಝ.

[6] ಖ್ಯಮುದ್ಭವಂ—ಕ, ಖ, ಘ, ಛ, ಟ, ಠ, ಡ, ಢ, ತ, ದ, ಪ, ಬ.
ಖ್ಯಮುದ್ಭವಃ—ಥ, ಘ.

ಕ್ರಿಯಾ ಕರ್ಮೇತಿ[1] ವಿಜ್ಞೇಯಾ[2]
ತಸ್ಮಾತ್ ಕರ್ಮೇತಿ[3] ನಾಮತಃ ।
ಲಿಂಗಪೀಠಪ್ರಕಾರೇಣ
ಕರ್ಮಸಾದಾಖ್ಯಲಕ್ಷಣಮ್ ॥ ॥ ೧೯ ॥

ನಾದೋ ಲಿಂಗಮಿತಿ ಜ್ಞೇಯಃ[4]
ಬಿಂದುಃ ಪೀಠಮುದಾಹೃತಃ[5] ।
ನಾದಬಿಂದುಯುತಂ[6] ರೂಪಂ
ಲಿಂಗಾಕಾರಮಿಹೋಚ್ಯತೇ[7] ॥ ॥ ೨೦ ॥

ಲಯಾದಿಭೇದಃ ಪ್ರಾಗುಕ್ತಃ
ಯ ಉಪಾಧೌ ಶಿವಸ್ಯ ತು ।
ಸ ಬಿಂದುರಿತಿ ಮನ್ತವ್ಯಃ[8]
ಸೈವ[9] ಕುಣ್ಡಲಿನೀ ಮತಾ ॥ ॥ ೨೧ ॥

ಪಂಚಸಾದಾಖ್ಯಮುಖವಾದ ಲಿಂಗದ ಮತ್ತು ಸಮಸ್ತತತ್ತ್ವಗಳ ಜನ್ಮಸ್ಥಲವಾದ ಪೀಠದ ಪ್ರಕಾರದಿಂದಲೂ ಕರ್ಮಸಾದಾಖ್ಯದ ಸ್ವರೂಪವು ಪ್ರಸಿದ್ಧವಾಗಿದೆ. ॥ ೧೯ ॥

ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿ ಪತಿಯೆಂದು ಪ್ರಸಿದ್ಧವಾದ ಬ್ರಹ್ಮವೇ ನಾದ. ಈ ನಾದವನ್ನು ಪಂಚಸಾದಾಖ್ಯಸ್ವರೂಪವಾದ ಲಿಂಗವೆಂದು ಭಾವಿಸಬೇಕು. ಬಿಂದುವು ಸಮಸ್ತಮಂತ್ರದೇವತಾಜನ್ಮಸ್ಥಲವಾದ ಪೀಠ. ಈ ನಾದ ಬಿಂದುಗಳಿಂದ ಕೂಡಿದ ಸ್ವರೂಪವೇ ಲಿಂಗ. ॥ ೨೦ ॥

ಹಿಂದೆ ಶಿವತತ್ತ್ವದ ಉಪಾಧಿಯಲ್ಲಿ ನಿರೂಪಿತವಾದ ಲಯಾದಿಗಳ ಅಧಿಕಾರವೆಂಬ ತ್ರಿತತ್ತ್ವಭೇದವು ಬಿಂದು. ಈ ಬಿಂದುರೂಪವಾದ ಪರಾಶಕ್ತಿಯೇ ಕುಂಡಲಿನೀ ಶಕ್ತಿ. ॥ ೨೧ ॥

---

[1] ಕರ್ಮಾಣಿ—ಡ.
[2] ವಿಜ್ಞೇಯಂ—ಡ.
[3] ಕರ್ಮಾಣಿ—ಡ.
[4] ನಾದಲಿಂಗಮಿತಿ ಜ್ಞೇಯಂ—ಖ, ಗ, ಚ, ಝ.
[5] ಹೃತಂ—ಖ, ಗ, ಚ, ಝ.
[6] ಬಿಂದುನಾದಯುತಂ—ಘ, ಛ, ಟ, ಠ, ಡ, ಢ, ತ, ಥ, ದ, ಬ.
[7] ಮಿತಿ ಸ್ಮೃತಮ್—ಖ, ಗ, ಚ, ಝ.
[8] ಮನ್ತವ್ಯಂ—ಕ, ಘ, ಛ, ಟ, ಠ, ಡ, ಢ, ತ, ಥ.
[9] ಶೈವ—ಕ, ಘ, ಛ, ಟ, ಡ, ಢ.

ಚತ್ವಾರಿ ಕರ್ತೃರೂಪಾಣಿ[1]
ಕೇವಲಂ ನಾದ ಉಚ್ಯತೇ[2] |
ಲಿಂಗಂ ಶಿವ[3] ಇತಿ ಜ್ಞೇಯಃ
ಪೀಠಂ ಶಕ್ತಿರುದಾಹೃತಾ[4] || || ೭೨ ||

ಯೋನಿಲಿಂಗ[5]ಪ್ರಕಾರೇಣ
ಜಗತ್ಸೃಷ್ಟ್ಯರ್ಥಕಾರಣಮ್ |
ತಥಾ[6] ಸಂಯೋಗಭಾವಸ್ಯ[7]
ತತ್ತ್ವಂ ಕರ್ಮೇತ್ಯುದಾಹೃತಮ್[8] || || ೭೩ ||

ಬಿಂದು ಮಧ್ಯಗತೋ ನಾದಃ[9]
ನಾದಮಧ್ಯೇ ತು ಮೂರ್ತಯಃ |

ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ ಮತ್ತು ಕರ್ತೃಸಾದಾಖ್ಯವೆಂಬ ನಾಲ್ಕು ಸಾದಾಖ್ಯಗಳನ್ನು ಮಾತ್ರ ನಾದಬ್ರಹ್ಮವೆಂದು ಕರೆಯುತ್ತಾರೆ. ನಾದಬ್ರಹ್ಮರೂಪವಾದ ಈ ಶಿವತತ್ತ್ವವನ್ನು ಲಿಂಗವೆಂದು ತಿಳಿಯಬೇಕು. ಜ್ಞಾನಶಕ್ತ್ಯಾದಿ ಚತುರ್ವಿಧಶಕ್ತಿಯು ನಾದಬ್ರಹ್ಮರೂಪಲಿಂಗಕ್ಕೆ ಪೀಠವಾಗಿದೆ. || ೭೨ ||

ಮಂತ್ರಜಾತಪಟಲದಲ್ಲಿ ಉಕ್ತವಾದ ಪೀಠಲಿಂಗಪ್ರಕಾರವಾಗಿ ಲೋಕಸೃಷ್ಟಿಗೆ ಕಾರಣವಾದ ಶಿವಶಕ್ತಿಗಳ ಅವಿನಾಭಾವಸಂಯೋಗಭಾವರೂಪವಾದ ತತ್ತ್ವವು ಕರ್ಮಸಾದಾಖ್ಯ. || ೭೩ ||

ಪರಾಶಕ್ತಿಸ್ವರೂಪವಾದ ಬಿಂದುವಿನ ಮಧ್ಯದಲ್ಲಿ ನಾದಬ್ರಹ್ಮವಾದ ಶಿವತತ್ತ್ವ

---

[1] ರೂಪಾದಿ—ಕ, ಘ, ಛ, ಟ, ಡ, ಢ, ತ, ಥ.
[2] ನಾದಮೀರಿತಂ—ಖ, ಗ, ಚ, ಝ.
[3] ಶಿವಂ—ಕ, ಗ, ಘ, ಚ, ಛ, ಟ, ಠ, ಡ, ಢ, ತ, ಥ, ಪ.
ಶಮ್ಭುಃ—ಫ.
[4] ರುದಾಹೃತಮ್—ಕ, ಖ, ಘ, ಛ, ಝ, ಟ, ಠ, ಡ, ಢ, ತ, ಥ.
[5] ನಾದಬಿಂದು—ಢ.
[6] ಸದಾ—ಫ.
[7] ಭಾವೇನ—ಖ, ಗ, ಚ, ಝ.
ಭಾವತ್ವಾತ್—ಫ.
[8] ಕರ್ಮರೂಪಮುದಾಹೃತಮ್—ಖ, ಗ, ಚ, ಝ, ಫ.
[9] ಗತಂ ನಾದಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

ಮೂರ್ತಿಮಧ್ಯಗತಂ ತತ್ತ್ವಂ
ತತ್ತ್ವಮಧ್ಯಗತಃ ಶಿವಃ ॥ ॥ ೭೪ ॥

[1]ಶಿವಮಧ್ಯಗತಂ ನೃತ್ತಂ
ನೃತ್ತಮಧ್ಯೇ ತು ಶಾಂತಕಮ್ ।
ಅತೀತಂ ಶಾಂತಮಧ್ಯೇ ತು
ಶಾಂತ್ಯತೀತಂ ಪರಾತ್ಪರಮ್ ॥ ॥ ೭೫ ॥

ಏವಂ ತತ್ತ್ವಮಯಂ[2] ಲಿಂಗಂ
ಸರ್ವತತ್ತ್ವಾಲಯಂ[3] ವಿದುಃ ।
ಲಿಂಗೇನ[4] ಜಾಯತೇ ತತ್ತ್ವಂ[5]
ಜಗತ್ ಸ್ಥಾವರಜಂಗಮಮ್ ॥ ॥ ೭೬ ॥

ವಿರುತ್ತದೆ. ಆ ಶಿವತತ್ತ್ವದ ಮಧ್ಯದಲ್ಲಿ ಶಿವಮೂರ್ತಿಭೇದಗಳಿರುತ್ತವೆ. ಆ ಶಿವ ಮೂರ್ತಿಗಳ ಮಧ್ಯದಲ್ಲಿ ಶಿವಶಕ್ತಿಗಳ ಕೂಟವಾದ ಲಿಂಗತತ್ತ್ವವಿರುತ್ತದೆ. ಆ ಲಿಂಗ ತತ್ತ್ವದ ಮಧ್ಯದಲ್ಲಿ ಮಂತ್ರರೂಪನಾದ ಶಿವನು ಇರುತ್ತಾನೆ. ॥ ೭೪ ॥

ನೃತ್ತವು ಶಿವನ ಮಧ್ಯದಲ್ಲಿರುತ್ತದೆ. ಶಾಂತಿಕಲೆಯು ನೃತ್ತದ ಮಧ್ಯದಲ್ಲಿರುತ್ತದೆ. ಎಲ್ಲ ಶಕ್ತಿಗಳನ್ನೂ ಮೀರಿ ನಿಂತ ಪರಾತ್ಪರವಾದ ಶಾಂತ್ಯತೀತ ಕಲೆಯು ಶಾಂತಿಯ ಮಧ್ಯದಲ್ಲಿರುತ್ತದೆ. ॥ ೭೫ ॥

ಹೀಗೆ ಶಿವಶಕ್ತಿಗಳ ಕೂಟವಾದ ಲಿಂಗವನ್ನು ಮಹದಾದಿ ಸಮಸ್ತ ತತ್ತ್ವಗಳಿಗೂ ಆಶ್ರಯವೆಂದು ತಿಳಿಯುತ್ತಾರೆ. ಈ ಲಿಂಗದಿಂದ ಚರಾಚರಾತ್ಮಕವಾದ ಜಗತ್ತತ್ತ್ವವು ಹುಟ್ಟುತ್ತದೆ. ॥ ೭೬ ॥

---

[1] ಈ ಪದ್ಯ ಡ, ಪ, ಪುಸ್ತಕಗಳಲ್ಲಿಲ್ಲ.

[2] ಏತಚ್ಛಿವಮಯಂ—ಖ, ಗ, ಜ, ಝ.
ಏತತ್ತತ್ತ್ವಮಯಂ—ಕ, ಘ, ಟ, ಠ, ಡ, ಢ, ತ, ಥ, ದ, ಧ, ಪ, ಬ.

[3] ತತ್ತ್ವಾಶ್ರಯಂ—ಫ.

[4] ಲಿಂಗೇ ತು—ಖ, ಗ, ಚ, ಝ.

[5] ಸರ್ವಂ—ಕ, ಗ, ಚ, ಝ.
ತತ್ರ—ಫ.

[1]ತಸ್ಮಾಲ್ಲಿಂಗಂ ವಿಶೇಷೇಣ
ಕರ್ಮರೂಪಮುದಾಹೃತಮ್ ।
ಕರ್ಮೋದಯೇ ಚ ಸೃಷ್ಟಿಃ ಸ್ಯಾತ್[2]
ಕರ್ಮಾಂತೇ ಸಂಹೃತಿರ್ಭವೇತ್ ॥ ॥ ೭೭ ॥

ಏತತ್ಕರ್ಮಸ್ವ[3]ರೂಪಂ ತು[4]
ಸೃಷ್ಟಿಸ್ಥಿತಿಲಯಾವಹಮ್[5] ।
ಪಂಚಸಾದಾಖ್ಯಮೇವೋಕ್ತಂ[6]
ಕರ್ಮಸಾದಾಖ್ಯಮುಚ್ಯತೇ[7] ॥ ॥ ೭೮ ॥

ಶಿವಸಾದಂ ವಿಶೇಷೇಣ
ಶಿವರೂಪಂ ಸಮಾಶ್ರಿತಮ್ ।

ಆದ್ದರಿಂದ ಲಿಂಗವನ್ನು ವಿಶೇಷವಾಗಿ ಕರ್ಮಸಾದಾಖ್ಯವೆಂದು ಹೇಳುತ್ತಾರೆ. ಕರ್ಮೋದಯದಲ್ಲಿ ಸಮಸ್ತ ಜಗತ್ತಿನ ಸೃಷ್ಟಿಯಾಗುತ್ತದೆ. ಕರ್ಮಾವಸಾನದಲ್ಲಿ ಸಮಸ್ತಜಗತ್ತಿನ ಸಂಹಾರವಾಗುತ್ತದೆ. ॥ ೭೭ ॥

ಈ ಕರ್ಮಸಾದಾಖ್ಯಸ್ವರೂಪವೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣ. ಈ ವರೆಗೆ ಶಿವಾದಿ ಕರ್ಮಾಂತವಾದ ಪಂಚಸಾದಾಖ್ಯಗಳನ್ನೂ ತಿಳಿಸಲಾಯಿತು. ಈಗ ಕರ್ಮಸಾದಾಖ್ಯವನ್ನು ಮತ್ತೆ ವಿವರಿಸುತ್ತೇನೆ. ॥ ೭೮ ॥

ಮಹಾಸೇನನೇ ! ಶಿವಸಾದಾಖ್ಯವು ವಿಶೇಷವಾಗಿ ಶಿವತತ್ತ್ವಸ್ವರೂಪವನ್ನೂ,

---

[1] ಈ ಅರ್ಧಪದ್ಯ ಡ, ಪ. ಪುಸ್ತಕಗಳಲ್ಲಿಲ್ಲ.
[2] ಸೃಷ್ಟಿಶ್ಚ—ಕ, ಘ, ಛ, ಟ, ಠ, ಡ, ಢ, ತ, ಪ, ಬ.
[3] ಏತತ್ಕರ್ಮೇಶ—ಚ, ಝ.
ಏತತ್ಕರ್ಮ ಚ—ಫ.
[4] ಚ—ಫ.
[5] ಲಯಾವಹಃ—ಕ.
ಲಯಾನ್ವಿತಂ—ಫ.
[6] ಖ್ಯಯೋಗೇನ—ಗ, ಚ, ಝ.
[7] ಸರ್ವಸಾದಾಖ್ಯಮುಚ್ಯತೇ—ಟ.
ಶಿವರೂಪಂ ಸಮಾಶ್ರಿತಮ್—ಫ.

[1]ಅಮೂರ್ತಂ[2] ತು[3] ಮಹಾಸೇನ |
ಶಿವಸಾದಾಖ್ಯಮಾಶ್ರಿತಮ್ || || ೭೯ ||

ಮೂರ್ತ[4]ರೂಪಂ ವಿಶೇಷೇಣ
ತ್ವಮೂರ್ತಾದಿ ಸಮಾಶ್ರಿತಮ್ |
[5]ಕರ್ತೃಸಾದಾಖ್ಯಮೇವಂ ಹಿ
ಸಮೂರ್ತಾದಿ[6] ಸಮಾಶ್ರಿತಮ್ || || ೮೦ ||

[7]ಕರ್ಮರೂಪಂ ಕ್ರಮೇಣೈವ
ಕರ್ತ್ರಾದಿ ತು ಸಮಾಶ್ರಿತಮ್ |
ಅನೇನೈವ ಪ್ರಕಾರೇಣ[8]
ಚೈಕೈಕಂ[9] ತು ಸಮಾಶ್ರಿತಮ್ || || ೮೧ ||

ಅಮೂರ್ತಸಾದಾಖ್ಯವು ಶಿವಸಾದಾಖ್ಯವನ್ನೂ ಆಶ್ರಯಿಸಿರುತ್ತದೆ. || ೭೯ ||

ಮೂರ್ತಸಾದಾಖ್ಯರೂಪವು ವಿಶೇಷವಾಗಿ ಅಮೂರ್ತಾದಿ ಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ಹೀಗೆಯೇ ಕರ್ತೃಸಾದಾಖ್ಯವು ಮೂರ್ತಾದಿಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. || ೮೦ ||

ಕರ್ಮಸಾದಾಖ್ಯರೂಪವು ಪೂರ್ವೋಕ್ತಕ್ರಮದಿಂದ ಕರ್ತ್ರಾದಿಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ಈ ಪ್ರಕಾರವಾಗಿಯೇ ಒಂದೊಂದು ಸಾದಾಖ್ಯವೂ ಪೂರ್ವ ಪೂರ್ವಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. || ೮೧ ||

---

[1] ಈ ಅರ್ಧಪದ್ಯ ಧ ಪುಸ್ತಕದಲ್ಲಿಲ್ಲ.
[2] ಅಮೂರ್ತಿಂ—ಪ.
[3] ಹಿ—ಫ.
[4] ಮೂರ್ತಿ—ಪ, ಬ.
[5] ಈ ಅರ್ಧಪದ್ಯ—ಧ, ಬ. ಪುಸ್ತಕಗಳಲ್ಲಿಲ್ಲ.
[6] ಸಮೂರ್ತ್ಯಾದಿ—ಕ, ಘ, ತ, ಥ, ಫ.
ಸ್ವಮೂರ್ತ್ಯಾದಿ—ಟ.
[7] ಈ ಅರ್ಧಪದ್ಯ ಫ. ಪುಸ್ತಕದಲ್ಲಿಲ್ಲ.
[8] ಕ್ರಮೇಣ್ಯೈವ—ಫ.
[9] ಏಕೈಕಂ—ಕ, ಘ, ಛ, ಟ, ಠ, ಡ, ದ, ಪ, ಬ.

ತಸ್ಮಾತ್ ಕರ್ಮಸ್ವ[1]ರೂಪಂ ತು
ಪಂಚತತ್ತ್ವಾ[2]ಶ್ರಿತಂ[3] ವಿದುಃ |
ಸರ್ವ[4]ತತ್ತ್ವಾತ್ಮಕಂ ಜ್ಞೇಯಂ
ತತ್ತ್ವಾ[5]ಧಾರಮಿತಿ ಸ್ಮೃತಮ್[6] || || ೮೨ ||

[7]ಏತದ್ವೈ ಕರ್ಮಸಾದಾಖ್ಯಂ
ಪಿಂಡರೂಪಮಿಹೋಚ್ಯತೇ |
ಪಿಂಡಸ್ಥಂ ಪಿಂಡಮಧ್ಯಸ್ಥಂ
ಪಿಂಡೇನ ತು ಘಟೀಕೃತಮ್[8] || || ೮೩ ||

ಆದ್ದರಿಂದ ಕರ್ಮಸಾದಾಖ್ಯಸ್ವರೂಪವು ಶಿವಸಾದಾಖ್ಯಾದಿ ಪಂಚಸಾದಾಖ್ಯ ತತ್ತ್ವಗಳನ್ನು ಆಶ್ರಯಿಸಿರುತ್ತದೆಂದು ತಿಳಿಯಬೇಕು. ಕರ್ಮಸಾದಾಖ್ಯವು ಸಮಸ್ತ ತತ್ತ್ವಗಳ ಸ್ವರೂಪವಾದುದು ಮತ್ತು ಇದು ಶಿವಾದಿ ಪೃಥಿವ್ಯಂತವಾದ ಸರ್ವತತ್ತ್ವಗಳಿಗೂ ಆಶ್ರಯ. || ೮೨ ||

ಈ ತಂತ್ರವು ಕರ್ಮಸಾದಾಖ್ಯವನ್ನು ಪಿಂಡರೂಪವಾದುದೆಂದು ನಿರೂಪಿಸುತ್ತದೆ. ಮಂತ್ರರೂಪವಾದ ಶಿವತತ್ತ್ವವು ಈ ಕರ್ಮಸಾದಾಖ್ಯಲಿಂಗತತ್ತ್ವದಲ್ಲಿರುವುದರಿಂದ ಪಿಂಡವೆನಿಸುತ್ತದೆ. ಮೂರ್ತಿರೂಪವಾದ ಪಿಂಡಮಧ್ಯದಲ್ಲಿರುವುದರಿಂದ ಇದು ಪಿಂಡಮಧ್ಯಸ್ಥವೆನಿಸುತ್ತದೆ. ಮೊದಲೇ ಇದ್ದ ಮಣ್ಣಿನಿಂದ ಘಟವಾಗುವಂತೆ ಇದು ಪೂರ್ವಪಿಂಡದಿಂದ ಆವಿರ್ಭಾವಗೊಳ್ಳುತ್ತದೆ. || ೮೩ ||

---

[1] ಕರ್ಮೇಶ—ಝ.
[2] ಪಂಚಮೂರ್ತಿ— ಘ.
[3] ಶ್ರಯಂ—ದ.
[4] ಪಂಚ—ಖ, ಗ, ಚ, ಝ.
[5] ಸರ್ವಾ— ಖ, ಗ, ಚ, ಝ.
[6] ಸಮಾಶ್ರಿತಂ—ಕ, ಖ, ಗ, ಘ, ಚ, ಛ, ಝ.
[7] ಏತಸ್ವೈ ಮೂರ್ತಿಪಿಂಡತ್ವಾತ್ ಪಿಂಡಕಾಯುಮಿತಿ ಸ್ಮೃತಮ್—ಖ, ಗ, ಝ.
ಏತದ್ವೈ ಮೂರ್ತಿಪಿಂಡತ್ವಾತ್ ಪಿಂಡಕಾರ್ಯಮಿತಿ ಸ್ಮೃತಮ್—ಚ.
[8] ಪುಟೀಕೃತಂ— ಖ, ಗ, ಚ, ಝ.

ಪಿಂಡೇನ ಪಿಂಡಿತಂ ಪಿಂಡಂ
ಪಿಂಡರೂಪಮುದಾಹೃತಮ್ ।

[1]ಅತೀತಕಾಲೇ ಮೃತ್ಪಿಂಡಂ
ರೂಪಂ ಕುಂಭೇ ವ್ಯವಸ್ಥಿತಮ್ ॥ ॥ ೬೪ ॥

ಪಂಚಾತ್ಮಕಮಭೂತ್ ಪಿಂಡಂ
ಧಾತುಬದ್ಧಗುಣಾತ್ಮಕಮ್ ।
[2]ತಸ್ಯಾದ್ವೈವ ಕರ್ಮಸಾದಾಖ್ಯಂ
ಪಿಂಡರೂಪಮುದಾಹೃತಮ್ ॥ ॥ ೬೫ ॥

[3]ಏತಚ್ಛಿವಮಯಂ ಪಿಂಡಂ
ಸರ್ವತತ್ತ್ವಾಲಯಂ[4] ವಿದುಃ

ಈ ಕರ್ಮಸಾದಾಖ್ಯತತ್ತ್ವವು ಮೊದಲೇ ಇದ್ದ ಕ್ರಿಯಾಶಕ್ತಿರೂಪವಾದ ಪಿಂಡದಿಂದ ಪಿಂಡರೂಪವನ್ನು ಪಡೆದಿದೆ. ಅಲ್ಲದೇ ಇದು ಶಿವಾದಿ ಪೃಥಿವ್ಯಂತವಾದ ಸಮಸ್ತ ತತ್ತ್ವಗಳಿಗೆ ತಾನೂ ಪಿಂಡವಾಗಿದೆ. ಆದ್ದರಿಂದ ಈ ಕರ್ಮಸಾದಾಖ್ಯವನ್ನು ಪಿಂಡವೆಂದು ಹೇಳುತ್ತಾರೆ. ಹಿಂದೆ ಮಣ್ಣುಮುದ್ದೆಯಾಗಿದ್ದುದೇ ಘಟಾಕಾರವಾಗಿ ಪರಿಣಮಿಸುವಂತೆ ಈ ಕರ್ಮಸಾದಾಖ್ಯವು ಪೂರ್ವಪಿಂಡದಿಂದ ರೂಪು ಪಡೆಯುತ್ತದೆ. ॥ ೬೪ ॥

ರಕ್ತಾದಿ ಸಪ್ತಧಾತುಗಳಿಂದ ಪಡೆದ ಗುಣವನ್ನುಳ್ಳ ಪೃಥಿವ್ಯಾದಿ ಪಂಚಮಹಾಭೂತಗಳ ಸ್ವರೂಪವು ಸೃಷ್ಟಿಸಮಯದಲ್ಲಿ ಪಿಂಡವಾಗುತ್ತದೆ. ಆದ್ದರಿಂದ ಕರ್ಮಸಾದಾಖ್ಯತತ್ತ್ವವನ್ನು ಪಿಂಡರೂಪವಾದುದೆಂದು ಹೇಳುತ್ತಾರೆ. ॥ ೬೫ ॥

ಈ ಶಿವಲಿಂಗತತ್ತ್ವಾತ್ಮಕವಾದ ಪಿಂಡವನ್ನು ಸರ್ವತತ್ತ್ವಗಳಿಗೂ ಆಶ್ರಯ

---

[1] ಈ ಅರ್ಧಪದ್ಯ—ಗ, ಚ, ಝ. ಪುಸ್ತಕಗಳಲ್ಲಿಲ್ಲ.

[2-3] ಈ ಅರ್ಧಪದ್ಯ—ಡ, ಧ ಪುಸ್ತಕಗಳಲ್ಲಿಲ್ಲ.

[4] ಶ್ರಯಂ—ಫ.

ಪಂಚಮೂರ್ತಿಮಯಂ ದೇಹಂ[1]
ಪಂಚತತ್ತ್ವಾತ್ಮಕಂ ಭವೇತ್ ॥ ॥ ೮೬ ॥

ಮೂರ್ತೀನಾಂ[2] ದೇಹಭೇದೈಶ್ಚ[3]
ಗುಣೈಃ ಪಂಚಾನನಂ ವಿದುಃ[4] ।
[5]ತತ್ತದ್ಧೇತು[6]ಮಹೇಶಾದಿ-
ಸರ್ವತತ್ತ್ವಸಮುದ್ಭವಃ[7] ॥ ॥ ೮೭ ॥

[8]ತಸ್ಯ ವಕ್ತ್ರೇಷು[9] ಸಮ್ಭೂತಾಃ
ಸಿದ್ಧಾಂತಾಃ ಶೈವತಂತ್ರಕಾಃ[10] ।
ತತ್ತ್ವಾರ್ಥೇ ತು ಮಹೇಶಾದಿ-
ಸರ್ವತತ್ತ್ವಸಮುದ್ಭವಃ ॥ ॥ ೮೮ ॥

ವೆಂದು ತಿಳಿಯುತ್ತಾರೆ. ಪಂಚಮೂರ್ತಿಸ್ವರೂಪವಾದ ಈ ಕರ್ಮಸಾದಾಖ್ಯ ಪಿಂಡವು ಪಂಚತತ್ತ್ವಸ್ವರೂಪವುಳ್ಳದ್ದು. ॥ ೮೬ ॥

ಇದನ್ನು ಮಹೇಶಾದಿಮೂರ್ತಿಗಳ ದೇಹಭೇದ ಮತ್ತು ಗುಣಭೇದಗಳಿಂದ ಐದು ಮುಖಗಳನ್ನುಳ್ಳದ್ದೆಂದು ತಿಳಿಯುತ್ತಾರೆ. ಈ ಕರ್ಮಸಾದಾಖ್ಯದಿಂದಲೇ ಆಯಾಯಾ ಕಾರಣದಿಂದ ಮಹೇಶ್ವರ ಚಂದ್ರಧರಾದಿ ಸರ್ವತತ್ತ್ವಗಳ ಪ್ರಾದುರ್ಭಾವವಾಗುತ್ತದೆ. ॥ ೮೭ ॥

ಈ ತತ್ತ್ವದ ಮುಖಗಳಿಂದ ಶೈವತಂತ್ರಗಳೆಂಬ ಸಿದ್ಧಾಂತಗಳು ಹುಟ್ಟಿದವು. ಈ ತತ್ತ್ವದಿಂದಲೇ ಮಹೇಶಾದಿ ಸರ್ವತತ್ತ್ವಗಳು ಪ್ರಾದುರ್ಭವಿಸುತ್ತವೆ. ॥ ೮೮ ॥

---

[1] ದೇವಂ— ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ.

[2] ಮೂರ್ತಾನಾಂ—ಟ, ಬ.

[3] ಭೇದಸ್ತು—ಠ, ಭೇದೈಸ್ತು—ಖ, ಗ, ಚ, ಝ.

[4] ನೈರ್ಯುತಂ—ಕ, ಠ, ಪ.

[5] ಈ ಅರ್ಧಪದ್ಯ—ಢ, ಧ. ಪುಸ್ತಕಗಳಲ್ಲಿಲ್ಲ.

[6] ತದ್ದೇಹಂ ತು—ಖ, ಗ, ಚ, ಝ.

[7] ತತ್ತ್ವಾದಿಸಂಭವಃ—ಖ, ಗ, ಚ, ಝ.

[8] ಈ ಪದ್ಯ—ಕ, ಘ, ಛ, ಟ, ಠ, ತ, ಥ. ಪುಸ್ತಕಗಳಲ್ಲಿಲ್ಲ.

[9] ವಕ್ತ್ರೇ ತು—ಫ.

[10] ಸಿದ್ಧಾಂತಾದೀತಿ ಸಂಜ್ಞಿಕಾಃ—ಫ. ಸಿದ್ಧಾಂತಾಃ ಶೈವತಾಂತ್ರಿಕಾಃ—ಖ, ಗ, ಚ, ಝ.

ಸರ್ವಜ್ಞಾನಮಯಂ ದೇವಂ[1]
ಸರ್ವಕಾರಣಕಾರಣಮ್ ।
ಏವಂ ಲಿಂಗೇ ತು[2] ಕರ್ಮೇಶಂ
ಧ್ಯಾಯೇತ್ ಸಕಲನಿಷ್ಕಲಮ್ ॥ ॥ ೮೯ ॥

ದೇಹಸ್ಥಂ ಸಕಲಂ ಜ್ಞೇಯಂ
ನಿಷ್ಕಲಂ ದೇಹವರ್ಜಿತಮ್[3] ।
ದೇಹಸ್ಯ ತತ್ಕಲಾಭೇದಃ
ಧಾತುಪಿಂಡ ಇತಿ ಸ್ಮೃತಃ[4] ॥ ॥ ೯೦ ॥

ಷಟ್ಕಲಾಶ್ಚೈವ ಶಾಸ್ತ್ರಜ್ಞಃ[5]
ಷಡಂಗೇಷು[6] ಪ್ರಕಲ್ಪಯೇತ್
ಸರ್ವಾಂಗೈರಪಿ[7] ಸಮ್ಪೂರ್ಣಂ
ಸರ್ವಾವಯವಸುಂದರಮ್[8] ॥ ॥ ೯೧ ॥

ಹೀಗೆ ಶಿವಲಿಂಗದಲ್ಲಿಯೇ ಸಮಸ್ತಜ್ಞಾನಸ್ವರೂಪನೂ, ಸಮಸ್ತಕಾರಣಗಳಿಗೆ ಕಾರಣನೂ, ಸಕಲನಿಷ್ಕಲಸ್ವರೂಪನೂ ಆದ ಈಶಾನ (ಕರ್ಮೇಶ) ಮಹಾದೇವನನ್ನು ಧ್ಯಾನಿಸಬೇಕು. ॥ ೮೯ ॥

ಮಹೇಶಾದಿದೇಹವುಳ್ಳ ಶಿವತತ್ತ್ವವನ್ನು ಸಕಲವೆಂದೂ, ದೇಹರಹಿತವಾದ ಪರಾತ್ಪರತತ್ತ್ವವನ್ನು ನಿಷ್ಕಲವೆಂದೂ ತಿಳಿಯಬೇಕು. ಲೀಲಾಮೂರ್ತಿಗಳಿಗೆ ಪರಾಶಕ್ತಿಯ ಸಂಬಂಧಿಗಳಾದ ಶಾಂತ್ಯತೀತಾದಿ ಕಲೆಗಳ ಭೇದವು ರಕ್ತಾದಿ ಧಾತುಪಿಂಡವೆಂದು ಸ್ಮರಿಸಲ್ಪಡುತ್ತದೆ. ॥ ೯೦ ॥

ಶಿವತಂತ್ರಜ್ಞನು ಶಾಂತ್ಯತೀತಾದಿ ಆರು ಕಲೆಗಳನ್ನು ಹೃದಯಾದಿ ಅಸ್ತ್ರಾಂತವಾದ ಆರು ಶಿವಾಂಗಗಳಲ್ಲೂ ಭಾವಿಸಬೇಕು. ಲೀಲಾಮೂರ್ತಿಯು ಸಮಸ್ತ ಅಂಗಗಳಿಂದ ಸಂಪೂರ್ಣವೂ ಸುಂದರವೂ ಆಗಿರುತ್ತದೆ. ॥ ೯೧ ॥

---

[1] ದೇಹಂ—ಪ.

[2] ಲಿಂಗಂ ತು—ಖ, ಗ, ಚ, ಝ.

[3] ದೇಹಸ್ಥಃ ಸಕಲೋ ಜ್ಞೇಯಃ ನಿಷ್ಕಲೋ ದೇಹವರ್ಜಿತಃ—ಡ.

[4] ದೇಹಸ್ತ್ವೇತತ್ಕಲೋಪೇತಂ ಧಾತುಪಿಂಡಮಿತಿ ಸ್ಮೃತಮ್—ಖ, ಗ, ಚ, ಝ.

[5] ಧಾತ್ರೀಶ್ಚ—ಖ, ಗ, ಚ, ಝ.

[6] ಷಡಂಗೇ ತು—ಪ, ಷಡಂಗೈಸ್ತು—ಖ, ಗ, ಚ, ಝ, ಷಡಂಗೈಶ್ಚ—ಧ.

[7] ಸರ್ವಾಂಗಾನಿ ಚ—ಕ, ಛ, ಟ, ಠ, ಡ, ಢ, ತ, ಥ, ದ, ಪ, ಫ.

[8] ಸಂಯುತಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ.

[1]ಏವಂ ತತ್ಸ್ಮೃತಿ[2]ಮಾತ್ರೇಣ
ಮೂರ್ತಿಃ[3] ಸಕಲರೂಪಧೃತ್[4] ।
ನಿಷ್ಕಲಂ ತದಭಾವೇ ತು[5]
ತಸ್ಮಾತ್[6] ಸಕಲನಿಷ್ಕಲಮ್ ॥ ॥ ೯೨ ॥

ಸವೀರ್ಯಂ ಚೈವ[7] ನಿರ್ದೇಹಂ
ಮಾಂಸಾಸ್ಥಿರುಧಿರಂ ನ ಚ[8] ।
ಇಂದ್ರಚಾಪಮಿವಾಕಾಶೇ
ದರ್ಪಣೇ ಪ್ರತಿಬಿಂಬವತ್ ॥ ॥ ೯೩ ॥

[9]ಇತ್ಯೇತನ್ಮನಸಾಽಽಕಲ್ಪ್ಯ
ಸಕಲಂ ನಿಷ್ಕಲಂ ಭವೇತ್ ।

ಹೀಗೆ ಸರ್ವಾವಯವಗಳ ಸ್ಮರಣಮಾತ್ರದಿಂದ ಕರ್ಮೇಶತತ್ತ್ವವು ಸಕಲಕಲೆಗಳನ್ನುಳ್ಳ ಸಾಕಾರಮೂರ್ತಿಯಾಗುತ್ತದೆ. ಅವಯವಸ್ಮರಣೆಯು ಇಲ್ಲವಾದರೆ ಅದ ನಿಷ್ಕಲತತ್ತ್ವವಾಗುತ್ತದೆ. ಆದ್ದರಿಂದ ಕರ್ಮೇಶತತ್ತ್ವವು ಸಕಲ–ನಿಷ್ಕಲತತ್ತ್ವವೆನಿಸುತ್ತದೆ. ॥ ೯೨ ॥

ಈ ಕರ್ಮೇಶತತ್ತ್ವವು ವೀರ್ಯವುಳ್ಳದ್ದಾದರೂ ದೇಹರಹಿತವಾದುದು ಮತ್ತು ಮಾಂಸ ಮೂಳೆ ರಕ್ತಗಳಿಲ್ಲದ್ದು. ಇದು ಗಗನದಲ್ಲಿ ಮೂಡುವ ಕಾಮನ ಬಿಲ್ಲಿನಂತೆ ಯೋಗಿಗಳ ಹೃದಯಾಕಾಶದಲ್ಲಿಯೂ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಯೋಗಿಗಳ ಧ್ಯಾನದರ್ಪಣದಲ್ಲಿಯೂ ತೋರುತ್ತದೆ. ॥ ೯೩ ॥

ಹೀಗೆ ಮನಸ್ಸಿನಲ್ಲಿ ಕಲ್ಪಿಸಿಕೊಂಡ ಈ ಕರ್ಮೇಶತತ್ತ್ವವು ಸಕಲವೂ ನಿಷ್ಕಲವೂ

---

[1] ಈ ಪದ್ಯ—ಡ, ಪ. ಪುಸ್ತಕಗಳಲ್ಲಿಲ್ಲ.
[2] ಏವಂ ತು ಸ್ಮೃತಿ—ಫ, ಏತತ್ ಸಂಸ್ಕೃತಿ—ಧ.
[3] ಮೂರ್ತಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಬ.
[4] ಧೃಕ್—ಖ, ಗ, ಚ, ಝ.
[5] ತದಭಾವೇನ—ಫ.
[6] ತತ್ ಸ್ಯಾತ್—ಖ, ಗ, ಚ, ಝ.
[7] ವೈ ಚ—ಕ, ಟ, ಠ, ಪ.
[8] ರುಧಿರಾಣಿ ಚ—ಖ, ಗ, ಚ, ಝ.
[9] ಈ ಪದ್ಯ—ಡ, ಪ, ಪುಸ್ತಕಗಳಲ್ಲಿಲ್ಲ.

ಧ್ಯಾನಲಕ್ಷಣಮಿತ್ಯುಕ್ತಂ[1]
ಅಂಗಭೇದಸ್ತ್ವಥೋಽಚ್ಯತೇ[2] ॥ ॥ ೯೪ ॥

ಅಂಗಭೇದೋ[3] ಮಹಾಸೇನ !
ಚತುರ್ಭಿರ್ಭೇದ[4] ಉಚ್ಯತೇ[5] ।
ಅಙ್ಗಂ ಪ್ರತ್ಯಙ್ಗಸಾಙ್ಗಂ ಚೋ-
ಪಾಙ್ಗಂ ಚತ್ವಾರಿ ಚ ಕ್ರಮಾತ್ ॥ ॥ ೯೫ ॥

ಶಿರೋ ವಕ್ತ್ರಂ ಚ ಹೃದಯಂ
ಅಂಗಂ ಚೇತಿ ಪ್ರಕೀರ್ತಿತಮ್ ।
ಮಧ್ಯಃ ಕಣ್ಠಃ ತಥಾ ಬಾಹೂ
ನಾಭಿಃ ಗುಹ್ಯೋದರಂ ತಥಾ[6] ॥ ॥ ೯೬ ॥

ನೇತ್ರೇ ಚ ನಾಸಾ ಕರ್ಣೌ ಚ
ಪಾಣೀ ಪಾದೌ[7] ತಥಾಽಙ್ಗುಲಿಃ ।

ಆಗುತ್ತದೆ. ಇದು ಕರ್ಮೇಶತತ್ತ್ವದ ಧ್ಯಾನಸ್ವರೂಪವು. ಇನ್ನು ಅಂಗಭೇದವನ್ನು ನಿರೂಪಿಸುತ್ತೇವೆ. ॥ ೯೪ ॥

ಎಲೈ ಷಣ್ಮುಖನೇ! ಅಂಗಭೇದವು—ಅಂಗ, ಪ್ರತ್ಯಂಗ, ಸಾಂಗ ಮತ್ತು ಉಪಾಂಗವೆಂದು ಕ್ರಮವಾಗಿ ನಾಲ್ಕುವಿಧವಾಗಿರುತ್ತದೆ. ॥ ೯೫ ॥

ಶಿರಸ್ಸು, ಮುಖ, ಹೃದಯಗಳನ್ನು ಅಂಗವೆಂದು ಕರೆಯುತ್ತಾರೆ. ॥ ೯೬ ॥

ಸೊಂಟ ಕುತ್ತಿಗೆ ತೋಳು ಹೊಕ್ಕಳು ಗುಹ್ಯಸ್ಥಾನ ಹೊಟ್ಟೆ ಕಣ್ಣು ಮೂಗು ಕಿವಿ ಕಾಲು ಬೆರಳು ತೊಡೆ ಮಂಡಿ ಕಣಕಾಲುಗಳನ್ನು ಪ್ರತ್ಯಂಗವೆಂದು ಹೇಳುತ್ತಾರೆ. ॥ ೯೭ ॥

---

[1] ಮೇವೋಕ್ತಂ—ಪ, ಫ.

[2] ಅಂಗಭಾವಮಥೋಽಚ್ಯತೇ—ಖ, ಗ, ಚ, ಝ.

[3] ಭೇದಂ—ಕ, ಘ, ಛ, ಟ, ಠ, ಢ, ತ, ಥ, ಪ.

[4] ರ್ಭೇದಂ—ಕ, ಘ, ಛ, ಟ, ಠ, ಢ, ತ, ಥ, ಪ.

[5] ಅಂಗಭೇದಮಿದಂ ಪ್ರೋಕ್ತಂ ತಚ್ಚತುರ್ವಿಧಮುಚ್ಯತೇ—ಫ.

[6] ವಕ್ಷಃ ಕಣ್ಠಸ್ತನೌ ಬಾಹುನಾಭಿಗುಹ್ಯೋದರಾಣಿ ಚ—ಖ, ಗ, ಚ, ಝ.

[7] ಪಾಣಿಪಾದೌ—ಖ, ಗ, ಚ, ಝ.

ಊರೂ ಚ ಜಾನುಜಂಘೆ ಚ
ಪ್ರತ್ಯಂಗಂ ಚೇತಿ ಕೀರ್ತಿತಮ್[1] ॥ ॥ ೯೭ ॥

ಮೂರ್ತಂ ಚ[2] ಗುಣರೂಪಂ ಚ[3]
ಸಾಂಗಂ ಚೇತಿ ಪ್ರಕೀರ್ತಿತಮ್ ।
ಗುಣಚಿಹ್ನ[4]ಮಿತಿ ಜ್ಞೇಯಂ
ತದ್ಗುಣೋ ದಶಧಾ[5] ಭವೇತ್ ॥ ॥ ೯೮ ॥

ತ್ರಿಗುಣಂ ಕರ್ತೃ ಪ್ರತಾಪಂ[6]
ದುರ್ಭೇದ್ಯೋಽನುಗ್ರಹಸ್ತಥಾ[7] ।
ವಿಧಿರ್ಮಾಯಾ ವಿವರ್ಣಂ ಚ
ವರ್ಣಂ[8]ಸಂಹಾರ ಏವ ಚ ॥ ॥ ೯೯ ॥

ಆಕಾರಗೊಂಡ ಗುಣಗಳನ್ನು ಸಾಂಗವೆಂದು ಹೇಳುತ್ತಾರೆ. ಇನ್ನು ಗುಣಗಳ ಸ್ವರೂಪವನ್ನು ಹೇಳುತ್ತೇನೆ. ಶಿವತತ್ತ್ವವನ್ನು ಆಶ್ರಯಿಸಿದ ಆ ಗುಣವು ಹತ್ತು ವಿಧ. ॥ ೯೮ ॥

ಗುಣತ್ರಯ ಕರ್ತೃ ಪ್ರತಾಪ ದುರ್ಭೇದ್ಯ ಅನುಗ್ರಹ ವಿಧಿ ಮಾಯೆ ವಿವರ್ಣ ವರ್ಣ ಮತ್ತು ಸಂಹಾರ ಇವು ಹತ್ತು ಗುಣಗಳು. ಇನ್ನು ಅವುಗಳ ಲಕ್ಷಣವನ್ನು ಹೇಳುತ್ತೇನೆ :— ॥ ೯೯ ॥

---

[1] ಚೇತಿ ಚೇಷ್ಯತೇ—ಫ.
[2] ಮೂರ್ತಿನಾ—ಖ, ಗ, ಚ, ಝ.
ಮೂರ್ತಿಂ ಚ—ಪ.
[3] ತು—ಫ.
[4] ಗುಣಭಿನ್ನ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಬ.
[5] ಣಸ್ತು ತಥಾ—ಕ, ಘ, ಟ, ಠ, ಡ, ಢ, ತ, ಥ, ದ, ಧ, ಬ.
[6] ತ್ರಿಗುಣಂ ಶಕ್ತಿಖಂಡಂ ಚ—ಖ, ಗ, ಚ, ಝ,
ತ್ರಿಗುಣಂ ಕರ್ತೃಪ್ರತಾಪಶ್ಚ—ದ.
[7] ದುರ್ಭೇದ್ಯಾನುಗ್ರಹಂ ತಥಾ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.
[8] ವರ್ಣಾಃ—ಖ, ಗ, ಚ, ಝ.

ಏತೇ ದಶಗುಣಾಃ ಪ್ರೋಕ್ತಾಃ
ತೇಷಾಂ ಲಕ್ಷಣಮುಚ್ಯತೇ ।
ತ್ರಿಗುಣಂ ಶೂಲಮಿತ್ಯುಕ್ತಂ
ಕರ್ತಾ ಪರಶುರುಚ್ಯತೇ[1] ॥ ॥ ೧೦೦ ॥

ಖಡ್ಗಸ್ತ್ವೀಶ[2]ಪ್ರತಾಪಃ[3] ಸ್ಯಾತ್
ದುರ್ಭೇದ್ಯೋ ವಜ್ರಮಿಷ್ಯತೇ ।
ಈಶಸ್ಯಾನುಗ್ರಹಶ್ಚೈವ[4]
ತ್ವಭಯಂ ತು ಪ್ರಶಸ್ಯತೇ ॥ ॥ ೧೦೧ ॥

ವಿಧಿಃ[5] ಸ್ಯಾತ್ ನಾಗರೂಪಂ ತು
ಪಾಶೋ ಮಾಯಾಸ್ವರೂಪಕಃ[6] ।
ವಿವರ್ಣಮಙ್ಕುಶಂ[7] ಚೈವ
ವರ್ಣಂ ನಾದಾತ್ಮಕಂ[8] ವಿದುಃ ॥ ॥ ೧೦೨ ॥

ಪರಮೇಶ್ವರನಿಂದ ಸಂಭೂತವಾದ ಸತ್ತ್ವರಜಸ್ತಮೋರೂಪವಾದ ಮೂರು ಗುಣಗಳನ್ನು ತ್ರಿಶೂಲವೆಂದು ಹೇಳುತ್ತಾರೆ. ಭವಾರಣ್ಯವನ್ನು ಕತ್ತರಿಸುವ ಕರ್ತೃಗುಣವು ಕೊಡಲಿ. ॥ ೧೦೦ ॥

ಪರಮೇಶ್ವರನ (ಕರ್ಮೇಶನ) ದುಷ್ಟರನ್ನು ದಂಡಿಸುವ ಪ್ರತಾಪವು ಖಡ್ಗ. ದುರ್ಭೇದ್ಯಗುಣವು ವಜ್ರಾಯುಧ. ಅವನ ಅನುಗ್ರಹಗುಣವು ಅಭಯಮುದ್ರೆಯೆನಿಸುತ್ತದೆ. ॥ ೧೦೧ ॥

ಪರಮೇಶ್ವರನ ನಿಯತಿಗುಣವು ಸರ್ಪರೂಪವನ್ನು ಧರಿಸುತ್ತದೆ. ಪಾಶವು ಮಾಯಾಗುಣದ ಸ್ವರೂಪ. ಬರೆಯಲಾಗದ ಮೇಘಾದಿಗಳ ಧ್ವನಿಯು ವಿವರ್ಣ. ಇದನ್ನು ಅಂಕುಶವೆಂದು ತಿಳಿಯುತ್ತಾರೆ. ಬರೆಯಬಹುದಾದ ವರ್ಣವನ್ನು ನಾದವೆಂದು ಭಾವಿಸುತ್ತಾರೆ. ॥ ೧೦೨ ॥

---

[1] ಶಕ್ತಿಃ ಪರಶುರೀರಿತಃ—ಖ, ಗ, ಚ, ಝ.

[2] ಖಡ್ಗಂ ತ್ವೀಶ—ಖ, ಗ, ಚ, ಝ.

[3] ಪ್ರತಾಪಂ—ಕ, ಘ, ಠ, ದ, ಪ. ಬ.

[4] ನುಗ್ರಹಂ ಚೈವ--ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಫ, ಬ.

[5] ಋದ್ಧಿಃ—ಫ.

[6] ಪಾಶಂ ಮಾಯಾಸ್ವರೂಪಕಂ—ಕ, ಖ, ಗ, ಚ, ಛ, ಝ, ಟ, ಠ, ಡ, ತ, ಥ, ಫ.

[7] ಮಙ್ಗಲಿಂ—ಡ.

[8] ಸಾದಾತ್ಮಕಂ—ಖ, ಗ, ಚ, ಛ.

ಸಂಹಾರಸ್ತ್ವಗ್ನಿರೂಪಃ[1] ಸ್ಯಾತ್
ತೇಷಾಂ ಆಖ್ಯಾಃ ಪ್ರಕೀರ್ತಿತಾಃ[2] ।
ಏತಾನಿ ಗುಣರೂಪಾಣಿ[3]
ಸಾಂಗಾನಿ ಚ ಯಥಾಕ್ರಮಮ್[4] ॥ ॥ ೧೦೩ ॥

ವಸ್ತ್ರೋಪವೀತಮಾಲ್ಯಾನಿ[5]
ಗಂಧಾಶ್ಚಾಭರಣಂ[6] ತಥಾ[7] ।
ತಥೈವಾವರಣಂ[8] ಚೈವ
ಹ್ಯುಪಾಂಗಂ ಚೇತಿ ಕೀರ್ತಿತಮ್[9] ॥ ॥ ೧೦೪ ॥

[10]ಅಂಗಭೇದಸ್ತ್ವಿತಿ ಪ್ರೋಕ್ತಃ[11]
ತತ್ಸ್ವರೂಪ[12]ಮಿಹೋಚ್ಯತೇ ।

ಸಕಲಜಗತ್ತನ್ನು ಸಂಹರಿಸುವ ಗುಣವು ಶಿವನ ಹಸ್ತದಲ್ಲಿರುವ ಅಗ್ನಿಯು. ಈ ದಶಗುಣಗಳನ್ನು ಸಾಂಗಗಳೆಂದು ಕರೆಯುತ್ತಾರೆ. ॥ ೧೦೩ ॥

ವಸ್ತ್ರ ಉಪವೀತ ಮಾಲ್ಯ ಗಂಧ ಆಭರಣ ಮತ್ತು ಆವರಣಗಳನ್ನು ಉಪಾಂಗವೆಂದು ಹೇಳುತ್ತಾರೆ. ॥ ೧೦೪ ॥

ಹೀಗೆ ಅಂಗಭೇದವು ಉಕ್ತವಾಯಿತು. ಈಗ ಧ್ಯಾನಾರ್ಹ ಸದಾಶಿವನ ಸ್ವರೂಪ

---

[1] ಸಂಹಾರಮಗ್ನಿರೂಪಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ.
[2] ಯೇಷಾಂ ನಾಮಾನಿ ಕೀರ್ತಿತಾಃ—ಕ, ಘ, ಛ, ಭ, ಟ,
ಪಾಶಾನಾಂ ಭಸ್ಮಸಾತ್ಕೃತಿಃ ಖ. (ಪಾ),
ಪಾಶಾನಾಂ ಭಸ್ಮಸಾತ್ಕೃತಂ—ಫ.
[3] ಏತೇ ವೈ ಗುಣರೂಪಂ ಚ—ಫ.
[4] ಸಾಂಗಶ್ಚೇತಿ ಪ್ರಕೀರ್ತಿತಃ—ಫ.
[5] ವಸ್ತ್ರೋಪವೀತಮಾಲ್ಯಂ ಚ—ಕ, ಘ, ಡ.
ವಸ್ತ್ರೋಪವೀತಂ ಮಾಲ್ಯಂ ಚ—ಟ, ಠ, ತ, ದ.
[6] ಗಂಧಮಾಭರಣಂ—ಕ, ಗ, ಘ, ಛ, ಟ, ಢ, ದ, ಧ, ಪ, ಫ.
[7] ಯಥಾ—ಕ, ಢ, ತ, ದ, ಬ.
[8] ಆಧೈವಾವರಣಂ—ಧ. ಆಸನಾವರಣಂ --ಫ.
[9] ಹ್ಯುಪಾಂಗಂ ಪ್ರೋಚ್ಯತೇಽಪಿ ಚ—ಖ, ಗ, ಜ, ಝ,
ಹ್ಯುಪಾಂಗಂ ಚೇತಿ ಪ್ರೋಚ್ಯತೇ—ಕ, ಘ, ಛ, ಠ, ಢ, ತ, ಥ, ದ, ಪ, ಬ.
[10] ಈ ಅರ್ಧಪದ್ಯ—ಡ. ಪುಸ್ತಕದಲ್ಲಿಲ್ಲ.
[11] ಅಂಗಭೇದಮಿತಿ ಪ್ರೋಕ್ತಂ—ಖ, ಗ, ಜ, ಝ.
ಅಂಗಭೇದಮಿದಂ ಪ್ರೋಕ್ತಂ—ಕ, ಘ, ಚ, ಠ, ಢ, ತ, ಥ, ದ, ಪ, ಬ.
[12] ತಸ್ಯ ರೂಪ—ಖ, ಗ, ಜ, ಝ.

ಕುಂದೇಂದುಸ್ಫಟಿಕಾ[1]ಭಾಸಂ
ಜಟಾಮುಕುಟಮಣ್ಡಿತಮ್ ॥ ॥ ೧೦೫ ॥

ಪಂಚಮೂರ್ಧ[2]ಸಮಾಯುಕ್ತಂ
ಪಂಚವಕ್ತ್ರಸಮಾಯುತಮ್ ।
[3]ಪ್ರತಿವಕ್ತ್ರಂ[4] ವಿಶೇಷೇಣ
ತ್ರಿಲೋಚನಸಮಾಯುತಮ್ ॥ ॥ ೧೦೬ ॥

ದಿಗ್ಭುಜಂ ತು ಮಹಾಸೇನ !
ದ್ವಿಪಾದಂ ಪದ್ಮಸಂಸ್ಥಿತಮ್ ।
ಶೂಲಂ ಪರಶುಖಡ್ಗೌ ಚಾ-
ಭಯವಜ್ರೇ[5] ಚ ದಕ್ಷಿಣೇ ॥ ॥ ೧೦೭ ॥

ನಾಗಂ ಪಾಶಾಂಕುಶಂ ಚೈವ
ಘಂಟಾಂ ವಹ್ನಿಂ ಚ ವಾಮಕೇ ।

ವನ್ನು ನಿರೂಪಿಸುತ್ತೇನೆ. ಎಲೈ ಷಣ್ಮುಖನೇ ! ಕುಂದಕುಸುಮ, ಚಂದ್ರ ಮತ್ತು ಸ್ಫಟಿಕಗಳ ಕಾಂತಿಯುನ್ನುಳ್ಳ ಜಟಾಕಿರೀಟದಿಂದ ಅಲಂಕೃತವಾದ,— ॥ ೧೦೫ ॥

ಪಂಚಶಿರಸ್ಸುಗಳನ್ನೂ ಪಂಚಮುಖಗಳನ್ನೂ ಹೊಂದಿ ಪ್ರತಿಮುಖದಲ್ಲಿ ಮೂರು ಕಣ್ಣುಗಳನ್ನುಳ್ಳ, — ॥ ೧೦೬ ॥

ಹತ್ತು ಭುಜ ಮತ್ತು ಎರಡು ಪಾದಗಳನ್ನುಳ್ಳ ಪದ್ಮಾಸನಸ್ಥವಾಗಿರುವ, ಬಲಗೈಗಳಲ್ಲಿ ತ್ರಿಶೂಲ ಪರಶು (ಕೊಡಲಿ), ಖಡ್ಗ, ಅಭಯಮುದ್ರೆ ಮತ್ತು ವಜ್ರಾಯುಧಗಳನ್ನೂ, ॥ ೧೦೭ ॥

ಎಡಗೈಗಳಲ್ಲಿ ಸರ್ಪ ಪಾಶ ಅಂಕುಶ ಘಂಟೆ ಮತ್ತು ಅಗ್ನಿಗಳನ್ನು ಧರಿಸಿರುವ ಸಮಸ್ತಲಕ್ಷಣಗಳಿಂದ ಕೂಡಿರುವ ಸಕಲ ಆಭರಣಗಳಿಂದ ಅಲಂಕೃತವಾದ,— ॥ ೧೦೮ ॥

---

[1] ಸ್ಫಾಟಿಕಾ—ಖ, ಗ, ಚ, ಛ, ಝ, ದ, ಬ.
[2] ಮೂರ್ಧ್ನಾ—ಥ, ಫ, ಬ.
[3] ಈ ಅರ್ಧಪದ್ಯ—ಕ, ಘ, ಪುಸ್ತಕಗಳಲ್ಲಿಲ್ಲ.
[4] ವಕ್ತ್ರಂ ಪ್ರತಿ—ಛ.
[5] ಚ ವಜ್ರಾಭಯಂ—ಫ.

ಸರ್ವಲಕ್ಷಣಸಂಯುಕ್ತಂ
ಸರ್ವಾಭರಣಭೂಷಿತಮ್[1] ॥ ॥ ೧೦೮ ॥

ದಿವ್ಯಾಂಬರಧರಂ ದೇವಂ
ದಿವ್ಯರೂಪಮುದಾಹೃತಮ್ ।
[2]ದಿವ್ಯಗಂಧಾನುಲಿಪ್ತಾಂಗಂ
ದಿವ್ಯಮಾಲಾವಿಭೂಷಿತಮ್ ॥ ॥ ೧೦೯ ॥

[3]ಶಾನ್ತರೂಪಮಿದಂ ವತ್ಸ !
ಕಿಂಚಿತ್ ಪ್ರಹಸಿತಾನನಮ್ ।
ಏತದ್ರೂಪಂ ಸ್ಮರೇನ್ನಿತ್ಯಂ
ಧರ್ಮಕಾಮಾರ್ಥಮೋಕ್ಷದಮ್ ॥ ॥ ೧೧೦ ॥

ಧ್ಯಾನರೂಪಮಿದಂ[4] ಪ್ರೋಕ್ತಂ[5]
ವಿಶೇಷಸ್ತ್ವಧುನೋಚ್ಯತೇ ।

ದಿವ್ಯವಸ್ತ್ರವನ್ನು ಧರಿಸಿರುವ ತೇಜೋಮಯವಾದ ದಿವ್ಯಗಂಧಗಳಿಂದ ಲಿಪ್ತವಾದ ಅವಯವಗಳನ್ನುಳ್ಳ, ದಿವ್ಯಮಾಲೆಗಳಿಂದ ಅಲಂಕೃತವಾದ ಧ್ಯಾನಾರ್ಹಸದಾಶಿವನ ರೂಪವು ದಿವ್ಯವಾದುದು. ॥ ೧೦೯ ॥

ಎಲೈ ವತ್ಸನೇ ! ಮುಗುಳುನಗೆಯ ಮುಖವನ್ನುಳ್ಳ ಈ ರೂಪವು ಶಾಂತವಾದುದು. ಧರ್ಮ ಕಾಮ ಅರ್ಥ ಮತ್ತು ಮೋಕ್ಷಗಳನ್ನು ಕೊಡುವ ಈ ರೂಪವನ್ನು ನಿತ್ಯವೂ ಧ್ಯಾನಿಸಬೇಕು. ॥ ೧೧೦ ॥

ಇದು ಧ್ಯಾನಯೋಗ್ಯವಾದ ರೂಪವು. ಈಗ ವಿಶೇಷವನ್ನು ಹೇಳುತ್ತೇನೆ. ಕರ್ಮಸಾದಾಖ್ಯವು ಈ ಸ್ವರೂಪದ ಪೂರ್ವಮುಖ. ಕರ್ತೃಸಾದಾಖ್ಯವು ದಕ್ಷಿಣಮುಖ. ॥ ೧೧೧ ॥

---

[1] ಣಸಂಯುತಂ—ತ.

[2] "ದಿವ್ಯಗಂಧಾ—ತಾನನಂ"—ಭಾಗವು ಕ, ಘ, ಛ, ಟ, ಠ, ಡ, ಢ, ತ, ಥ, ದ, ಬ. ಪುಸ್ತಕಗಳಲ್ಲಿಲ್ಲ.

[3] ಈ ಅರ್ಧಪದ್ಯ—ಕ. ಪುಸ್ತಕದಲ್ಲಿಲ್ಲ.

[4] ಮಿತಿ—ಟ.

[5] ಧ್ಯಾನಲಕ್ಷಣಮೇವೋಕ್ತಂ—ಡ, ಪ.

[1]ಕರ್ಮೇಶಃ[2] ಪೂರ್ವವಕ್ತ್ರಂ ಸ್ಯಾತ್
ಕರ್ತೃ ಸ್ಯಾತ್ ದಕ್ಷಿಣಾನನಮ್[3] ॥ ॥ ೧೧೧ ॥

ಅಪರಂ ಮೂರ್ತ[4]ವಕ್ತ್ರಂ ಸ್ಯಾತ್[5]
ಅಮೂರ್ತಂ ಚೋತ್ತರಾನನಮ್ ।
ಊರ್ಧ್ವಂ ತು ಶಿವಸಾದಾಖ್ಯಂ
ಏವಂ ಪಂಚಾನನಂ ವಿದುಃ ॥ ॥ ೧೧೨ ॥

ಕರ್ಮೇಶಾನಾದಿ ಮೂರ್ತಾಂತಂ[6]
ತಥಾ ಕರ್ಮಾಖ್ಯಮುಚ್ಯತೇ[7] ।
ಪ್ರಾಗ್ವಕ್ತ್ರಂ ಪೂರ್ವಮುದ್ದಿಷ್ಟಂ
ಪಶ್ಚಿಮಂ ಪಶ್ಚಿಮಾನನಮ್[8] ॥ ॥ ೧೧೩ ॥

ಮೂರ್ತಸಾದಾಖ್ಯವು ಪಶ್ಚಿಮಮುಖ. ಅಮೂರ್ತಸಾದಾಖ್ಯವು ಉತ್ತರಮುಖ. ಶಿವಸಾದಾಖ್ಯವು ಊರ್ಧ್ವಮುಖ. ಹೀಗೆ ಧ್ಯಾನಾರ್ಹವಾದ ಸದಾಶಿವನ ಸ್ವರೂಪವನ್ನು ಐದು ಮುಖಗಳನ್ನುಳ್ಳದ್ದೆಂದು ತಿಳಿಯುತ್ತಾರೆ. ॥ ೧೧೨ ॥

ಕರ್ಮೇಶತತ್ತ್ವದಿಂದ ಮೊದಲುಗೊಂಡು ಮೂರ್ತತತ್ತ್ವದವರೆಗಿನ ತತ್ತ್ವತ್ರಯವನ್ನು ಕರ್ಮವೆಂದು ಹೇಳುತ್ತಾರೆ. ಈ ಸದಾಶಿವಸ್ವರೂಪದ ಪೂರ್ವಮುಖವು ಪೂರ್ವದಿಕ್ಕಿಗೆ ಅಭಿಮುಖವಾಗಿರುತ್ತದೆ. ಪಶ್ಚಿಮಮುಖವು ಪಶ್ಚಿಮಾಭಿಮುಖವಾಗಿರುತ್ತದೆ. ॥ ೧೧೩ ॥

---

[1] ಇಲ್ಲಿಂದ 'ಕರ್ಮಾಂತವದ್ಭವೇತ್' ವರೆಗಿನ ಭಾಗ—'ಧ' ಪುಸ್ತಕದಲ್ಲಿಲ್ಲ.

[2] ಕರ್ಮೇಶಂ—ಖ, ಗ, ಚ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ,

[3] ಪೂರ್ವರೂಪಂ ತು ಕರ್ತೃಗಸವ್ಯಾನನಂಭವೇತ್—ಖ, ಗ. ಚ, ಝ,
ಪೂರ್ವವಕ್ತ್ರಂ ಸ್ಯಾತ್ ಕರ್ತಾರಂ ದಕ್ಷಿಣಾನನಂ—ಫ.

[4] ಮೂರ್ತಿ—ಖ, ಗ, ಘ, ಚ, ಝ, ದ, ಧ.

[5] ಅಪರಂ ಮೂರ್ತವಕ್ತ್ರಂ ತು—ಕ, ಫ, ಢ, ದ, ಧ,
ಪಶ್ಚಿಮಂ ಮೂರ್ತಿಸಾದಾಖ್ಯಂ—ಖ, ಗ, ಚ, ಝ.

[6] ಕರ್ಮೇಶಾದಿ ಚ ಮೂರ್ತ್ಯಂತಂ—ಕ.

[7] ಈಶಾನಾದೀನಿ ಮೂರ್ಧಾದಿ ತಥಾ ಕರ್ಮಾಂತವದ್ಭವೇತ್—ಖ, ಗ, ಚ, ಝ.

[8] ಪಶ್ಚಿಮಾಯಾಂ ತು ಪಶ್ಚಿಮಂ—ಫ.

ದಕ್ಷಿಣಾಭಿಮುಖಂ ಯಾಮ್ಯಂ
ಉತ್ತರಂ ಚೋತ್ತರಾನನಮ್ ।
[1]ಊರ್ಧ್ವೇ ತು ದಕ್ಷಿಣಂ ಸವ್ಯಂ
ಇತರಂ ಪೂರ್ವಪಶ್ಚಿಮಮ್[2] ॥ ॥ ೧೧೪ ॥

ಕಿಂಚಿದಸ್ಮಿನ್[3] ವಿಶೇಷೋಽಸ್ತಿ
ಚೋರ್ಧ್ವವಕ್ತ್ರೇ ತು[4] ಷಣ್ಮುಖ!
ಮೂಲಸಂಚಿತತದ್ವಕ್ತ್ರಂ[5]
ಪರಂ ಮುಖಮಿತಿ ಸ್ಮೃತಮ್ ॥ ॥ ೧೧೫ ॥

ಪೂಜಾಕರ್ಮೀ ತು[6] ತದ್ಧ್ಯಾತ್ವಾ[7]
ಚಾರ್ಚಯೇತ್ ಕರ್ತೃ[8] ವಕ್ತ್ರವತ್ ।

ದಕ್ಷಿಣಮುಖವು ದಕ್ಷಿಣದಿಕ್ಕಿಗೂ, ಉತ್ತರಮುಖವು ಉತ್ತರದಿಕ್ಕಿಗೂ ಅಭಿಮುಖವಾಗಿರುತ್ತವೆ. ಊರ್ಧ್ವಮುಖದಲ್ಲಾದರೋ ದಕ್ಷಿಣ ಉತ್ತರ ಪೂರ್ವ ಮತ್ತು ಪಶ್ಚಿಮ ಮುಖಗಳು ಕೂಡಿರುತ್ತವೆ. ॥ ೧೧೪ ॥

ಎಲೈ ಷಣ್ಮುಖನೇ! ಈ ಊರ್ಧ್ವಮುಖದಲ್ಲಿ ಸ್ವಲ್ಪ ವಿಶೇಷವುಂಟು. ಮೂಲಮಂತ್ರಸಹಿತವಾದ ಊರ್ಧ್ವಮುಖವನ್ನು ಉತ್ಕೃಷ್ಟಮುಖವೆಂದು ಸ್ಮರಿಸುತ್ತಾರೆ. ॥ ೧೧೫ ॥

ಪೂಜೆಮಾಡುವವನು ಊರ್ಧ್ವಮುಖವನ್ನು ಧ್ಯಾನಿಸಿ ಕರ್ತೃಸಾದಾಖ್ಯಮುಖ-

---

[1] ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ, ಢ. ತ, ಥ, ದ. ಧ, ಪ, ಬ. ಪುಸ್ತಕಗಳಲ್ಲಿಲ್ಲ.
[2] ಇತರಂ ಪಶ್ಚಿಮೋತ್ತರಂ—ಖ, ಗ, ಚ, ಝ.
[3] ಭೇದೇ ಚಾಸ್ಮಿನ್—ಕ, ಖ. (ಪಾ) ಟ, ಠ, ಢ, ಥ,
ಭೇದೇ ತಸ್ಮಿನ್—ಪ.
[4] ಚೋರ್ಧ್ವವಕ್ತ್ರಸ್ಯ—ಕ, ಗ, ಚ, ಝ,
ಚೋರ್ಧ್ವಾನನಸ್ಯ—ಫ.
[5] ಮೂಲಂ ಸಂಚಿಂತ್ಯತದ್ವಕ್ತ್ರಂ—ಖ, ಗ, ಚ, ಝ,
ಮೂಲಸಂಚಿತಂ ತದ್ವಕ್ತ್ರಂ—ಘ.
[6] ಪೂಜಾಕಾಲೇ ತು—ಖ, ಗ, ಚ, ಝ, ಪೂಜಾಕರ್ಮಣಿ—ಧ.
[7] ತಂ ಧ್ಯಾತ್ವಾ—ಪ, ಫ.
[8] ಕರ್ಮ—ಖ, ಗ, ಚ, ಝ.

ಏವಂ ಸಂಕಲ್ಪ್ಯ ವಿಧಿವತ್
ಪೂಜಾಂತೇ ಪೂರ್ವವದ್ಭವೇತ್ ॥ ॥ ೧೧೬ ॥

ತಸ್ಮಾನ್ಮಾದಾತ್ಮತತ್ತ್ವಂ[1] ಚ[2]
ಸರ್ವಕಾರಣಕಾರಣಮ್ ।
ಸದಾಶಿವ[3] ಇತಿ ಪ್ರೋಕ್ತಂ
ಇತಿ ಶಾಸ್ತ್ರೇಷು ನಿಶ್ಚಿತಮ್ ॥ ॥ ೧೧೭ ॥

ಏತದ್ವೈ ಕರ್ಮರೂಪಂ ತು
ಕರ್ಮ ವರ್ಮೇತಿ[4] ಕಾರಯೇತ್ ।
ಕರ್ಷಣಾದಿಕ್ರಿಯಾದೀನಿ
ಕರ್ಮ ಚೇತಿ ನಿಗದ್ಯತೇ ॥ ॥ ೧೧೮ ॥

ತಸ್ಮಾದ್ವೈ ಸ್ಥಾಪನಾದೀನಿ
ಕರ್ಮಮೂರ್ತೌ[5] ತು ಕಾರಯೇತ್ ।

ದಂತೆ ಪೂಜಿಸಬೇಕು. ಹೀಗೆ ಯಥಾವಿಧಿ ಸಂಕಲ್ಪಮಾಡಿ ಪೂಜೆಯ ಅಂತ್ಯದಲ್ಲಿ ಮೊದಲಿನಂತಾಗಬೇಕು. ॥ ೧೧೬ ॥

ಆದ್ದರಿಂದ ಪ್ರಸಾದಮಂತ್ರಸ್ವರೂಪವಾದ ಶಿವತತ್ತ್ವವನ್ನು ಸರ್ವಕಾರಣಗಳಿಗೂ ಕಾರಣವಾದ ಸದಾಶಿವತತ್ತ್ವವೆಂದು ಹೇಳುತ್ತಾರೆ. ಹೀಗೆ ನಿಷ್ಕಲಬ್ರಹ್ಮವೆನಿಸಿದ ಶಿವತತ್ತ್ವವು ನಿಷ್ಕಲಸದಾಶಿವತತ್ತ್ವವೆಂದು ಶಾಸ್ತ್ರಗಳಲ್ಲಿ ನಿಶ್ಚಿತವಾಗಿದೆ. ॥ ೧೧೭ ॥

ಇದು ಕರ್ಮಸಾದಾಖ್ಯತತ್ತ್ವದ ಸ್ವರೂಪ. ಕರ್ಮಸಾದಾಖ್ಯವನ್ನು ವಜ್ರಕವಚವೆಂದು ಭಾವಿಸಿ ವಿಹಿತಕರ್ಮಗಳನ್ನು ಆಚರಿಸಬೇಕು. ಆವಾಹನಾದಿಕ್ರಿಯೆಗಳೇ ಕರ್ಮಗಳು. ॥ ೧೧೮ ॥

ಆದುದರಿಂದ ಕರ್ಮಸಾದಾಖ್ಯಮೂರ್ತಿಗೆ ಸ್ಥಾಪನಾದಿ ಕ್ರಿಯೆಗಳನ್ನು ಮಾಡ

---

[1] ತ್ಮಕತ್ವಂ—ದ, ಧ, ಪ, ಬ.
[2] ಏತತ್ವಂ ಚಾತ್ಮಕತ್ವಾತ್ತು—ಖ, ಗ, ಚ, ಝ.
[3] ಶಿವಂ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ.
[4] ಪತ್ವಾತ್ ಕರ್ಮಕರ್ಮಣಿ—ಖ, ಗ, ಚ, ಝ,
ಪತ್ವಾತ್ ಕರ್ಮಕರ್ಮೇತಿ—ಧ, ಫ.
[5] ಕರ್ಮರೂಪಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

ಲಿಂಗೇ ವಾ ಸ್ಥಂಡಿಲೇ ವಾಽಪಿ[1]
  ಕುಮ್ಭೇ ವಾ[2] ಹೃದಯೇಽಪಿ ವಾ ॥ ॥ ೧೯ ॥

ಧ್ಯಾತ್ವಾ ಸದಾಶಿವಂ ಪೂಜ್ಯ
  ವಿಧಿವತ್ ಸ್ಥಾಪಯೇತ್ ತತಃ[3] ।
ಕರ್ತ್ರಾದಿಕಚತುರ್ಣಾಂ ತು[4]
  ಸ್ಥಾಪನಂ ಚ ನ ಕಾರಯೇತ್ ॥ ॥ ೨೦ ॥

[5]ಆವಾಹನಂ ಸ್ವಾತ್ಮನಿ ಚಿತ್ಪ್ರಕಾಶಃ[6]
  ತತ್ರ ಸ್ಥಿತಿಃ ಸ್ಥಾಪನಮೀಶ್ವರಸ್ಯ ।
ಸಾನ್ನಿಧ್ಯಮಾತ್ಮೇಶ್ವರ[7]ಸನ್ನಿಧಾನಂ
  ಸಂರೋಧನಂ ಸ್ವಸ್ಯ ಶಿವೇ ನಿರೋಧಃ ॥ ॥ ೨೧ ॥

ಬೇಕು. ಶಿವಲಿಂಗದಲ್ಲಾಗಲಿ, ಪರಿಷ್ಕೃತ ಪವಿತ್ರಪ್ರದೇಶಗಳಲ್ಲಾಗಲಿ, ಕಲಶದಲ್ಲಾಗಲಿ ಹೃದಯಕಮಲದಲ್ಲಾಗಲಿ,— ॥ ೧೯ ॥

ಸದಾಶಿವಸ್ವರೂಪವನ್ನು ಧ್ಯಾನಿಸಿ, ಧ್ಯಾನಪೂಜೆ ಕ್ರಿಯಾಪೂಜೆ ಭಾವಪೂಜೆಗಳನ್ನು ಸಲ್ಲಿಸಿ, ವಿಧಿವತ್ತಾಗಿ ಸ್ಥಾಪನೆ ಮಾಡಬೇಕು. ಕರ್ತೃಸಾದಾಖ್ಯವೇ ಮುಂತಾದ ನಾಲ್ಕು ಸಾದಾಖ್ಯಗಳ ಸ್ಥಾಪನೆಯನ್ನು ಮಾಡಬಾರದು. ॥ ೨೦ ॥

ಶಿವಧ್ಯಾನನಿರತನಾದ ಶಿವಭಕ್ತನು ತನ್ನ ಚಿತ್ತದಲ್ಲಿ ಜ್ಞಾನಸ್ವರೂಪವಾದ ಶಿವತತ್ತ್ವವನ್ನು ಆಕರ್ಷಿಸುವುದೇ ಆವಾಹನ. ತನ್ನ ಹೃದಯಕಮಲದಲ್ಲಿ ಪರಮೇಶ್ವರಸ್ವರೂಪವನ್ನು ಸ್ಥಿರಗೊಳಿಸುವುದೇ ಸ್ಥಾಪನ. ಜೀವಾತ್ಮ ಮತ್ತು ಪರಮೇಶ್ವರರ ಸಾನ್ನಿಧ್ಯವೇ ಸನ್ನಿಧಾನ. ತನ್ನ ಚಿತ್ತವನ್ನು ಶಿವನಲ್ಲಿ ನೆಲೆಗೊಳಿಸುವುದೇ ಸನ್ನಿರೋಧ. ॥ ೨೧ ॥

---

[1] ವಹ್ನೌ—ಕ, ಗ, ಚ, ಝ.
[2] ಮಂಡಲೇ—ಕ. ಘ, ಟ, ಠ, ಡ, ಢ, ತ, ಥ,
ಮಂಟಪೇ—ಥ.
[3] ಸ್ಥಾಪನಂ ಕುರು—ಫ. ಸ್ಥಾಪನಂ ತದಾ—ತ.
[4] ಚ— ಥ, ಫ.
[5] ಈ ಪದ್ಯ—ದ, ಫ. ಪುಸ್ತಕಗಳಲ್ಲಿಲ್ಲ.
[6] ಚಿತ್ಪ್ರಕಾಶಂ—ಖ, ಗ, ಚ, ಝ.
[7] ಮಾತ್ರೇಶ್ವರ—ಖ, ಗ, ಚ, ಝ.

ಯೋಗಿನಾಂ ಮನ್ತ್ರಿಣಾಂ ಚೈವ
ಸ್ತುತಿಮಾತ್ರಂ ಭವೇದ್ಗುಹ! ।
ಇತ್ಯೇತೈರ್ಲಕ್ಷಣೈರ್ಯುಕ್ತಂ
ಕರ್ಮಸಾದಾಖ್ಯಮುಚ್ಯತೇ[1] ॥ ॥ ೧೨ ॥

[2]ಶಿವಾದಿಕರ್ಮಪರ್ಯಂತಂ
ಕ್ರಮೇಣೈವ ಪ್ರಕೀರ್ತಿತಮ್[3] ।
ಸಾದಾಖ್ಯಲಕ್ಷಣಂ ಪ್ರೋಕ್ತಂ
ಮಹೇಶಂ[4] ಶೃಣು ಷಣ್ಮುಖ ॥ ॥ ೧೩ ॥

ಕರ್ಮೇಶಸ್ಯ ಸಹಸ್ರಾಂಶಾತ್
ಮಹೇಶಸ್ಯ ಸಮುದ್ಭವಃ ।
ಮಹೇಶಂ ಸಕಲಂ ವಿದ್ಯಾತ್[5]
ಸೃಷ್ಟಿಸ್ಥಿತಿಲಯಾವಹಮ್[6]॥ ॥ ೧೪ ॥

ಎಲೈ ಷಣ್ಮುಖನೇ ! ಶಿವಯೋಗಿಗಳಿಗೂ, ಮಂತ್ರಜ್ಞರಿಗೂ, ಈಶ್ವರನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಲು ಸ್ತೋತ್ರವೇ ಸಾಕು. ಈ ವರೆಗೆ ಹೇಳಿದ ಲಕ್ಷಣಗಳಿಂದ ಕೂಡಿದ ಸ್ವರೂಪವು ಕರ್ಮಸಾದಾಖ್ಯ. ॥ ೧೨ ॥

ಶಿವಸಾದಾಖ್ಯದಿಂದ ಆರಂಭಿಸಿ ಕರ್ಮಸಾದಾಖ್ಯದವರೆಗೆ ಪಂಚಸಾದಾಖ್ಯತತ್ತ್ವಗಳನ್ನೂ ಕ್ರಮವಾಗಿ ನಿರೂಪಿಸಿದ್ದಾಯಿತು. ಎಲೈ ಷಣ್ಮುಖನೇ ! ಸಾದಾಖ್ಯತತ್ತ್ವದ ನಂತರ ಮಹೇಶತತ್ತ್ವವನ್ನು ಕೇಳು. ॥ ೧೩ ॥

ಕರ್ಮಸಾದಾಖ್ಯವೆಂಬ ದಿವ್ಯಲಿಂಗದ ಸಹಸ್ರದಲ್ಲೊಂದಂಶದಿಂದ ಮಹೇಶತತ್ತ್ವದ ಆವಿರ್ಭಾವವಾಗುತ್ತದೆ. ಸೃಷ್ಟಿ ಸ್ಥಿತಿ ಲಯಗಳಿಗೆ ಕರ್ತೃವಾದ ಮಹೇಶತತ್ತ್ವವನ್ನು ಸಕಲತತ್ತ್ವಸ್ವರೂಪವೆಂದು ತಿಳಿಯಬೇಕು. ॥ ೧೪ ॥

---

[1] ಖ್ಯಲಿಂಗಕಮ್—ಖ, ಗ, ಚ, ಝ.

[2] ಈ ಶ್ಲೋಕಕ್ಕೆ ಮೊದಲು—"ತತೋ ನಾಹೋ ನ ರಾತ್ರಿಶ್ಚ ನ ವಿಷ್ಣುಃ ನ ಪ್ರಜಾಪತಿಃ। ಆಕಾಶಾದೀನಿ ಭೂತಾನಿ ಕಿಂ ಪುನರ್ಭೌತಿಕಂ ಜಗತ್ ॥ ಎಂಬ ಶ್ಲೋಕವು ಕಂಡುಬರುತ್ತದೆ—ಕ. ಪ್ರತಿಯಲ್ಲಿ ಮಾತ್ರ.

[3] ಕ್ರಮೇಣ ಪರಿಕೀರ್ತಿತಮ್—ಘ.

[4] ಮಾಹೇಶಂ—ಠ.

[5] ವಿಂದ್ಯಾತ್—ಟ, ಠ, ಡ, ತ, ಥ, ಬ.

[6] ಲಯಾತ್ಮಕಂ—ಖ, ಗ, ಚ, ಝ.

ಪಂಚವಿಂಶತಿಭೇದೈಸ್ತು
    ತನ್ಮೂರ್ತಿರ್ವಿವಿಧಾ ಭವೇತ್[1] |
ನಾನಾರೂಪಧರಂ ದೇವಂ
    ನಾನಾರೂಪ[2]ಸಮನ್ವಿತಮ್ || || ೧೫ ||

ನಾನಾಚಿಹ್ನ[3]ಸಮೋಪೇತಂ
    ನಾನಾಲೀಲಾಧರಂ ಹರಿಮ್[4] |
ಸ್ಥಾನಯಾನ[5]ಸಮಾಸೀನಂ
    ನೃತ್ಯಕೋಪಮಸೌಮ್ಯಕಮ್[6] || || ೧೬ ||

ಅನೇಕಾಕಾರಸಂಯುಕ್ತಂ
    ದೇವದೇವಂ ಮಹೇಶ್ವರಮ್ |

ಮಹೇಶತತ್ತ್ವವು ಸೃಷ್ಟಿಸ್ಥಿತಿಲಯಗಳ ಪರಿವರ್ತನಕಾರ್ಯನಿಮಿತ್ತವಾಗಿ ಸೋಮಧರಾದಿ ಇಪ್ಪತ್ತೈದು ಲೀಲಾರೂಪಗಳನ್ನು ಧರಿಸುತ್ತದೆ. ಮಹೇಶತತ್ತ್ವವು ನಾನಾರೂಪಗಳನ್ನು ಧರಿಸುತ್ತದೆ. ಮಹೇಶತತ್ತ್ವವು ನಾನಾರೂಪಗಳನ್ನು ಧರಿಸಿದ ಪ್ರಕಾಶಮಾನವಾದ ನಾನಾಸ್ವರೂಪವನ್ನುಳ್ಳ,— || ೧೫ ||

ಅನೇಕಲಾಂಛನಗಳಿಂದ ಕೂಡಿದ ನಾನಾಲೀಲೆಗಳನ್ನು ಧರಿಸಿದ, ಸಮಸ್ತ ಜಗತ್ಸಂಹಾರಕರ್ತೃವಾದ, ಅನೇಕಸ್ಥಾನ ಮತ್ತು ಅನೇಕವಾಹನಗಳನ್ನಲಂಕರಿಸಿದ, ನಾಟ್ಯಸದೃಶಸೌಂದರ್ಯವನ್ನುಳ್ಳ,— || ೧೬ ||

ಅನಂತ ಆಕಾರಗಳನ್ನುಳ್ಳ, ಇಂದ್ರಾದಿ ಸಮಸ್ತದೇವತೆಗಳಿಗೂ ಪ್ರಭುವಾದ,

---

[1] ತನ್ಮೂರ್ತ್ಯಾ ಪಂಚವಿಂಶತಿಃ—ಕ, ಖ, (ಪಾ) ಘ, ಛ.
ಮೂರ್ತಯಃ ಪಂಚವಿಂಶತಿಃ—ಧ.

[2] ನಾನಾಭೇದ—ಘ.

[3] ಲಿಂಗ—ಘ.

[4] ಲೀಲಾಮನೋಹರಂ—ಘ.

[5] ಯಾನಂ—ಖ, ಗ, ಚ, ಝ.

[6] ನೃತ್ತಂ ಕೋಪಂ ಚ ಸಾಮ್ಯಕಂ—ಖ, ಗ, ಚ, ಝ.
ನೃತ್ತಕೋಪಮಸಾಮ್ಯಕಂ—ಧ, ಪ, ಬ.

ಜಟಾಮುಕುಟಸಂಯುಕ್ತಂ
ಏಕವಕ್ತ್ರಂ ತ್ರಿಣೇತ್ರಕಮ್ ॥ ॥ ೧೨ ॥

[1]ಚತುರ್ಭುಜಸಮಾಯುಕ್ತಂ
ಏಕಪದ್ಮಾಸನಸ್ಥಿತಮ್ ।
ವರದಾಭಯಹಸ್ತಂ ಚ
ಮೃಗೀಪರಶುಧಾರಕಮ್ ॥ ॥ ೧೩ ॥

ಸರ್ವಾಭರಣಸಂಯುಕ್ತಂ
ಸರ್ವಲಕ್ಷಣಸಂಯುತಮ್[2] ।
ಮಹೇಶರೂಪಮಿತ್ಯುಕ್ತಂ[3]
ರೂಪಭೇದಸ್ತ್ವಥೋಚ್ಯತೇ[4] ॥ ॥ ೧೪ ॥

ಪ್ರಥಮಂ ಸೋಮಧಾರೀ ಸ್ಯಾತ್[5]
ದ್ವಿತೀಯಮುಮಯಾ ಸಹ

ಮಹೇಶ್ವರತತ್ತ್ವವೆಂದು ಪ್ರಖ್ಯಾತವಾದ, ಜಟೆಗಳಿಂದ ರಚಿತವಾದ ಕಿರೀಟವನ್ನುಳ್ಳ, ಒಂದು ಮುಖ, ಮೂರು ಕಣ್ಣು— ॥ ೧೨ ॥

—ಮತ್ತು ನಾಲ್ಕು ಭುಜಗಳಿಂದ ಕೂಡಿದ, ಶ್ರೇಷ್ಠವಾದ ಪದ್ಮಾಸನದಲ್ಲಿ ಮಂಡಿಸಿದ, ಒಂದು ಕೈಯಲ್ಲಿ ವರದಮುದ್ರೆಯನ್ನೂ ಮತ್ತೊಂದರಲ್ಲಿ ಅಭಯಮುದ್ರೆಯನ್ನೂ ಉಳಿದೆರಡು ಕೈಗಳಲ್ಲಿ ಜಿಂಕೆ-ಪರಶುಗಳನ್ನೂ ಧರಿಸಿರುವ,— ॥ ೧೩ ॥

ಸಕಲ ಆಭರಣಗಳಿಂದ ಭೂಷಿತವಾದ, ಸರ್ವಲಕ್ಷಣಗಳಿಂದ ಕೂಡಿದ, ಸ್ವರೂಪವನ್ನು ಧರಿಸಿರುತ್ತದೆ. ಇನ್ನು ಮುಂದೆ ಮಹೇಶನ ಲೀಲಾರೂಪಗಳನ್ನು ಹೇಳುತ್ತೇನೆ. ॥ ೧೪ ॥

೧ ಮಹೇಶನು ರೋಹಿಣೀನಿಮಿತ್ತವಾದ ದಕ್ಷಶಾಪವನ್ನು ಪರಿಹರಿಸಿ ಚಂದ್ರಧರನಾದುದು ಮೊದಲನೆಯ ಲೀಲೆ.

---

[1] ಈ ಪದ್ಯ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ. ಪುಸ್ತಕಗಳಲ್ಲಿಲ್ಲ.

[2] ಏಕಪದ್ಮಾಸನಸ್ಥಿತಮ್—ಕ.

[3] ಮೇವೋಕ್ತಂ—ಖ, ಗ, ಚ, ಝ.

[4] ರೂಪಭೇದಂ ತ್ವಥೋಚ್ಯತೇ—ಖ, ಗ, ಚ, ಝ.
ರೂಪಭೇದಮಿಹೋಚ್ಯತೇ—ಟ, ಢ, ಥ, ದ.
ರೂಪಭೇದಮಥಶೃಣು—ಫ.

[5] ಧಾರೀ ಚ—ಟ, ಠ, ಢ, ತ, ಥ, ದ, ಧ, ಬ.

ತೃತೀಯಂ ತು ವೃಷಾರೂಢಃ[1]
ಚತುರ್ಥಂ ನೃತ್ಯಕೋಪಮಮ್[2] ॥ ॥ ೧೩೦ ॥

ವೈವಾಹಂ[3] ಪಂಚಮಂ ವಿದ್ಯಾತ್[4]
ಷಷ್ಠಂ ಭಿಕ್ಷಾಟನಂ ಭವೇತ್[5] ।
ಕಾಮಾರಿಃ[6] ಸಪ್ತಮಂ ವಿದ್ಯಾತ್[7]
ಕಾಲಾರಿಶ್ಚಾ[8]ಷ್ಟಮಂ[9] ಭವೇತ್[10] ॥ ॥ ೧೩೧ ॥

೨ ಜಗದುತ್ಪತ್ತಿನಿಮಿತ್ತವಾಗಿ ಉಮಾಶಕ್ತಿಸಹಿತನಾದುದು ಎರಡನೆಯ ಲೀಲೆ.

೩ ಪ್ರಳಯಕಾಲದಲ್ಲಿ ನಾಶಕ್ಕೆ ಹೆದರಿ ವೃಷಭಾಕಾರದಿಂದ ತನ್ನನ್ನಾಶ್ರಯಿಸಿದ ಧರ್ಮವನ್ನು ವಾಹನವನ್ನಾಗಿ ಸ್ವೀಕರಿಸಿದುದು ಮೂರನೆಯ ಲೀಲೆ.

೪ ಪ್ರಳಯನರ್ತನವನ್ನು ಬ್ರಹ್ಮಾದಿದೇವತೆಗಳಿಗಾಗಿ ಮತ್ತೆ ನರ್ತಿಸಿ ಪ್ರದರ್ಶಿಸಿದುದು ನಾಲ್ಕನೆಯ ಲೀಲೆ. ॥ ೧೩೦ ॥

೫ ಉಮಾದೇವಿಯನ್ನು ವಿವಾಹವಾದುದು ಐದನೆಯ ಲೀಲೆ.

೬ ಅಹಂಕಾರಿಯಾದ ದಕ್ಷಬ್ರಹ್ಮನ ಶಿರಸ್ಸನ್ನು ಚಿವುಟಿ ಅವನ ಕಪಾಲವನ್ನು ಹಿಡಿದು ಭಿಕ್ಷಾಟನೆ ಮಾಡಿದುದು ಆರನೆಯ ಲೀಲೆ.

೭ ತಾನು ಶಕ್ತಿಸಹಿತನಾದರೂ ಕಾಮಿಯಲ್ಲವೆಂಬುದನ್ನು ಲೋಕಕ್ಕೆ ಪ್ರಕಟಿಸಲು ಕಾಮನನ್ನು ದಹಿಸಿದುದು ಏಳನೆಯ ಲೀಲೆ.

೮ ಭಕ್ತಮಾರ್ಕಂಡೇಯನ ನಿಮಿತ್ತವಾಗಿ ಯಮನನ್ನು ಮರ್ದಿಸಿದುದು ಎಂಟನೆಯ ಲೀಲೆ. ॥ ೧೩೧ ॥

---

[1] ರೂಢಂ—ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ.
[2] ನೃತ್ತರೂಪಕಂ—ಖ, ಗ, ಜ, ಝ.
ನೃತ್ತಕೋಪಮಂ—ಧ, ಪ, ಬ.
[3] ವೈವಾಹ್ಯಂ—ಖ, ಗ, ಜ, ಝ.
[4] ಪಂಚಮಂ ತು ವಿವಾಹಂ ಸ್ಯಾತ್—ಡ, ಪ.
ವಿವಾಹಂ ಪಞ್ಚಮಂ ವಿದ್ಯಾತ್—ಧ.
[5] ಷಷ್ಠಂ ಪಾಶುಪತಂ ತಥಾ—ಫ.
[6] ಕಾಮಾರಿಂ—ಖ, ಗ, ಜ, ಝ.
[7] ವಿನ್ದ್ಯಾತ್—ಟ, ಠ, ಡ, ತ, ಥ, ದ, ಬ.
[8] ಕಾಲಾರಿಂ ಚಾ—ಕ, ಘ, ಛ.
[9] ಶ್ಚಾಷ್ಟಮೋ—ಖ, ಗ, ಜ, ಝ.
[10] ಭಿಕ್ಷಾಟನಂ ಸಪ್ತಮಂ ಸ್ಯಾತ್ ಕಾಲಾಗ್ನಿರುದ್ರಮಷ್ಟಮಮ್—ಫ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7154

ನವಮಂ ತ್ರಿಪುರಾರಿಃ ಸ್ಯಾತ್
ಜಲಂಧರವಧೋ ದಶಮ್ ।
ಏಕಾದಶಮಜಾರಿಃ[1] ಸ್ಯಾತ್
ದ್ವಾದಶಂ[2] ವೀರಭದ್ರಕಃ[3] ॥ ॥ ೧೩೨ ॥

ತ್ರಯೋದಶಂ[4] ಹರಿಧ್ವಂಸೀ[5]
ತ್ರ್ಯರ್ಧನಾರೀ[6] ಚತುರ್ದಶಮ್ ।
ಕಿರಾತಃ ಸ್ಯಾತ್ ಪಂಚದಶಂ[7]
ಕಂಕಾಲೀ[8] ಷೋಡಶಂ[9] ಭವೇತ್ ॥ ॥ ೧೩೩ ॥

೯ ದುಷ್ಟನಿಗ್ರಹ ಮತ್ತು ಶಿಷ್ಟಪರಿಪಾಲನೆಗಾಗಿ ತ್ರಿಪುರವನ್ನು ಸಂಹರಿಸಿದ್ದು ಒಂಬತ್ತನೆಯ ಲೀಲೆ.

೧೦ ದುಷ್ಟ ಜಲಂಧರನನ್ನು ಸಂಹರಿಸಿದುದು ಹತ್ತನೆಯ ಲೀಲೆ.

೧೧ ಮಗಳನ್ನು ರಮಿಸಿದ ಬ್ರಹ್ಮನನ್ನು ನಿಗ್ರಹಿಸಿದುದು ಹನ್ನೊಂದನೆಯ ಲೀಲೆ.

೧೨ ವೀರಭದ್ರನ ರೂಪವನ್ನು ಧರಿಸಿ ದಕ್ಷನ ಯಜ್ಞವನ್ನು ನಾಶಮಾಡಿದುದು ಹನ್ನೆರಡನೆಯ ಲೀಲೆ. ॥ ೧೩೨ ॥

೧೩ ಮಹಾವಿಷ್ಣುವಿನ ಮತ್ಸ್ಯಾದ್ಯವತಾರಗಳನ್ನು ಸಂಹರಿಸಿದುದು ಹದಿಮೂರನೆಯ ಲೀಲೆ.

೧೪ ಅರ್ಧನಾರೀಶ್ವರನಾಗಿ ಪ್ರಾದುರ್ಭವಿಸಿದುದು ಹದಿನಾಲ್ಕನೆಯ ಲೀಲೆ.

೧೫ ಅರ್ಜುನನನ್ನು ಅನುಗ್ರಹಿಸಲು ಕಿರಾತವೇಷ ಧರಿಸಿದುದು ಹದಿನೈದನೆಯ ಲೀಲೆ.

೧೬ ತ್ರಿವಿಕ್ರಮನನ್ನು ಮರ್ದಿಸಿ ಅವನ ಕಂಕಾಲನನ್ನು (ಮೂಳೆಯನ್ನು) ಧರಿಸಿದುದು ಹದಿನಾರನೆಯ ಲೀಲೆ. ॥ ೧೩೩ ॥

---

[1] ಏಕಾದಶ ಗಜಾರಿಃ—ಖ, ಗ, ಚ, ಝ.
[2] ದ್ವಾದಶಃ—ಖ, ಗ, ಚ, ಝ.
[3] ವೀರಭದ್ರಕಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಫ, ಬ.
[4] ತ್ರಯೋದಶೋ—ಖ, ಗ, ಚ, ಝ.
[5] ಹರೇರರ್ಧಂ—ಖ, ಗ, ಚ, ಝ.
ಹರಿಹರಾರ್ಧಂ—ಫ.
[6] ತ್ರ್ಯರ್ಧನಾರಿಃ—ಖ, ಗ, ಚ, ಝ.
[7] ಪಂಚದಶ—ಖ, ಗ, ಚ, ಝ.
[8] ಕಂಕಾಲಃ—ಖ, ಗ, ಚ, ಝ.
[9] ಷೋಡಶೋ—ಖ, ಗ, ಚ, ಝ.

ಚಣ್ಡೇಶಾನುಗ್ರಹಶ್ಚೈವ
ತಥಾ ಸಪ್ತದಶಂ ಭವೇತ್[1] |
ವಿಷಾಪಹರಣಂ ಚೈವ[2]
ತ್ವಷ್ಟಾದಶಮಿತಿ ಸ್ಮೃತಮ್[3] || || ೧೩೪ ||

ಚಕ್ರದಾನಸ್ವರೂಪಂ ಚ[4]
ಹ್ಯೇಕೋನವಿಂಶತಿ ಸ್ಮೃತಮ್[5] |
ವಿಘ್ನಪ್ರಸಾದೋ ವಿಂಶಃ ಸ್ಯಾತ್[6]
ಸೋಮಾಸ್ಕಂದಃ ತತಃ ಪರಮ್[7] || || ೧೩೫ ||

೧೭ ತನ್ನನ್ನು ಆಶ್ರಯಿಸಿದ ಚಂಡೇಶನೆಂಬ ವಿಪ್ರನನ್ನು ಅನುಗ್ರಹಿಸಿದುದು ಹದಿನೇಳನೆಯ ಲೀಲೆ.

೧೮ ಅಮೃತಕ್ಕಾಗಿ ಕ್ಷೀರಸಾಗರವನ್ನು ಮಥಿಸಿದಾಗ ಜನಿಸಿದ ವಿಷವನ್ನು ಪಾನಮಾಡಿದುದು ಹದಿನೆಂಟನೆಯ ಲೀಲೆ. || ೧೩೪ ||

೧೯ ದಿವ್ಯಲಿಂಗದಲ್ಲಿ ಉದ್ಭವಿಸಿ ವಿಷ್ಣುವಿಗೆ ಚಕ್ರವನ್ನು ದಾನಮಾಡಿದ ಸ್ವರೂಪವು ಹತ್ತೊಂಭತ್ತನೆಯ ಲೀಲೆ.

೨೦ ವಿಘ್ನೇಶ್ವರನಿಗೆ ಪ್ರಸನ್ನನಾದುದು ಇಪ್ಪತ್ತನೆಯ ಲೀಲೆ.

೨೧ ನಂತರ ಮಹೇಶನು ಅಂಧಕಾಸುರನನ್ನು ಕೊಲ್ಲುವಾಗ ಉಮೆ ಮತ್ತು ಸ್ಕಂದನೊಡನಿದ್ದುದು—ಈ ಸೋಮಾಸ್ಕಂದಸ್ವರೂಪವೇ ಇಪ್ಪತ್ತೊಂದನೆಯ ಲೀಲೆ. || ೧೩೫ ||

---

[1] ಚಂಡೇಶಾನುಗ್ರಹಃ ಸಪ್ತದಶೇತಿ ಪರಿಕೀರ್ತಿತಾಃ- ಖ, ಗ, ಚ, ಝ.
ಚಂಡೇಶಾನುಗ್ರಹಂ ಚೈವ ತತಃ ಸಪ್ತದಶಂ ಭವೇತ್—ಪ.

[2] ವಿಷಸಂಹಾರಿಣಂ ಚೈವ—ಡ.

[3] ವಿಷಾಪಹರಣಶ್ಚಾಷ್ಟಾದಶೇತಿ ಸಮುದಾಹೃತಃ—ಡ.

[4] ತು—ಕ, ಖ, ಘ, ಛ, ಟ, ಠ, ಡ, ಢ, ತ, ಥ, ಪ.

[5] ಏಕೋನವಿಂಶತಿಶ್ಚೈವ ಚಕ್ರದಾನಸ್ವರೂಪಕಮ್—ಫ.

[6] ವಿಂಶತಿರ್ವಿಘ್ನಪ್ರಸಾದಃ—ಖ, ಗ, ಜ, ಛ.

[7] ಉಮಾಸ್ಕನ್ದಸ್ತತಃ ಪರಮ್—ಫ.

ಸೋಮಾಸ್ಕಂದಶ್ಚೈಕವಿಂಶಃ[1]
ದ್ವಾವಿಂಶಶ್ಚೈಕಪಾದಕಃ[2] ।
ಸುಖಾವಹಸ್ತ್ರಯೋವಿಂಶಃ[3]
[4]ಭವೇಚ್ಚ[5] ತದನಂತರಮ್ ॥ ॥ ೧೩೭ ॥

ದಕ್ಷಿಣಾಮೂರ್ತಿರೂಪಂ ತು[6]
ಚತುರ್ವಿಂಶಮಿತೀರಿತಮ್[7] ।
ಲಿಂಗೋದ್ಭವಸ್ವರೂಪಂ ತು[8]
ಪಂಚವಿಂಶಂ ಪ್ರಕೀರ್ತಿತಮ್ ॥ ॥ ೧೩೮ ॥

ಏತೇ ಮಹೇಶರೂಪಾಶ್ಚ[9]
ಮೂರ್ತಿಭೇದಾಃ ಪ್ರಕೀರ್ತಿತಾಃ ।

---

೨೨ ಕಲ್ಪಾಂತದಲ್ಲಿ ಜಗತ್ತನ್ನು ಸಂಹರಿಸಿ ಒಂದು ಪಾದದಿಂದ ಸಂಚರಿಸಿದುದು ಇಪ್ಪತ್ತೆರಡನೆಯ ಲೀಲೆ.

೨೩ ಜಗತ್ತಿಗೆ ಸುಖದಾಯಕನಾಗಿ ಶಂಕರನಾದುದು ಇಪ್ಪತ್ತಮೂರನೆಯ ಲೀಲೆ. ॥ ೧೩೭ ॥

೨೪ ದಕ್ಷಿಣಾಮೂರ್ತಿಯ ರೂಪವು ಇಪ್ಪತ್ತನಾಲ್ಕನೆಯ ಲೀಲೆ.

೨೫ ಲಿಂಗರೂಪವಾಗಿ ಆವಿರ್ಭವಿಸಿದುದು ಇಪ್ಪತ್ತೈದನೆಯ ಲೀಲೆ. ॥ ೧೩೮ ॥

ಮಹೇಶತತ್ತ್ವದ ಈ ಇಪ್ಪತ್ತೈದು ಸ್ವರೂಪಗಳನ್ನು ಲೀಲಾಮೂರ್ತಿಗಳೆಂದು

---

[1] ಉಮಾಸ್ಕನ್ದೈಕವಿಂಶತಿಃ—ಖ, (ಪಾ).

[2] ಜಾಹ್ನವೀಧರಮೂರ್ತಿಃ ಸ್ಯಾತ್ ದ್ವಾವಿಂಶತಾ ಪರಿಕೀರ್ತಿತಾ.—ಪ.

[3] ತ್ರಯೋವಿಂಶತ್ ಸುಖಾಸನಮ್—ಘ.

[4] ಈ ಪಾದ—ಛ, ಟ, ಠ, ಡ, ಢ, ತ, ಧ, ದ. ಪುಸ್ತಕಗಳಲ್ಲಿಲ್ಲ.

[5] ಸ್ಯಾದ್ಭವೇತ್—ಕ.

[6] ದಕ್ಷಿಣೇಶಂ ತತಃ ಪರಂ—ಡ.

[7] ಈ ಪಾದ ಡ. ಪುಸ್ತಕದಲ್ಲಿಲ್ಲ.

[8] ಉರು ಲಿಂಗೋದ್ಭವಂ ಚ್ಚೈವ—ಥ.

[9] ಏವಂ ಮಹೇಶರೂಪಾಣಿ—ಧ.
ಏತೇ ಮಹೇಶರೂಪಾಣಿ—ಫ.
ಏತೇ ಮಹೇಶರೂಪಾಃ ಸ್ಯುಃ—ಕ, ಘ, ಛ.
ಏತೇ ಮಹೇಶರೂಪಾಸ್ತು—ಢ, ಥ, ದ.

ಸೋಮಧಾರ್ಯಾದಿಲಿಂಗಾಂತಂ[1]
  ಕರ್ಮಣಶ್ಚ ಸಮುದ್ಭವಮ್[2] ॥ ॥ ೧೩೮ ॥

ಏತೇ ಮಹೇಶರೂಪಾಶ್ಚ
  ಕರ್ಮಾಖ್ಯಾಚ್ಚ[3] ಸಮುದ್ಭವಾಃ
[4]ಪಂಚವಿಂಶತಿಭೇದೇನ[5]
  ರೂಪಭೇದಾಃ ಪ್ರಕೀರ್ತಿತಾಃ[6] ॥ ॥ ೧೩೯ ॥

[7]ಮಹೇಶಸ್ಯ ಸಹಸ್ರಾಂಶಾತ್
  ರುದ್ರದೇವಸಮುದ್ಭವಃ ।
ತನ್ಮಹೇಶ್ವರಕೋಟ್ಯಂಶಾತ್
  ವಿಷ್ಣುದೇವಸಮುದ್ಭವಃ[8] ॥ ॥ ೧೪೦ ॥

ಹೇಳುತ್ತಾರೆ. ಸೋಮಧರನಿಂದ ಮೊದಲ್ಗೊಂಡು ಜ್ಯೋತಿರ್ಲಿಂಗದ ಸ್ವರೂಪದ ವರೆಗಿನ ಸಕಲಸ್ವರೂಪಗಳು ಕರ್ಮಸಾದಾಖ್ಯದಿಂದ ಆವಿರ್ಭವಿಸಿದವು. ॥ ೧೩೮ ॥

ಕರ್ಮಸಾದಾಖ್ಯದಿಂದ ಉದ್ಭವಿಸಿದ ಇವು ಮಹೇಶತತ್ತ್ವದ ಸ್ವರೂಪಗಳು. ಹೀಗೆ ಮಹೇಶನ ಲೀಲಾರೂಪಗಳು ಇಪ್ಪತ್ತೈದು. ॥ ೧೩೯ ॥

ಮಹೇಶನ ಸಾವಿರದಲ್ಲೊಂದಂಶದಿಂದ ರುದ್ರದೇವನ ಆವಿರ್ಭಾವವಾಗುತ್ತದೆ. ಆ ಮಹೇಶನ ಕೋಟಿಯಲ್ಲೊಂದಂಶದಿಂದ ವಿಷ್ಣುದೇವನ ಉದ್ಭವವಾಗುತ್ತದೆ. ॥ ೧೪೦ ॥

---

[1] ಸೋಮಧಾರಾದಿ ಲಿಂಗಾಂತಂ—ಖ, ಗ, ಚ, ಝ.
ಇಂದುದರಾದಿ ಸ್ಥಾಣ್ವಂತಂ—ಕ, ಖ, (ಪಾ) ಟ, ಘ, ಛ, ತ, ಥ, ದ, ಪ.
ಇಂದುಧರಾದಿ ಸ್ಥಾಣ್ವಂತಂ—ಠ, ಡ.
ಸ್ಥಾಣ್ವಂತಮಿಂದುಧಾರ್ಯಾದಿ—ಧ.

[2] ಸಮುದ್ಭವಃ—ಖ, ಗ, ಚ, ಝ.

[3] ಕರ್ಮಾಖ್ಯಾದಿ—ಖ, ಗ, ಚ, ಝ.
ಕರ್ಮಾದಿಷು—ಘ.

[4] ಇಲ್ಲಿಂದ 'ಗಲೋದ್ಭವಃ' ವರೆಗೆ 'ಧ' ಪುಸ್ತಕದಲ್ಲಿಲ್ಲ.

[5] ಪಂಚವಿಂಶತ್ ಪ್ರಕಾರೇಣ—ಖ, ಗ, ಚ, ಝ.

[6] ರೂಪಂ ಪ್ರತಿ ಪೃಥಕ್ ಪೃಥಕ್—ಖ, ಗ, ಚ, ಝ.

[7] ಈ ಅರ್ಧ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

[8] ವಿಷ್ಣುದೇವಸಮುದ್ಭವಂ—ಘ.
ಬ್ರಹ್ಮವಿಷ್ಣುಸಮುದ್ಭವಾ—ಕ, ಖ, ಛ, ಟ, ಠ, ಡ, ಢ, ತ, ಥ, ದ.

[1]ವಿಷ್ಣುದೇವಸ್ಯ ಕೋಟ್ಯಂಶಾತ್
ಬ್ರಹ್ಮದೇವಸಮುದ್ಭವಃ ।
ನೇತ್ರೇ ದಕ್ಷಿಣವಾಮೋರ್ಧ್ವೇ[2]
ಸೂರ್ಯಸೋಮಾಗ್ನಿಸಂಭವಃ[3] ॥ ॥ ೧೪೧ ॥

ಘ್ರಾಣೇ ವಾಯುಃ ಸಮುತ್ಪನ್ನಃ
[4]ಶ್ರೋತ್ರೇ ಕೀಲಾದಿ ಸಂಭವಃ[5] ।
ಆಸ್ಯೇ ಜ್ಞಾನಂ ಸಮುತ್ಪನ್ನಂ
ಗಣೇಶಸ್ತು ಗಲೋದ್ಭವಃ ॥ ॥ ೧೪೨ ॥

ಷಣ್ಮುಖೋ ಹೃದಯೇ ಜಾತಃ
ನಾಭೇಃ ದೇವಾದಿಸಂಭವಃ[6] ।
ಪಞ್ಚಾಶತ್ಕೋಟಿದೇವಾಶ್ಚ
ಮಹೇಶಸ್ವೇದಸಂಭವಾಃ ॥ ॥ ೧೪೩ ॥

ವಿಷ್ಣುದೇವನ ಕೋಟಿಯಲ್ಲೊಂದಂಶದಿಂದ ಬ್ರಹ್ಮದೇವನು ಜನಿಸುತ್ತಾನೆ. ವಾಮ–ದಕ್ಷಿಣ–ಊರ್ಧ್ವ ನೇತ್ರಗಳಿಂದ ಕ್ರಮವಾಗಿ ಸೂರ್ಯ ಚಂದ್ರ ಅಗ್ನಿಗಳ ಉದಯವಾಗುತ್ತದೆ. ॥ ೧೪೧ ॥

ನಾಸಿಕದಿಂದ ವಾಯುವು ಹುಟ್ಟಿದನು. ಕಿವಿಯಿಂದ ಕೀಲಾದಿಗಳ ಜನನವಾಗುತ್ತದೆ. ಮುಖದಿಂದ ಜ್ಞಾನವು ಉದ್ಭವಿಸುತ್ತದೆ. ಗಣೇಶನು ಕಂಠದಿಂದ ಜನಿಸಿದನು. ॥ ೧೪೨ ॥

ಷಣ್ಮುಖನು ಹೃದಯದಿಂದ ಹುಟ್ಟಿದನು. ನಾಭಿಯಿಂದ ದೇವಾದಿಗಳು ಉದ್ಭವಿಸಿದರು. ಐವತ್ತು ಕೋಟಿ ದೇವತೆಗಳು ಮಹೇಶನ ಬೆವರಿನಿಂದ ಜನಿಸಿದರು. ॥ ೧೪೩ ॥

---

[1] ಈ ಅರ್ಧ—ಕ, ಖ, ಘ, ಛ, ಟ, ಠ. ಪುಸ್ತಕಗಳಲ್ಲಿಲ್ಲ.

[2] ನೇತ್ರೇಷು ಸವ್ಯವಾಮೋರ್ಧ್ವೇ—ಖ, ಗ, ಚ, ಝ.

[3] ತ್ರಿಕೋಣಮುಮಯಾ ಸಾರ್ಧಂ ಸೋಮಸೂರ್ಯಾಗ್ನಿಲೋಚನಮ್—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ.

[4] 'ಶ್ರೋತ್ರೇ' ಇಲ್ಲಿಂದ 'ಜ್ಞಾನಂ ಷಮುತ್ಪನ್ನಂ' ವರೆಗೆ ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

[5] ಶ್ರೋತ್ರೇ ಚೈವ ದಿಶೇಶ್ವರಃ—ಫ.

[6] ನಾಭೌ ದೇವಾಶ್ಚ ಸಂಭವಾಃ—ಖ, ಗ, ಚ, ಝ.

ಋಷಯಶ್ಚ ತಥಾ ಕೋಟ್ಯಃ
ರೋಮ್ಣಿ ಚೈವ ಸಮುದ್ಭವಾಃ ।
ತತ್ತ್ವಾನಾ ಮುದ್ಭವಃ ಪ್ರೋಕ್ತಃ
ಶಕ್ತೀನಾಮುದ್ಭವಂ ಶೃಣು ॥ ॥ ೧೪೪ ॥

ಬಿಂದುರೂಪದಶಾಂಶೇನ
ಚೋಮಾಶಕ್ತೇಃ ಸಮುದ್ಭವಃ[1] ।
ಉಮಾಽಮ್ಬಿಕಾ ಗಣಾನೀ ಚ[2]
ತ್ವೀಶ್ವರೀ ಚ ಮನೋನ್ಮನೀ[3] ॥ ॥ ೧೪೫ ॥

[4]ಏಕೈಕೈನ[5] ದಶಾಂಶೇನ
ಜಾಯತೇ ಕ್ರಮಶಸ್ತಥಾ ।
ಏತಾ ವೈ ಶಕ್ತಯಃ ಪಞ್ಚ
ಶಿವಾದೀನಾಂ ತು[6] ಶಕ್ತಯಃ ॥ ॥ ೧೪೬ ॥

ಅನೇಕಕೋಟಿ ಋಷಿಗಳು ಮಹೇಶನ ರೋಮದಿಂದ ಜನಿಸಿದರು. ಈ ವರೆಗೆ ತತ್ತ್ವಗಳ ಉದ್ಭವವನ್ನು ಹೇಳಲಾಯಿತು. ಷಣ್ಮುಖನೇ! ಇನ್ನು ಶಕ್ತಿಗಳ ಉದ್ಭವವನ್ನು ಕೇಳು. ॥ ೧೪೪ ॥

ಬಿಂದುರೂಪವಾದ ಪರಾಶಕ್ತಿಯ ಹತ್ತರಲ್ಲೊಂದಂಶದಿಂದ ಉಮಾಶಕ್ತಿಯ ಆವಿರ್ಭಾವವಾಗುತ್ತದೆ. ಹೀಗೆಯೇ ಉಮಾ, ಅಂಬಿಕಾ, ಗಣಾನೀ, ಈಶ್ವರೀ ಮತ್ತು ಮನೋನ್ಮನೀ ಶಕ್ತಿಗಳು— ॥ ೧೪೫ ॥

—ಕ್ರಮವಾಗಿ ಒಂದೊಂದರ ಹತ್ತರಲ್ಲೊಂದಂಶದಿಂದ ಒಂದೊಂದು ಉದ್ಭವಿಸುತ್ತದೆ. ಈ ಐದು ಶಕ್ತಿಗಳು ಶಿವಸಾದಾಖ್ಯಾದಿ ಪಂಚಸಾದಾಖ್ಯಗಳಿಗೆ ಸಂಬಂಧಿಸಿದ ಶಕ್ತಿಗಳು. ॥ ೧೪೬ ॥

---

[1] ಶಕ್ತಿಃ ಸಮುದ್ಭವಾ—ಖ, ಗ, ಚ, ಝ.
ಶಕ್ತಿಸಮುದ್ಭವಃ—ಛ, ಟ, ಠ, ಡ, ಢ, ತ, ಥ ದ, ಧ, ಪ.

[2] ಗಣೇಶೀ ಚ—ಖ, ಗ. ಚ, ಝ.

[3] ಗಣೋನ್ಮನೀ—ತ.

[4] ಈ ಅರ್ಧ ಛ. ಪುಸ್ತಕದಲ್ಲಿಲ್ಲ.

[5] ಏಕೈಕಂ ತು—ಫ.

[6] ಚ—ಖ, ಗ, ಚ, ಝ.

[1]ಮನೋನ್ಮನೀಸಹಸ್ರಾಂಶಾತ್[2]
ಗೌರೀ ಜಾತೇತಿ ಕೀರ್ತಿತಾ ।
ತಸ್ಯಾಃ[3] ಸರಸ್ವತೀ ದುರ್ಗಾ
ಹ್ಯುಮಾಯಾಶ್ಚ ಪ್ರಭಾವತಃ ॥ ॥ ೧೪೭ ॥

ಶಚೀ ಜ್ಯೇಷ್ಠಾ ಚ ಲಕ್ಷ್ಮೀಶ್ಚ[4]
ತಥಾ ಚಾನ್ಯಾಶ್ಚ ಶಕ್ತಯಃ[5] ।
[6]ಕೋಟಿಶಕ್ತಯಃ ಏತಾ ವೈ[7]
ಗೌರೀದೇಹಸಮುದ್ಭವಾಃ ॥ ॥ ೧೪೮ ॥

ಶಕ್ತಿಭೇದೋ[8] ವಿಶೇಷೇಣ
ಸಮಾಸಾತ್ ಪರಿಕೀರ್ತಿತಃ[9] ।

ಮನೋನ್ಮನಿಯ ಸಾವಿರದಲ್ಲೊಂದಂಶದಿಂದ ಗೌರೀಶಕ್ತಿಯು ಉದ್ಭವಿಸಿತೆಂದು ಹೇಳುತ್ತಾರೆ. ಉಮಾಶಕ್ತಿಯಿಂದ ಪ್ರಭಾವಿತವಾದ ಗೌರೀಶಕ್ತಿಯಿಂದ ಸರಸ್ವತೀ ದುರ್ಗಾ,— ॥ ೧೪೭ ॥

—ಶಚೀ ಜ್ಯೇಷ್ಠಾ, ಲಕ್ಷ್ಮೀ ಶಕ್ತಿದೇವತೆಗಳ ಮತ್ತು ಚಾಮುಂಡೀ ಕಾಲೀ ಮುಂತಾದ ಇತರ ಶಕ್ತಿದೇವತೆಗಳ ಉದ್ಭವವಾಗುತ್ತದೆ. ಗೌರಿಯ ದೇಹದಿಂದ ಈ ಕೋಟಿಕೋಟಿ ಶಕ್ತಿದೇವತೆಗಳ ಆವಿರ್ಭಾವವಾಗುತ್ತದೆ. ॥ ೧೪೮ ॥

ಹೀಗೆ ಶಕ್ತಿಭೇದವನ್ನು ವಿಶೇಷರೂಪದಿಂದ ಸಂಗ್ರಹವಾಗಿ ನಿರೂಪಿಸಿದ್ದಾಯಿತು.

---

[1] ಈ ಅರ್ಧಪದ್ಯ ಛ. ಪುಸ್ತಕದಲ್ಲಿಲ್ಲ.

[2] ಸಹಸ್ರಾಶೇ—ಫ.

[3] ಲಕ್ಷ್ಮೀಃ—ಖ, ಗ, ಚ, ಝ.
ತ್ರಯಾ—ಕ, ಘ, ಟ, ಥ, ಧ.
ಶ್ರಿಯಾ—ಫ.

[4] ಜ್ಯೇಷ್ಠಾ ತಥಾ ಶಾನ್ತಾ—ಖ, ಗ, ಚ, ಝ.

[5] ತದನ್ಯಾಶ್ಚೈವ ಶಕ್ತಯಃ—ಧ.

[6] ಈ ಅರ್ಧ ಛ. ಪುಸ್ತಕದಲ್ಲಿಲ್ಲ.

[7] ಏತಾ ವೈ ಕೋಟಿಶಕ್ತಿಶ್ಚ—ಟ, ಠ, ಡ, ಢ, ತ, ಥ, ದ.
ಶಕ್ತೀನಾಂ ಕೋಟಯಶ್ಚೈವ—ಧ.

[8] ಶಕ್ತಿಭೇದಂ—ಘ, ಛ, ಪ, ಫ.

[9] ಪರಿಕೀರ್ತಿತಂ—ಘ, ಛ, ಪ, ಫ, ಛ. ಪುಸ್ತಕದಲ್ಲಿ ಇಲ್ಲಿಗೇ ಪಟಲಸಮಾಪ್ತಿಯಾಗಿದೆ.

[1]ಶಿವಾದಯೋ ಮಹೇಂಶಾಂತಾಃ
ಹ್ಯೇಕತ್ರಿಂಶತ್ ಪ್ರಕೀರ್ತಿತಾಃ ॥ ॥ ೧೪೯ ॥

ಯೋ ವೇತ್ತಿ ತತ್ತ್ವಭೇದಂ ಹಿ
ಸಪೂಜಾಸ್ಥಾಪನಾರ್ಹಕಃ ।
[2]ಏವಂ ತ್ರಿಮೂರ್ತಿಭೇದಸ್ತು
ಸಮಾಸಾತ್ ಪರಿಕೀರ್ತಿತಃ ॥
ತತ್ತ್ವಭೇದೋ ಮಯಾ ಪ್ರೋಕ್ತಃ[3]
ವರ್ಣಭೇದಮಥ ಶೃಣು[4] ॥ ॥ ೧೫೦ ॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ತತ್ತ್ವಭೇದೋ ನಾಮ ಪ್ರಥಮಃ ಪಟಲಃ

ಇದು ಶಿವತತ್ತ್ವ ಮೊದಲ್ಗೊಂಡು ಮಹೇಶತತ್ತ್ವದವರೆಗಿನ ಮೂವತ್ತೊಂದು ಭೇದಗಳ ವಿವರಣೆ. ॥ ೧೪೯ ॥

ಈ ತತ್ತ್ವಭೇದವನ್ನರಿತವನು ಶಿವತತ್ತ್ವದ ಪೂಜೆ ಮತ್ತು ಸ್ಥಾಪನೆಗಳಿಗೆ ಯೋಗ್ಯನಾಗುತ್ತಾನೆ. ಹೀಗೆ ಶಿವ ಸದಾಶಿವ ಮಹೇಶರೂಪವಾದ ತ್ರಿಮೂರ್ತಿಗಳ ಭೇದವನ್ನು ಸಂಗ್ರಹವಾಗಿ ನಿರೂಪಿಸಿದ್ದಾಯಿತು. ಷಣ್ಮುಖನೇ ! ತತ್ತ್ವಭೇದವನ್ನು ಹೇಳಿದ್ದಾಯಿತು. ಇನ್ನು ವರ್ಣಭೇದವನ್ನು ಕೇಳು. ॥ ೧೫೦ ॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ತತ್ತ್ವಭೇದೋ ನಾಮ ಪ್ರಥಮಃ ಪಟಲಃ

---

[1] ಈ ಅರ್ಧಪದ್ಯ—ಘ, ಟ, ಠ, ಡ, ಢ, ತ, ಥ, ದ, ಧ, ಫ. ಪುಸ್ತಕಗಳಲ್ಲಿಲ್ಲ.

[2] ಈ ಅರ್ಧಪದ್ಯ—ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

[3] ತತ್ತ್ವಭೇದಮಿದಂ ಪ್ರೋಕ್ತಂ—ಗ, ಟ, ಠ, ಧ, ಬ. ತತ್ತ್ವಭೇದಃ ಸಮಾಖ್ಯಾತಃ—ಚ. ತತ್ತ್ವಭೇದಮಯಂ ಪ್ರೋಕ್ತಃ—ಝ.

[4] ಈ ಅರ್ಧ—ಕ, ಘ, ಪುಸ್ತಕಗಳಲ್ಲಿ ಮಾತ್ರ ಕಂಡುಬರುತ್ತದೆ.

ದ್ವಿತೀಯ—ವರ್ಣಭೇದ ಪಟಲ

[1]ಸಮಸ್ತಬೀಜ[2]ಪ್ರಭವಸ್ಯ[3] ಕಾರಣಂ
ನಮಾಮಿ ದೇವಂ ಪ್ರಣವಾಂತರಸ್ಥಿತಮ್ ।
ತ್ರಿವರ್ಣ[4]ಸಂಭೂತವಿವರ್ಣ[5]ವರ್ಣಗಂ
ಸ್ವಶಕ್ತಿಸಂಕ್ಷೋಭಕರಂ ಪರಂ ಹರಮ್ ॥ ॥ ೧ ॥

ಅಥಾತಃ ಸಂಪ್ರವಕ್ಷ್ಯಾಮಿ
ವರ್ಣಭೇದವಿಧಿಂ[6] ಪರಮ್[7] ।

ಅಕಾರದಿಂದ ಕ್ಷಕಾರದವರೆಗಿನ ಸಕಲ ಬೀಜಾಕ್ಷರಗಳ ಉತ್ಪತ್ತಿಗೆ ಕಾರಣನಾದ, ಪ್ರಕಾಶಮಾನನಾದ, ಓಂಕಾರದ ಮಧ್ಯದಲ್ಲಿರುವ, ತತ್ತ್ವ-ಮೂರ್ತಿ-ಪ್ರಭಾವಗಳಿಂದ ಮೂರುಬಗೆಯಾದ, ಶುಕ್ಲಾದಿ ವಿಭಿನ್ನ ಬಣ್ಣಗಳಿಂದ ಕೂಡಿದ, ಅಕಾರಾದಿ ಕ್ಷಕಾರಾಂತ ವರ್ಣಗತನಾದ, ತನ್ನ ಪರಾಶಕ್ತಿರೂಪವಾದ ಬಿಂದುವನ್ನು ಕ್ಷೋಭೆಗೊಳಿಸುವವನಾದ, ಶ್ರೇಷ್ಠನಾದ, ಸಂಸಾರಬಂಧವನ್ನು ಪರಿಹರಿಸುವವನಾದ ಹರನನ್ನು ವಂದಿಸುತ್ತೇನೆ. ॥ ೧ ॥

ತತ್ತ್ವಪ್ರಭೇದವನ್ನು ನಿರೂಪಿಸಿದ ತರುವಾಯ ಉತ್ಕೃಷ್ಟವಾದ ವರ್ಣಗಳ ಭೇದವಿಧಾನವನ್ನೂ, ಸಮಸ್ತ ಮಂತ್ರಗಳ ಉದ್ಭವವನ್ನೂ, ಅಕ್ಷರಗಳ ಉತ್ಪತ್ತಿಯನ್ನೂ ಹೇಳುವೆನು. ॥ ೨ ॥

---

[1] ಈ ಪದ್ಯ—ಖ, ಜ, ಫ, ಭ. ಪುಸ್ತಕಗಳಲ್ಲಿಲ್ಲ.
[2] ಬೀಜಂ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ತ, ದ.
[3] ಪ್ರಭಾವಸ್ಯ—ಕ, ಪ.
[4] ತ್ರಿವರ್ಗ—ಟ.
[5] ವಿವರ್ಣಂ—ಟ.
[6] ಭೇದಂ ವಿಧಂ—ಕ.
ಭೇದವಿಧಂ—ಘ.
[7] ಕ್ರಮಂ—ಡ, ಪ.

ಮನ್ತ್ರಾಣಾಮುದ್ಭವಂ ಚೈವ[1]
ವರ್ಣಾನಾಂ ಚ ಸಮುದ್ಭವಮ್[2] ॥ ॥ ೨ ॥

ಅಕಾರಾದಿಕ್ಷಕಾರಾನ್ತಾಃ[3]
ಏಕಪಂಚಾಶದಕ್ಷರಮ್[4] ।
ಏತೇ ವರ್ಣಾಃ ಪ್ರಶಸ್ಯಂತೇ
ಕಾಮಿತಾರ್ಥಪ್ರದಾಯಕಾಃ[5] ॥ ॥ ೩ ॥

ಸ್ತ್ರೀರೂಪಾಶ್ಚೈವ ಪುಂರೂಪಾಃ[6]
ತಥಾ ಚೋ[7]ಭಯರೂಪಕಾಃ[8] ।
ಸರ್ವೇ ವೈ[9] ದೇವತಾರೂಪಾಃ[10]
ಪ್ರತ್ಯೇಕಂ ವರ್ಣರೂಪಧೃತ್[11] ॥ ॥ ೪ ॥

ಅಕಾರ ಮೊದಲುಗೊಂಡು ಕ್ಷಕಾರದವರೆಗಿನ ಅಕ್ಷರಗಳು ಐವತ್ತೊಂದು. ಈ ಅಕ್ಷರಗಳು ಬಯಸಿದ ಪ್ರಯೋಜನವನ್ನು ಕೊಡುತ್ತವೆಯೆಂದು ಹೇಳುತ್ತಾರೆ. ॥ ೩ ॥

ಸ್ತ್ರೀಲಿಂಗವಾಗಿಯೂ ಪುಲ್ಲಿಂಗವಾಗಿಯೂ ಹಾಗೆಯೇ ನಪುಂಸಕಲಿಂಗವಾಗಿಯೂ ಇರುವ ಈ ಸಮಸ್ತವರ್ಣಗಳು ದೇವತಾಸ್ವರೂಪವನ್ನೂ ಧರಿಸಿವೆ. ॥ ೪ ॥

---

[1] ಮುದ್ಭವತ್ವಂ ಚ—ಕ, ಗ, ಚ, ಛ, ಟ, ಠ, ಥ.
ಮುದ್ಭವಂ ಕಿಂಚಿತ್—ಪ.

[2] ವರ್ಣಾನಿ ಚ ಸಮುದ್ಭವಂ—ಡ, ಪ.
ವರ್ಣನಾಮುದ್ಭವಂ ಭವೇತ್—ಥ.
ವರ್ಣಾನಿ ಚ ಸಮುದ್ಭವಃ—ಪ, ಡ.

[3] ಕ್ಷಕಾರಾನ್ತಾಃ—ಚ, ಜ, ತ.

[4] ದಕ್ಷರಾಃ—ಚ, ಜ, ತ.

[5] ಪ್ರದಾಯಕಮ್—ಪ, ಡ.

[6] ಸ್ತ್ರೀರೂಪಂ ಪುಂಸರೂಪಂ ಚ—(ಡ)
ಸ್ತ್ರೀರೂಪಂ ಪುಂರೂಪ ಚ—(ಪ)

[7] ಸ್ಥಿತಾಶ್ಚೋ—ಛ.

[8] ರೂಪಕಂ—ಝ, ಠ, ಡ, ಪ.

[9] ಸರ್ವೇ ಚ—ಜ.

[10] ರೂಪಂ—ಡ, ಪ, ಝ.

[11] ಧೃಕ್—ಖ, ಗ, ಚ, ಝ.

ವರ್ಣಂ[1] ಬೀಜಂ ತಥಾಽರ್ಣಶ್ಚ[2]
ಲಿಂಗಮಕ್ಷರಮಾತೃಕಮ್[3] ।
ಏತಾನಿ[4] ಷಟ್ ಚ ನಾಮಾನಿ[5]
ವರ್ಣಪರ್ಯಾಯವಾಚಕಾಃ ॥ ॥ ೫ ॥

ತೇಭ್ಯಃ[6] ಸಮುದ್ಭವೋ[7] ನಾಮ-
ರೂಪಭೇದಸ್ತ[8]ಥಾಂಶಕಃ[9] ।
ತತ್ತ್ವಮನ್ತ್ರಾದಿ[10]ಭೇದಶ್ಚಾ[11]-
ಪ್ಯಧಿದೈವ[12]ಫಲಂ ತಥಾ[13] ॥ ॥ ೬ ॥

ವರ್ಣ ಬೀಜ ಅರ್ಣ ಲಿಂಗ ಅಕ್ಷರ, ಮಾತೃಕೆ, ಈ ಆರೂ ವರ್ಣಪರ್ಯಾಯ ನಾಮುಗಳು. ॥ ೫ ॥

ಆ ಐವತ್ತೊಂದಕ್ಷರಗಳಿಂದ ನಾಮ ಮತ್ತು ಸ್ವರೂಪಗಳ ಭೇದವೂ, ಹಾಗೆಯೇ ಅಂಶರೂಪವಾಗಿ ತತ್ತ್ವ ಮಂತ್ರಾದಿಗಳ ಭೇದವೂ ಮತ್ತು ಅಧಿದೈವ ಹಾಗೂ ಫಲ ಭೇದಗಳೂ ಹುಟ್ಟಿದವು. ॥ ೬ ॥

---

[1] ವರ್ಣೇ—ಕ, ಖ.

[2] ತಥಾ ಕೂಟಂ—ಡ, ಪ.
ತಥಾರ್ಣಂ ಚ—ಖ, ಗ, ಚ, ಝ.

[3] ಮಾತೃಕಾ—ಝ, ಡ, ಪ.

[4] ಏತೇ ನ್ಯೈ—ಖ, ಗ, ಚ, ಜ, ಝ.

[5] ಷಟ್ ಸುಕಂಮಾನಿ—ಘ.
ಷಟ್ ಚ ಭೇದಾನಿ—ಡ, ಪ.

[6] ತೇಷಾಂ—ಕ, ಖ, ಝ.
ಏಷಾಂ—ಥ.

[7] ಸಮುದ್ಭವಂ—ಖ, ಗ, ಚ, ಝ.

[8] ರೂಪಭೇದಂ ತ—ಖ, ಗ, ಚ, ಜ, ಝ.
ರೂಪಂ ಭೇದಂ—ಟ.

[9] ಥಾಂಶಕಂ ಖ, ಗ, ಚ, ಜ, ಝ.
ಥಾಂಶಕಂ—ಛ.
ರೂಪಭೇದಾಶ್ಚ ಕ್ರಮಂ ತಥಾ - ಡ.

[10] ತತ್ತ್ವಮೂರ್ತ್ಯಾದಿ—ಧ.

[11] ಭೇದಂ ಚಾ—ಖ, ಗ, ಚ, ಜ, ಝ.

[12] ದೇವಂ—ಡ, ಧ, ಪ, ಫ.

[13] ಯಥಾ—ಘ, ಛ, ಟ, ತ.

ಸ್ಥೂಲಸೂಕ್ಷ್ಮಾಕೃತಿಂ ಚೈವ[1]
ಜೀವೋಪಾಧಿವಿಭೇದಕಮ್ ।
ಏತದ್ಭೇದಂ[2] ಸಮಾಸೇನ[3]
ಸಂಕ್ಷೇಪಾತ್ ಶೃಣು[4] ಷಣ್ಮುಖ ॥ ॥ ೭ ॥

ಶಿವತತ್ತ್ವಾತ್ ಪರಾತ್ ಸೂಕ್ಷ್ಮಾತ್[5]
ಬಿಂದುರೂಪಂ ಚ ಜಾಯತೇ ।
ಬಿಂದೋರ್ನಾದಃ[6] ಸಮುತ್ಪನ್ನಃ[7]
ನಾದಾತ್ ಶಕ್ತಿರಜಾಯತ[8] ॥ ॥ ೮ ॥

ಶಕ್ತೇಸ್ತು ಜಾಯತೇ ಶಬ್ದಃ
ಶಬ್ದಾಜ್ಜಾತಂ ತು[9] ವಾಗ್ಭವಮ್[10] ।

ಎಲೈ ಷಣ್ಮುಖನೇ! ವರ್ಣಗಳ ಸ್ಥೂಲಾಕಾರ ಸೂಕ್ಷ್ಮಾಕಾರ ಜೀವಭೇದ ಮತ್ತು ಉಪಾಧಿಗಳನ್ನು ಕ್ರಮವಾಗಿ ಸಂಕ್ಷೇಪವಾಗಿ ಹೇಳುವೆನು ಕೇಳು. ॥ ೭ ॥

ಉತ್ಕೃಷ್ಟವೂ ವ್ಯೋಮಾತೀತವೂ ಆದ ಶಿವತತ್ತ್ವದ ದೆಸೆಯಿಂದ ಬಿಂದುಸ್ವರೂಪವು ಹುಟ್ಟುತ್ತದೆ. ಕುಂಡಲಿನೀಶಕ್ತಿಯಾದ ಬಿಂದುವಿನಿಂದ ನಾದವು ಜನಿಸುತ್ತದೆ. ನಾದದಿಂದ ಶಕ್ತಿಯು ಉತ್ಪನ್ನವಾಯಿತು. ॥ ೮ ॥

ಶಕ್ತಿಯ ದೆಸೆಯಿಂದ ಶಬ್ದವು ಹುಟ್ಟುತ್ತದೆ. ಶಬ್ತದಿಂದ ವಾಗ್ಭವವು ಹುಟ್ಟು

---

[1] ಕೃತಿಶ್ಚೈವ—ಡ, ಪ, ಪ.
[2] ಏತತ್ಸರ್ವಂ—ಡ, ಪ.
[3] ಮಹಾಸೇನ—ಖ, ಗ, ಚ, ಝ.
[4] ಶ್ರೂಯತಾಮಪಿ—ಡ, ಪ.
[5] ಶಿವತತ್ತ್ವೇ ಪರೇ ಸೂಕ್ಷ್ಮೇ—ಖ, ಗ, ಚ, ಜ, ಝ.
[6] ರ್ನಾದಂ—ಥ.
[7] ಸಮುತ್ಪನ್ನಂ—ಛ, ಟ, ತ, ಥ. ದ, ಪ.
[8] ನಾದಾನ್ತೇ ಶಕ್ತಿ ಜಾಯತೇ—ಗ, ಘ, ಛ, ಟ, ಠ, ಡ, ಢ, ತ, ಥ, ದ, ಪ.
[9] ಚ್ಚಾಯೇತ—ಗ, ಜ.
[10] ವಾಗ್ಭವೇತ್—ಥ.

ವಾಗ್ಭವಾಚ್ಚ[1] ಕಲಾಃ ಜಾತಾಃ
ಕಲಾಭ್ಯೋ ಸಕಲಾಸ್ತಥಾ[2] ॥ ॥ ೯ ॥

ಕಲಾಶ್ಚ ವಿಕಲಾಶ್ಚೈವ
ವರ್ಣಾಶ್ಚೈವ ಸಮುದ್ಭವಾಃ ।
ಪ್ರಣವಃ ಪ್ರಥಮಂ ಪ್ರೋಕ್ತಃ
ಆ ಈ ಊ ತದನಂತರಮ್[3] ॥ ॥ ೧೦ ॥

[4]ತಸ್ಮಾದ್ವೈ ವಾಚಕೋ ಮನ್ತ್ರಃ
ಮನ್ತ್ರಸ್ತೈರೇವ[5] ಭಿದ್ಯತೇ ।
ಏವಂ[6] ಸೃಷ್ಟಿಕ್ರಮಃ ಪ್ರೋಕ್ತಃ[7]
ತೇಷಾಂ[8] ಲಕ್ಷಣಮುಚ್ಯತೇ ॥ ॥ ೧೧ ॥

ತ್ತದೆ. ವಾಗ್ಭವದಿಂವ ಕಲಾಕ್ಷರಗಳೂ, ಕಲಾಕ್ಷರಗಳಿಂದ ವಿಕಲಾಕ್ಷರಗಳೂ ಹುಟ್ಟುತ್ತವೆ. ॥ ೯ ॥

ಹೀಗೆ ಕಲೆ ಮತ್ತು ವಿಕಲೆಗಳೆಂಬ ಸಮಸ್ತವರ್ಣಗಳೂ ಹುಟ್ಟುತ್ತವೆ. ಮೊದಲು ಓಂಕಾರವು ಉಕ್ತವಾಗುತ್ತದೆ. ಅದರ ತರುವಾಯ ಅ, ಇ, ಉ—ವರ್ಣಗಳು ಉಕ್ತವಾಗುತ್ತವೆ. ॥ ೧೦ ॥

ವರ್ಣೋದ್ಧೃತವಾದ್ದರಿಂದಲೇ ಮಂತ್ರವು ವಾಚಕವೆನಿಸಿಕೊಳ್ಳುತ್ತದೆ. ಆ ಬಿಂದ್ವಾದಿಗಳಿಂದಲೇ ಮಂತ್ರವು ಭೇದವನ್ನು ಹೊಂದುತ್ತದೆ. ಹೀಗೆ ಸೃಷ್ಟಿಕರ್ಮವು ಹೇಳಲ್ಪಟ್ಟಿತು. ಇನ್ನೂ ಆ ಬಿಂದ್ವಾದಿಗಳ ಲಕ್ಷಣವನ್ನು ಹೇಳುತ್ತೇನೆ. ॥ ೧೧ ॥

---

[1] ವಾಗ್ಭವೇ ತು—ಡ, ಪ, ಫ.

[2] ಲಾಃ ಸ್ಮೃತಾಃ—ಢ.

[3] ಈ ಪದ್ಯ—ಫ. ಪುಸ್ತಕದಲ್ಲಿ ಮಾತ್ರ ದೊರೆಯುತ್ತದೆ.

[4] ಈ ಅರ್ಧಪದ್ಯಸ್ಥಾನದಲ್ಲಿ ಫ, ಪುಸ್ತಕದಲ್ಲಿ "ತಸ್ಯ ವಾಚಕಮ ಕ್ರಾಶ್ಚ ಮಂತ್ರಸ್ತೈರೇವ ಭಿದ್ಯತೇ" ಎಂಬ ಪಾಠವಿದೆ.

[5] ಸ್ತೇನೈವ—ಪ.

[6] ಏತತ್—ಕ, ಖ, ಗ, ಜ, ಝ, ಟ, ಠ, ಡ, ಢ, ತ, ಥ, ದ, ಧ.
ತತ್—ಛ.

[7] ಕ್ರಮಂ ಪ್ರೋಕ್ತಂ—ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಪ.

[8] ತತೋ—ಚ.

[1]ಬಿಂದುರೂಪಾ[2] ಪರಾ ಶಕ್ತಿಃ
ನಾದಶ್ಚೈವಾದಿರುಚ್ಯತೇ[3] ।
ಶಕ್ತಿರಿಚ್ಛೇತಿ ವಿಜ್ಞೇಯಾ[4]
ಶಬ್ದೋ ಜ್ಞಾನಮಿಹೋಚ್ಯತೇ[5] ॥ ॥ ೧೨ ॥

ವಾಗ್ಭವಂ[6] ಸ್ಯಾತ್ ಕ್ರಿಯಾಶಕ್ತಿಃ
ಕಲಾ ವೈ ಷೋಡಶಸ್ವರಾಃ
ತೇಷಾಂ ರೂಪಂ ದ್ವಿಧಾ[7] ಪ್ರೋಕ್ತಃ
ಪ್ರಕೃತಿರ್ವಿಕೃತಿಸ್ತಥಾ ॥ ॥ ೧೩ ॥

ಪ್ರಕೃತಿಃ ಸಪ್ತ ವರ್ಣಾಶ್ಚ[8]
ವಿಕೃತಿಸ್ತು ನವಾರ್ಣಕಾಃ[9] ।

ಶಿವನ ಪರಾಶಕ್ತಿಯು ಬಿಂದುರೂಪವಾಗುತ್ತದೆ. ಆದಿಶಕ್ತಿಯನ್ನು ನಾದವೆಂದು ಹೇಳುತ್ತಾರೆ. ಇಚ್ಛಾಶಕ್ತಿಯನ್ನೇ ಶಕ್ತಿಯೆಂದು ತಿಳಿಯಬೇಕು. ಇಲ್ಲಿ ಜ್ಞಾನಶಕ್ತಿಯೇ ಶಬ್ದವು. ॥ ೧೨ ॥

ಕ್ರಿಯಾಶಕ್ತಿಯು ವಾಗ್ಭವ ತತ್ತ್ವ. ಹದಿನಾರು ಸ್ವರಗಳು ಕಲೆಗಳೆನಿಸುತ್ತವೆ. ಸ್ವರಗಳ ಸ್ವರೂಪವು ಪ್ರಕೃತಿ ಮತ್ತು ವಿಕೃತಿಯೆಂದು ಎರಡು ವಿಧ. ॥ ೧೩ ॥

ಏಳು ವರ್ಣಗಳಿಗೆ ಪ್ರಕೃತಿಯೆಂದೂ ಒಂಭತ್ತು ವರ್ಣಗಳಿಗೆ ವಿಕೃತಿಯೆಂದೂ ಹೆಸರು. ಅಕಾರ, ಇಕಾರ, ಉಕಾರ, ಋಕಾರ— ॥ ೧೪ ॥

---

[1] ಈ ಅರ್ಧಪದ್ಯ—ಡ, ಫ, ಪುಸ್ತಕಗಳಲ್ಲಿಲ್ಲ.
[2] ರೂಪಂ—ಛ, ಟ, ಠ, ದ, ಧ, ಪ, ಬ.
[3] ದಿರೀರಿತಃ—ಖ.
[4] ವಿಜ್ಞೇಯಂ—ಕ.
[5] ಶಬ್ದಶ್ಚ ಜ್ಞಾನಮೀರಿತಃ—ಖ, ಝ.
[6] ವಾಗ್ಭವಾ—ಕ, ಖ, ತ.
[7] ಯಥಾ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ.
[8] ವರ್ಣಾನಿ—ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ.
[9] ನವಾರ್ಣಕಂ—ಗ, ಚ, ಜ, ತ, ದ.

ಅಕಾರಶ್ಚ ಇಕಾರಶ್ಚ[1]
ಉಕಾರಶ್ಚ[2] ಋಕಾರಕಃ[3] ॥ ॥ ೧೪ ॥

ಇಕಾರಶ್ಚೈವ ಏಕಾರಃ
ಓಕಾರಶ್ಚ ತಥೈವ ಚ ।
ಏತೇ ಸಪ್ತಸ್ವರಾಃ ಪ್ರೋಕ್ತಾಃ
ಪ್ರಕೃತಿಸ್ತು ಸಮೀರಿತಾಃ ॥ ॥ ೧೫ ॥

ಶೇಷಾಸ್ತು ವಿಕೃತಿಃ[4] ಪ್ರೋಕ್ತಾಃ[5]
ತೇಷಾ[6]ಮುದ್ಭವ[7] ಉಚ್ಯತೇ ।
ಅಕಾರಜನ್ಯಶ್ಚಾಕಾರಃ[8]
ಇಕಾರೇ ತ್ವೀಸಮುದ್ಭವಃ[9] ॥ ॥ ೧೬ ॥

—ಲೃಕಾರ ಏಕಾರ ಮತ್ತು ಓಕಾರ ಈ ಏಳು ಸ್ವರವರ್ಣಗಳನ್ನು ಪ್ರಕೃತಿಗಳೆಂದು ಕರೆಯುತ್ತಾರೆ. ॥ ೧೫ ॥

ಉಳಿದ ಒಂಬತ್ತು ಸ್ವರವರ್ಣಗಳು ವಿಕೃತಿಗಳು. ಇನ್ನು ಅವುಗಳ ಉತ್ಪತ್ತಿಯನ್ನು ಹೇಳುತ್ತೇನೆ. ಆಕಾರವು ಅಕಾರದಿಂದ ಹುಟ್ಟಿತು. ಇಕಾರದಲ್ಲಿ ಈಕಾರ ಉದ್ಭವವಾಗುತ್ತದೆ. ॥ ೧೬ ॥

---

[1] ರಂ ಚ—ಛ, ಟ, ಠ, ಡ, ಢ, ತ, ಥ, ದ, ಧ, ಫ.

[2] ಕಾರಂ ಚ—ಛ, ಟ, ಠ, ಡ, ಢ, ತ, ಥ, ದ, ಧ. ಫ.
ತಥೋಕಾರ—ಚ.

[3] ಋಕಾರಕಃ—ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ.

[4] ಶೇಷಾ ವಿಕೃತಯಃ—ಕ, ಖ, ಚ, ಝ, ಧ.

[5] ಪ್ರೋಕ್ತಂ—ಘ.

[6] ತಾಸಾಂ—ಚ.

[7] ಮುದ್ಭವಂ—ಗ, ಘ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

[8] ಆಕಾರೇ ಚೋದ್ಭವಾಕಾರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ.

[9] ತ್ವೀಕಾರಸಂಭವಃ—ಘ, ಜ, ಟ, ಠ, ಡ.
ತ್ವೀಸಮುದ್ಭವಂ—ಛ, ಢ, ತ, ಥ, ದ.

ಉಕಾರೇ ಚೈವ ಊಕಾರಃ[1]
ಋಕಾರೇ ಋೂಸಮುದ್ಭವಃ[2] ।
ಇಕಾರೇ ಚೈವ ಈಕಾರಃ[3]
ಏಕಾರಾದ್ಯೈ[4]ಸಮುದ್ಭವಃ[5] ॥ ॥ ೧೭ ॥

ಓಕಾರಾದೌ[6]ಸ್ತ್ತಥಾ ಜ್ಞೇಯಃ
ಕ್ರಮೇಣೈವ ಸಮುದ್ಭವಾಃ[7] ।
ಏತೇ ವಿಕೃತಯಃ[8] ಪ್ರೋಕ್ತಾಃ
ಅಕಾರಾದಿನವಾರ್ಣಕಾಃ ॥ ೧೮ ॥

ಅಕಾರಾದಿ ವಿಸರ್ಗಾಂತಾಃ[9]
ಏತೇ[10] ವೈ ಷೋಡಶ ಸ್ವರಾಃ ।

ಉಕಾರದಿಂದ ಊಕಾರವೂ, ಋಕಾರದಿಂದ ಋೂಕಾರವೂ, ಇಕಾರದಿಂದ ಈಕಾರವೂ, ಏಕಾರದಿಂದ ಐಕಾರವೂ ಉದ್ಭವಿಸುತ್ತವೆ. ॥ ೧೭ ॥

ಓಕಾರದಿಂದ ಔಕಾರವು ಹುಟ್ಟುತ್ತದೆ. ಹೀಗೆ ಅಕಾರಾದಿ ಹ್ರಸ್ವಗಳಿಂದ ಆಕಾರಾದಿದೀರ್ಘಗಳು ಕ್ರಮವಾಗಿ ಹುಟ್ಟುತ್ತವೆ. ಆ, ಈ, ಊ, ಋೂ, ೡ, ಐ, ಔ, ಅಂ, ಅಃ ಈ ಒಂಭತ್ತು ವರ್ಣಗಳು ವಿಕೃತಿಗಳು. ॥ ೧೮ ॥

ಅಕಾರದಿಂದ ವಿಸರ್ಗದವರೆಗಿನ ಈ ಹದಿನಾರು ವರ್ಣಗಳು ಸ್ವರಗಳೆನಿಸುತ್ತವೆ. ಕಲಾ, ಮಾತ್ರಾ, ಸ್ವರ, ಜೀವ ಪ್ರಕೃತಿ, ಹಾಗೂ ವಿಕೃತಿ— ॥ ೧೯ ॥

---

[1] ಊಕಾರಂ—ಛ, ಟ, ಡ, ಢ, ಠ, ತ, ಥ, ದ, ಪ.

[2] ತು ಋೂಕಾರಕಂ—ಫ. ಋೂಸಮುದ್ಭವಂ—ಡ.

[3] ಲೃಕಾರಂ—ಘ, ಡ, ಢ, ತ, ಥ, ದ, ಪ, ಫ, ಭ.

[4] ಏಕಾರೇ ತ್ವೈ—ಗ, ಚ, ಜ, ಪಾ.

[5] ಸಂಭವಃ—ಟ, ಠ, ಢ, ತ, ಥ, ದ.

[6] ಓಕಾರೇ ಚೌ—ಖ, ಗ, ಚ, ಜ, ಝ.
ಓಕಾರೇ ಔ—ಘ, ಥ, ಧ, ಪ.

[7] ಸಮುದ್ಭವಃ—ಖ, ಗ, ಚ, ಜ, ಝ.

[8] ಏತೇ ವೈ ವಿಕೃತಿಃ—ಗ, ಘ, ಛ, ಜ, ಪ.

[9] ವಿಸರ್ಗಾಂತಂ—ಝ, ಡ, ಪ.

[10] ಃಸ್ತೈತೇ—ಧ. ಏತಾ—ಡ.

ಕಲಾ ಮಾತ್ರಾಃ[1] ಸ್ವರಾಃ ಜೀವಾಃ
ಪ್ರಕೃತಿರ್ವಿಕೃತಿಸ್ತಥಾ ॥ ॥ ೧೯ ॥

ಪ್ರಾಣ ಆತ್ಮಾ ನಾ ಚ ದೇಹೀ[2]
ಕಲಾ ಪರ್ಯಾಯವಾಚಕಾಃ[3] ।
[4]ಏತಾನಿ ದಶ ನಾಮಾನಿ
ಕಲಾಸ್ವೇವ ಪ್ರಯುಂಜತೇ[5] ॥ ॥ ೨೦ ॥

ಕಾಲಭೇದಸ್ತ್ವಯಂ ಪ್ರೋಕ್ತಃ[6]
ವಿಕಲಾಭೇದಕಂ[7] ಶೃಣು ।
ಕಕಾರಾದಿಕ್ಷಕಾರಾನ್ತಾಃ[8]
ವರ್ಣಾಶ್ಚ ವಿಕಲಾಃ ಸ್ಮೃತಾಃ[9] ॥ ॥ ೨೧ ॥

—ಪ್ರಾಣ, ಆತ್ಮಾ ನಾ—ಪುರುಷ ಮತ್ತು ದೇಹೀ ಎಂಬ ಶಬ್ದಗಳು ಕಲಾ ಶಬ್ದದ ಪರ್ಯಾಯಗಳು. ಈ ಹತ್ತು ನಾಮಗಳನ್ನು ಕಲೆಗಳಿಗೆ ಪ್ರಯೋಗಿಸುತ್ತಾರೆ. ॥ ೨೦ ॥

ಕಲಾಭೇದವನ್ನು ಹೇಳಿದ್ದಾಯಿತು. ಇನ್ನು ವಿಕಲಾಭೇದವನ್ನು ಕೇಳು. ಕಕಾರ ಮೊದಲ್ಗೊಂಡು ಕ್ಷಕಾರದವರೆಗಿನ ವರ್ಣಗಳು ವಿಕಲಗಳು. ॥ ೨೧ ॥

---

[1] ಮಂತ್ರಾಃ—ಕ.

[2] ಪ್ರಾಣಾ ಆತ್ಮಾ ಚ ದೇಹೀ ಚ—ಗ, ಚ.
ಪ್ರಾಣಾತ್ಮನಾ ಚ ದೇಹೀ ಚ—ಕ, ಘ, ಥ, ಟ, ಭ.
ಪ್ರಾಣಾತ್ಮನೌ ಚ ದೇಹೀ ಚ—ಖ, ಝ.
ಪ್ರಾಣಶ್ಚಾತ್ಮಾ ಚ ದೇಹೀ ಚ—ಧ.
ಪ್ರಾಣಾತ್ಮನಶ್ಚ ದೇಹೀ ಚ—ಫ.

[3] ವಾಚಕಃ—ಡ, ಪ.

[4] ಈ ಅರ್ಧಪದ್ಯ—ಕ, ಛ, ಝ, ಟ, ಠ, ಡ, ಢ, ತ, ಥ, ಧ, ಫ. ಪುಸ್ತಕಗಳಲ್ಲಿಲ್ಲ.

[5] ಕಲಾನಾಮೇವ ಯುಜ್ಯತೇ—ಖ, ಗ, ಚ, ಜ.

[6] ಭೇದಮಿದಂ— ಪ್ರೋಕ್ತಂ—ಕ, ಖ, ಗ, ಘ, ಛ, ಜ, ಝ, ಟ, ಠ, ಡ, ಢ, ತ, ಥ, ದ.

[7] ಭೇದಮಥ—ಡ, ಬ.

[8] ಕ್ಷಕಾರಾನ್ತಂ—ಡ. ಥ, ಧ, ಪ, ಫ.

[9] ವಿಕಲಾನಿ ತತಃ—ಫ.

[1]ಕಕಾರಾದೀತಿ ಪಂಚಾರ್ಣಂ
ಅಕಾರಾತ್ತು ಸಮುದ್ಭವಮ್[2] |
ಚಕಾರಾದೀತಿ ಪಞ್ಚಾರ್ಣಂ
ಇಕಾರಾತ್ತು ಸಮುದ್ಭವಮ್[3] ॥ ॥ ೨೨ ॥

[4]ಟಕಾರಾದೀತಿ ಪಞ್ಚಾರ್ಣಂ
ಋಕಾರಾತ್ತು ಸಮುದ್ಭವಮ್ |
ತಕಾರಾದೀತಿ ಪಞ್ಚಾರ್ಣಂ
ಇಕಾರಾತ್ತು ಸಮುದ್ಭವಮ್ ॥ ॥ ೨೩ ॥

[5]ಪಕಾರಾದೀತಿ ಪಂಚಾರ್ಣಂ
ಉಕಾರಾತ್ತು ಸಮುದ್ಭವಮ್[6] |

ಕಕಾರದಿಂದ ಮೊದಲಾಗುವ ಐದು ವರ್ಣಗಳು ಅಕಾರದಿಂದ ಹುಟ್ಟುತ್ತವೆ. ಚಕಾರದಿಂದ ಮೊದಲಾಗುವ ಐದು ವರ್ಣಗಳು ಇಕಾರದಿಂದ ಹುಟ್ಟುತ್ತವೆ. ॥ ೨೨ ॥

ಟಕಾರ ಮೊದಲಾದ ಐದು ವರ್ಣಗಳು ಋಕಾರದಿಂದ ಹುಟ್ಟುತ್ತವೆ. ತಕಾರ ಮೊದಲಾದ ಐದು ವರ್ಣಗಳು ಇಕಾರದಿಂದ ಹುಟ್ಟುತ್ತವೆ. ॥ ೨೩ ॥

---

[1] ಈ ಅರ್ಧಪದ್ಯ—ಕ, ಘ, ಛ, ಟ, ಠ, ಭ. ಪುಸ್ತಕಗಳಲ್ಲಿಲ್ಲ.

[2] ಕಕಾರಾದೀನಿ ವರ್ಣಾನಿ ಅಕಾರೇ ತು ಸಮುದ್ಭವಾಃ—ಜ.
ಕಕಾರಾದೀನಿ ವರ್ಣಾನಿ ಇ(ಅ)ಕಾರೇ ತು ಸಮುದ್ಭವಾಃ—ಗ, ಚ.
ಕಕಾರಾದೀನಿ ಪಂಚಾರ್ಣಾಃ ಇಕಾರೇ ತು ಸಮುದ್ಭವಾಃ—ಝ.
ಕಕಾರಾದೀತಿ ಪಂಚಾರ್ಣಂ ಅಕಾರೇ ತು ಸಮುದ್ಭವಂ—ಡ, ಪ.

[3] ಚಕಾರಾದೀತಿ ಪಂಚಾರ್ಣಾ ಉಕಾರೇ ತು ಸಮುದ್ಭವಾಃ—ಗ, ಚ, ಝ, ತ, ಥ, ದ, ಢ
ಚಕಾರಾದೀತಿ ಪಂಚಾರ್ಣಂ ಉಕಾರೇ ತು ಸಮುದ್ಭವಂ—ಡ, ಪ.

[4] ಗ್ರಂಥಗಳಲ್ಲೆಲ್ಲೂ ದೊರಯದ ಈ ಪದ್ಯವನ್ನು ಸಂದರ್ಭದ ಮತ್ತು ಕ್ರಮದ ಔಚಿತ್ಯದಿಂದ ಸಂಯೋಜಿಸಲಾಗಿದೆ.

[5] ಈ ಅರ್ಧಪದ್ಯ—ಕ, ಖ, ಘ, ಛ, ಜ, ಟ, ಠ, ಡ, ಧ, ಪ,. ಫ, ಬ, ಭ. ಪುಸ್ತಕಗಳಲ್ಲಿಲ್ಲ.

[6] ಪಕಾರಾದೀನಿ ಪಂಚಾರ್ಣಾ ಏಕಾರೇ ತು ಸಮುದ್ಭವಾಃ—ಗ, ಚ, ಝ, ಢ, ತ, ಥ, ದ.
ಪಕಾರಾದೀತಿ ಪಂಚಾರ್ಣಮೇಕಾರೇ ತು ಸಮುದ್ಭವಂ—ಡ, ಪ.

[1]ಓಕಾರಾತ್ತು ಸಮುದ್ಭೂತಾ
ಯಕಾರಾದಿ ದಶ ಸ್ಮೃತಾಃ[2] ॥ ॥ ೨೪ ॥

[3]ಕಕಾರಾಚ್ಚ [4]ಸಮುದ್ಭೂತಾಃ
ಯಕಾರಾದಿ ದಶಾ[ರ್ಣಕಾಃ]ಕ್ಷರಾಃ ।
ಏತೇ ವೈ ವಿಕಲಾಃ ಪ್ರೋಕ್ತಾಃ
ತೇ ಪಞ್ಚತ್ರಿಂಶದ[ರ್ಣಕಾಃ]ಕ್ಷರಾಃ[5] ॥ ॥ ೨೫ ॥

ದೇಹೋಪಾಧಿಶರೀರಾಣಿ[6]
ಕ್ಷೇತ್ರಾಧಾರೌ[7] ತನುಸ್ತಥಾ ।
ವ್ಯಂಜನಂ ವಿಕಲಾ ಶಕ್ತಿಃ
ಬಿನ್ದುಪರ್ಯಾಯವಾಚಕಾಃ[8] ॥ ॥ ೨೬ ॥

ಪಕಾರ ಮೊದಲಾದ ಐದು ವರ್ಣಗಳು ಉಕಾರದಿಂದ ಹುಟ್ಟುತ್ತವೆ. ಯಕಾರ ಮೊದಲಾದ ಹತ್ತು ವರ್ಣಗಳು ಓಕಾರದಿಂದ ಹುಟ್ಟುತ್ತವೆ. ॥ ೨೪ ॥

ಯಕಾರ ಮೊದಲಾದ ಹತ್ತು ವರ್ಣಗಳು ಕಕಾರದಿಂದಲೂ ಹುಟ್ಟುತ್ತವೆ. ಈ ಮೂವತ್ತೈದು ವರ್ಣಗಳು ವಿಕಲಗಳು. ॥ ೨೫ ॥

ದೇಹ, ಉಪಾಧಿ, ಶರೀರ, ಕ್ಷೇತ್ರ, ಆಧಾರ, ತನು, ವ್ಯಂಜನ, ವಿಕಲಾ, ಹಾಗೂ ಶಕ್ತಿಶಬ್ದಗಳು ಬಿಂದುವಿನ ಪರ್ಯಾಯಶಬ್ದಗಳು. ॥ ೨೬ ॥

---

[1] ಈ ಅರ್ಧಪದ್ಯ—ಕ, ಘ, ಛ, ಟ, ಠ, ಭ. ಪುಸ್ತಕಗಳಲ್ಲಿಲ್ಲ.

[2] ಓಂಕಾರೇ ತು ಸಮುದ್ಭೂತಾ ಷಡಕಾರಾದೀನಿ ಪಂಚಮಂ—ಡ, ಪ, ಫ.

[3] ಈ ಪದ್ಯ—ಕ, ಖ, ಘ, ಛ, ಜ, ಟ, ಠ, ಡ, ಢ, ಞ, ಫ, ಬ, ಭ. ಪುಸ್ತಕಗಳಲ್ಲಿಲ್ಲ.

[4] ಕಕಾರೇ ಚ—ಕ, ಖ, ಗ, ಚ.
ತಕಾರೇ ಚ—ಝ.

[5] ಕಕಾರಾದಿ ಕ್ಷಕಾರಾನ್ತಂ ಪಂಚತ್ರಿಂಶಾಕ್ಷರಾಃ ಸ್ಮೃತಾಃ—ಞ, ಪ.

[6] ಶರೀರಂ ಚ—ಖ, ಗ, ಚ.

[7] ಕ್ಷೇತ್ರಾಧಾರಃ—ಗ, ಚ. ಕ್ಷೇತ್ರಾಧಾರೇ—ಖ, ಝ.
ಕ್ಷೇತ್ರಾಧಾರಂ—ಕ.

[8] ವಾಚಕಃ—ಘ, ಠ, ಢ, ಫ.

ಕಲಾನಾಂ ವಿಕಲಾನಾಂ ತು[1]
ರೂಪತ್ರಯಮಿಹೋಚ್ಯತೇ[2] ।
ಶಿವಾಗ್ನಿಭೂತರುದ್ರಾಶ್ಚ
ತ್ರಯೋದಶತಿಥಿಸ್ತಥಾ ॥ ॥ ೧೭ ॥

ಏತೇ ವೈ ಸ್ವರವರ್ಣಾಶ್ಚ[3]
ಪುಲ್ಲಿಂಗಾಶ್ಚೇತಿ ಕೀರ್ತಿತಾಃ ।
ಪಕ್ಷೋ ವೇದೋ ರಸೋ ಭಾನುಃ
ಮನುಶ್ಚೈವಾಧಿಕಾರಕಮ್[4] ॥ ॥ ೧೮ ॥

ಏತಾನಿ ಷಟ್ ಚ ಬೀಜಾನಿ[5]
ಸ್ತ್ರೀಲಿಂಗಾನೀತಿ[6] ಕೀರ್ತಿತಮ್[7] ।

ವರ್ಣಭೇದವನ್ನು ನಿರೂಪಿಸುವ ಸಂದರ್ಭದಲ್ಲಿ ಕಲೆಗಳಿಗೂ ವಿಕಲೆಗಳಿಗೂ ಮೂರು ರೂಪಗಳನ್ನು ಹೇಳಲಾಗುತ್ತದೆ. (ಶಿವ=) ಮೊದಲನೆಯ, (ಅಗ್ನಿ=) ಮೂರನೆಯ, (ಭೂತ=) ಐದನೆಯ (ರುದ್ರ=) ಹನ್ನೊಂದನೆಯ, ಹದಿಮೂರನೆಯ ಹಾಗೂ (ತಿಥಿ=) ಹದಿನೈದನೆಯ— ॥ ೧೭ ॥

—ಅಂದರೆ ಅ, ಇ, ಉ, ಏ, ಓ, ಅಂ ಎಂಬ ಆರು ಸ್ವರಾಕ್ಷರಗಳು ಪುಲ್ಲಿಂಗಗಳು. ಸ್ವರಗಳಲ್ಲಿ (ಪಕ್ಷ=) ಎರಡನೆಯ, (ವೇದ=) ನಾಲ್ಕನೆಯ, (ರಸ=) ಆರನೆಯ, (ಭಾನು=) ಹನ್ನೆರಡನೆಯ, (ಮನು=) ಹದಿನಾಲ್ಕನೆಯ ಮತ್ತು (ಅಧಿಕಾರಕ=) ಹದಿನಾರನೆಯ— ॥ ೧೮ ॥

—ಅಂದರೆ ಆ, ಈ, ಊ, ಐ, ಔ, ಅಃ ಎಂಬ ಈ ಆರು ಅಕ್ಷರಗಳು ಸ್ತ್ರೀ

---

[1] ಚ—ಝ.

[2] ತ್ರೀಣಿ ರೂಪಾಣಿ ವಕ್ಷ್ಯತೇ—ಖ, ಗ, ಚ, ಝ,
ತ್ರಯೋ ಭೇದಾಶ್ಚ ವಕ್ಷ್ಯತೇ—ಡ, ಪ.

[3] ಸ್ವರವರ್ಣಾನಿ—ಕ, ಗ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ.

[4] ವಾದಿ ಷೋಡಶ—ಪ.
ವಾನುಷೋಡಶ—ಡ.

[5] ಏತೇ ವೈ ಷಟ್ ಚ ನಾಮಾನಿ—ಗ, ಪ.

[6] ಗಾಶ್ಚೇತಿ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ.

[7] ಕೀರ್ತಿತಾಃ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ.

ಋ ೠ ಌ ೡ ಚ ಚತ್ವಾರಃ
ನಪುಂಸಕಾಃ[1] ಇತಿ ಸ್ಮೃತಾಃ[2] || || ೨೯ ||

ಕಕಾರಶ್ಚ ಗಕಾರಶ್ಚ
ಚಕಾರಶ್ಚ ಜಕಾರಕಃ |
ಟಕಾರಶ್ಚ ಡಕಾರಶ್ಚ
ತಕಾರಶ್ಚ ದಕಾರಕಃ[3] || || ೩೦ ||

ಪಕಾರಶ್ಚ ಬಕಾರಶ್ಚ
ಷಕಾರಶ್ಚ[4] ಕ್ಷಕಾರಕಃ[5] |
ಏತೇ ದ್ವಾದಶವರ್ಣಾಶ್ಚ[6]
ಪುಲ್ಲಿಂಗಾಶ್ಚೇತಿ ಕೀರ್ತಿತಾಃ[7] || || ೩೧ ||

ಲಿಂಗಗಳು. ಋ, ೠ, ಌ, ೡ, ಎಂಬ ಈ ನಾಲ್ಕು ಅಕ್ಷರಗಳು ನಪುಂಸಕಲಿಂಗಗಳು. || ೨೯ ||

ಕಕಾರ, ಗಕಾರ, ಚಕಾರ, ಜಕಾರ, ಟಕಾರ, ಡಕಾರ || ೩೦ ||

ತಕಾರ, ದಕಾರ, ಪಕಾರ, ಬಕಾರ, ಷಕಾರ ಮತ್ತು ಕ್ಷಕಾರ ಈ ಹನ್ನೆರಡು ಅಕ್ಷರಗಳು ಪುಲ್ಲಿಂಗಗಳು. || ೩೧ ||

---

[1] ನಪುಂಸಕಂ—ಕ, ಡ, ಧ, ಪ.

[2] ಸ್ಮೃತಂ—ಧ, ಫ.
ಸ್ಮೃತಃ—ಘ, ಝ.

[3] ಕಕಾರಂ ಚ ಗಕಾರಂ ಚ
ಚಕಾರಂ ಚ ಜಕಾರಕಮ್ ।
ಟಕಾರಂ ಚ ಡಕಾರಂ ಚ
ತಕಾರಂ ಚ ದಕಾರಕಮ್—
ಕ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಬ, ಭ.

[4] ಪಕಾರಂ ಚ ಬಕಾರಂ ಚ
ಷಕಾರಂ ಚ—ಕ, ಗ, ಘ, ಚ, ಛ, ಟ, ಠ, ಡ, ಢ, ತ, ಥ, ದ, ಪ, ಬ, ಭ.

[5] ಹಕಾರಕಃ—ಋ, ಝ.
ಕ್ಷಕಾರಕಂ—ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ, ಪ, ಭ.

[6] ವರ್ಣಾನಿ—ಕ, ಘ, ಛ, ಟ, ಠ, ಢ, ತ, ಥ, ದ, ಫ, ಭ.
ಬೀಜಾನಿ—ಡ, ಪ.

[7] ಗಾನಿ ವಿನಿರ್ದಿಶೇತ್—ಫ.

ಖಕಾರಶ್ಚ ಘಕಾರಶ್ಚ
ಛಕಾರಶ್ಚ ಝಕಾರಕಃ ।
ಠಕಾರಶ್ಚ ಢಕಾರಶ್ಚ
ಥಕಾರಶ್ಚ ಧಕಾರಕಃ[1] ॥ ॥ ೩೨ ॥

ಫಕಾರಶ್ಚ ಭಕಾರಶ್ಚ
ಶಕಾರಶ್ಚ ಸಕಾರಕಃ[2] ।
ಏತಾನಿ[3] ಭಾನುಬೀಚಾನಿ
ಸ್ತ್ರೀಲಿಂಗಾನೀತಿ ಕೀರ್ತಿತಮ್[4] ॥ ॥ ೩೩ ॥

ಶೇಷಂ[5] ನಪುಂಸಕಂ[6] ವಿದ್ಯಾತ್[7]
ತ್ರಯೋ ಭೇದಾಃ[8] ಇತಿ ಸ್ಮೃತಾಃ[9] ।

ಖಕಾರ, ಘಕಾರ, ಛಕಾರ, ಝಕಾರ, ಠಕಾರ ॥ ೩೨ ॥

ಢಕಾರ, ಥಕಾರ, ಧಕಾರ, ಫಕಾರ, ಭಕಾರ, ಶಕಾರ, ಸಕಾರ ಈ ಹನ್ನೆರಡು ಅಕ್ಷರಗಳು ಸ್ತ್ರೀಲಿಂಗಗಳು. ॥ ೩೩ ॥

ಉಳಿದ ಙ ಞ ಣ ನ ಮ ಯ ರ ಲ ವ ಹ ಳ ವರ್ಣಗಳನ್ನು ನಪುಂಸಕಗಳೆಂದು

[1-2] ಖಕಾರಂ ಚ ಘಕಾರಂ ಚ
ಛಕಾರಂ ಚ ಝಕಾರಕಮ್ ।
ಠಕಾರಂ ಚ ಢಕಾರಂ ಚ
ಥಕಾರಂ ಧಕಾಕರಂ ॥
ಫಕಾರಂ ಚ ಭಕಾರಂ ಚ
ಶಕಾರಂ ಚ ಸಕಾರಕಮ್ ।—
ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಭ.

[3] ಏತೇ ವೈ --ಕ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಫ, ಭ.

[4] ಜ್ಯಾಯಾಶ್ಚೇತಿ ಪ್ರಕೀರ್ತಿತಾಃ—ಕ, ಖ, ಘ, ಚ, ಛ, ಝ, ಟ, ಠ, ಢ, ತ, ಥ, ದ, ಭ.
ಜಾಯಾಶ್ಚೇತಿ ಪ್ರಕೀರ್ತಿತಂ—ಫ.

[5] ಶೇಷಾಣ—ಖ, ಝ.
ಶೇಷಾಃ—ಟ, ಢ, ಧ, ಫ,

[6] ನಪುಂಸಕಾಣ—ಖ, ಝ.
ನಪುಂಸಕಾಃ—ಧ.

[7] ವಿಂದ್ಯಾತ್—ಟ, ಢ, ತ, ದ, ಧ.
ಜ್ಞೇಯಾಃ—ಪ, ಫ.

[8] ರೂಪಾಃ—ಡ, ಪ.

[9] ಸ್ಮೃತಮ್—ಫ.

ಅಕಾರಾದಿ ತ್ರಯೋ ವ್ಯೋಮ
[1]ತ್ವೀಕಾರಾದಿತ್ರಯೋಽನಿಲಃ || || ೩೪ ||

ಋಕಾರಾದಿ ತ್ರಯೋ ವರ್ಣಾಃ[2]
ವೈಶ್ವಾನರ[3] ಇತಿ ಸ್ಮೃತಾಃ
ೡಕಾರಾದಿ[4]ತ್ರಯೋ ಹ್ಯಾಪಃ
ಓಕಾರಾದಿ[5]ತ್ರಯೋ ಮಹೀ || || ೩೫ ||

[6]ಕಕಾರಾದಿಙಕಾರಾನ್ತಾಃ
ಲಕಾರಶ್ಚ ಳಕಾರಕಃ |

ತಿಳಿಯಬೇಕು. ಹೀಗೆ ವರ್ಣಗಳಲ್ಲಿ ಲಿಂಗನಿಮಿತ್ತವಾಗಿ ಮೂರು ಭೇದಗಳಿವೆ. ಅಕಾರಾದಿ ಮೂರು ಅಕ್ಷರಗಳು (ಅ, ಆ, ಇ) ಆಕಾಶತತ್ತ್ವಬೀಜಗಳು. ಈಕಾರಾದಿ ಮೂರು ಅಕ್ಷರಗಳು (ಈ, ಉ, ಊ) ವಾಯುತತ್ತ್ವಬೀಜಗಳು. || ೩೪ ||

[9] ಪ್ರೋಕ್ತಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ

[10] ಪ್ರದಾಯಕಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ

ಗುಹ್ಯಂ ಚತುರ್ದಶೋಪೇತಂ
ಶಿವಶಕ್ತಿಸಮಾಯುತಮ್ ।
ಭೂತಾನ್ತಮಾದಿಪ್ರಕೃತಿ
ಕಾರ್ಯಕಾರಣಸಂಯುತಮ್[1] ॥ ॥ ೫೯ ॥

ಈಶೇ ತೃತೀಯವರ್ಣಶ್ಚ
ಪ್ರಥಮಸ್ವರಸಂಯುತಮ್[ತಃ] ।
ಶಕ್ತಿರ್ಮಾತ್ರಾದಿ[2]ಸಂಯುಕ್ತಾ[3]
ವಾರುಣೇ ದ್ವಿತೃತೀಯಕಮ್[4] ॥ ॥ ೬೦ ॥

ತೃತೀಯಂ ಚಾಸ್ಥಿಸಂಯುಕ್ತಂ[5]
ಸೋಮಾಂತಂ ದ್ವಿಕಲಾಯುತಮ್[6] ।

‘ಹೌಂ’ ಎಂದಾಗುತ್ತದೆ. ಭೂತಾಂತವಾದ ಹಕಾರವನ್ನು ಅಕಾರ ಮತ್ತು ಬಿಂದುವಿನೊಡನೆ ಉದ್ಧರಿಸಿದರೆ ‘ಹಂ’ ಎಂದಾಗುತ್ತದೆ. ॥ ೫೯ ॥

ಈಶವರ್ಗದ ತೃತೀಯವರ್ಣವಾದ ಸಕಾರವು ಅಕಾರದೊಡನೆ ಉದ್ಧೃತವಾದರೆ ‘ಸ’ ಎಂದಾಗುತ್ತದೆ. ಶಕ್ತಿಬೀಜವಾದ ಸಕಾರವು ಅಕಾರದೊಡನೆ ಉದ್ಧೃತವಾದರೆ ‘ಸ’ ಎಂದಾಗುತ್ತದೆ. ವರುಣವರ್ಗದ ತೃತೀಯವರ್ಣವಾದ ದಕಾರ ಆಕಾರದೊಡನೆ ಉದ್ಧೃತವಾದರೆ ದಾ ಎಂದಾಗುತ್ತದೆ. ॥ ೬೦ ॥

---

[1] ವರ್ಗಾದಿಜೀವಸಂಯುಕ್ತಂ ಶಕ್ತಂಶಕ್ತ ಕಲಾನ್ವಿತಮ್—ಖ, ಝ.
[2] ಶಕ್ತಿಮಾತ್ರಾದಿ—ಡ
ಶಕ್ತಿರ್ವಾಯ್ವಾದಿ—ಝ (ಪಾ)
[3] ಸಂಯುಕ್ತಂ—ಕ, ಖ, ಗ, ಚ, ಜ, ಟ, ತ, ಥ, ದ, ಧ, ಪ, ಫ.
[4] ವಾರುಣೇ ತುರ್ಯಮಾದಿಯುಕ್—ಝ
ವಾರುಣೇ ತು ತೃತೀಯಕಮ್—ಖ, ಗ, ಚ, ಜ.
ವಾರುಣೇತಿ ಚತುರ್ಥಕಂ—ಕ, ಘ, ಠ, ತ, ಥ.
ವಾರುಣೇ ತು ಚತುರ್ದಶಂ—ಛ
ವಾರುಣೇ ತು ದ್ವಿಮಾತ್ರಯುಕ್—ಫ.
[5] ಅಸ್ಥಿಂ ಚ ದ್ವಿಕಲಾಯುಕ್ತಂ—ಫ.
ತೃತೀಯೇ ಸ್ವರಸಂಯುಕ್ತಾಃ—ಝ.
ತೃತೀಯಂ ಚಾಸ್ಥಿಸಂಯುತಂ—ಕ, ಟ.
[6] ಸೋಮಾಂತದ್ವಿಕಲಾಯುತಂ—ಛ, ಠ, ತ, ಥ, ಫ
ಸಪ್ತಮಾನ್ತಂ ದ್ವಿಸಂಯುತಂ—ಧ.
ದ್ವಿತೀಯೇ ಸ್ವರಸಂಯುಕ್ತಂ—ಝ.
ಸೋಮಾಂತಂ ದ್ವಿಕಲಾನ್ವಿತಂ—ಫ.

[1]ಅನಿಲಾದಿ[2]ಕಲೋಪೇತಂ
ಏವಮಷ್ಟಾಕ್ಷರಂ ವಿದುಃ ॥ ॥ ೬೧ ॥

[3]ಏವಮಷ್ಟಾಕ್ಷರಃ ಪ್ರೋಕ್ತಃ
ಸರ್ವಸಂಪತ್ಪ್ರದಾಯಕಃ ।
ಭೂತಾಂತಂ ತು[4] ಸಮುದ್ಧೃತ್ಯ
ಷಟ್ ಪಂಚ ತ್ರಿ[5]ಕಲಾಯುತಮ್[6] ॥ ॥ ೬೨ ॥

[7]ಕಾರ್ಯಕಾರಣಸಂಯುಕ್ತಂ
ಗುಹ್ಯಂ ಮಾತ್ರಾದಿಬಿಂದುಯುಕ್ ।

ಅಸ್ಥಿಬೀಜವಾದ ಶಕಾರವನ್ನು ಇಕಾರದೊಡನೆ ಉದ್ಧರಿಸಿದರೆ ಶಿ ಎಂದಾಗುತ್ತದೆ. ಸೋಮವರ್ಗದ ಅಂತಿಮವಕಾರವನ್ನು ಆಕಾರದೊಡನೆ ಉದ್ಧರಿಸಿದರೆ ವಾ ಎಂದಾಗುತ್ತದೆ. ಅನಿಲಬೀಜವಾದ ಯಕಾರವನ್ನು ಅಕಾರದೊಡನೆ ಉದ್ಧರಿಸಿದರೆ ಯ ಎಂದಾಗುತ್ತದೆ. ಹೀಗೆ 'ಹೌಂ ಹಂ ಸದಾಶಿವಾಯ' ಎಂಬ ಅಷ್ಟಾಕ್ಷರ ಸದಾಶಿವಮಂತ್ರವಾಗುತ್ತದೆ. ಇದು ಕಾಮ್ಯಮಂತ್ರ. ॥ ೬೧ ॥

ಹೀಗೆ ಸದಾಶಿವನ ಸಮಸ್ತಸಂಪತ್ಪ್ರದಾಯಕವಾದ ಅಷ್ಟಾಕ್ಷರಮಂತ್ರವನ್ನು ಹೇಳಿದ್ದಾಯಿತು. ಭೂತಾಂತವಾದ ಹಕಾರವನ್ನು ಹದಿನಾಲ್ಕನೆಯ ಸ್ವರವಾದ ಔಕಾರದೊಡನೆ ಉದ್ಧರಿಸಿ,— ॥ ೬೨ ॥

—ಅನುಸ್ವಾರವನ್ನು ಸೇರಿಸಿದರೆ 'ಹೌಂ' ಎಂದಾಗುತ್ತದೆ. ಗುಹ್ಯವಾದ ಹಕಾರವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ ಹಂ ಎಂದಾಗುತ್ತದೆ.

---

[1] ಈ ಅರ್ಧಪದ್ಯದ ತರುವಾಯ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ. ಪುಸ್ತಕಗಳಲ್ಲಿ
"ಸೋಮಾಂತಂ ಸೋಮಪ್ರಥಮಂ ಆದಿಸ್ವರಸಮನ್ವಿತಂ"—ಎಂಬ ಅರ್ಧಪದ್ಯವಿದೆ

[2] ಅರುದ್ರಾದಿ—ಫ.

[3] ಈ ಅರ್ಧಪದ್ಯ—ಖ. ಪುಸ್ತಕದಲ್ಲಿಲ್ಲ.

[4] ತತ್ತ್ವಾಂತಂ—ಚ, ಫ.

[5] ಚತುರ್ದಶ—ಖ (ಪಾ)
ಷಟ್ ಪಂಚ ಚ—ಝ.

[6] ಕಲಾನ್ವಿತಂ—ಖ, ಝ.

[7] ಈ ಅರ್ಧಪದ್ಯ—ಛ, ತ. ಪುಸ್ತಕಗಳಲ್ಲಿಲ್ಲ.
ಗುಹ್ಯಮಾತ್ರಾದಿಸಂಯುಕ್ತಂ ಶಕ್ತಂ ತಸ್ಯೋಪರಿನ್ಯಸೇತ್—ಖ, ಗ, ಘ, ಚ, ಜ, ಟ, ಠ, ಢ, ಥ, ದ, ಧ, ಪ, ಫ.
ಗುಹ್ಯಮಾತ್ರಾದ್ವಿಸಂಯುಕ್ತಂ ಶಕ್ತಂ ತಸ್ಯೋಪರಿ ನ್ಯಸೇತ್—ಡ

[1]ಶಕ್ತರ್ಮಾತ್ರಾದಿ[2]ಸಂಯುಕ್ತಾ[3]
ಸಪ್ತಮಾಂತಂ[4] ದ್ವಿಸಂಯುತಮ್[5] ॥ ॥ ೬೩ ॥

[6]ಅನಿಲಾಂತಂ ತ್ವಾದಿ[7]ಯುಕ್ತಂ[8]
ಲಯಾದ್ಯಂ[9] ವರುಣಾದಿಕಮ್[10] |

ಶಕ್ತಿಬೀಜವಾದ ಸಕಾರವನ್ನು ಅಕಾರದೊಡನೆ ಉದ್ಧರಿಸಿ ಸಪ್ತಮವರ್ಗದ ಅಂತಿಮ ವರ್ಣವಾದ ವಕಾರವನ್ನು ಸಕಾರದೊಡನೆ ಸಂಯೋಗಗೊಳಿಸಿದರೆ 'ಸ್ವ' ಎಂದಾಗುತ್ತದೆ. ॥ ೬೩ ॥

ಮಾರುತವರ್ಗದ ಅಂತಿಮಮಕಾರವನ್ನೂ, ಲಯಮಾರ್ಗದ ಆದ್ಯಕ್ಷರವಾದ ಕ್ಷಕಾರವನ್ನೂ ವರುಣವರ್ಗದ ಪ್ರಥಮಾಕ್ಷರವಾದ ತಕಾರವನ್ನು ಉದ್ಧರಿಸಿ ಅಕಾರವನ್ನು ಸೇರಿಸಿದರೆ 'ಮ' 'ಕ್ಷ' 'ತ' ಎಂದಾಗುತ್ತದೆ. ಯಕಾರದ ಮುಂದಿನ ರಕಾರವನ್ನು ಅಕಾರದೊಡನೆ ಉದ್ಧರಿಸಿ ಕ್ಷ ತ ವರ್ಣಗಳ ಮಧ್ಯದಲ್ಲಿ ಸೇರಿಸಿದರೆ ಕ್ಷರತ ಎಂದಾಗುತ್ತದೆ. ॥ ೬೪ ॥

---

[1] ಈ ಅರ್ಧಪದ್ಯ—ಟ, ತ. ಪುಸ್ತಕಗಳಲ್ಲಿಲ್ಲ.
ಐಶಾನ್ಯೇ ತ್ರಿಲೋಪೇತಂ ಸಪ್ತಮಂ ಚಾದಿಸಂಯುತಂ—ಫ.

[2] ಶಕ್ತಿಮಾತ್ರಾದಿ—ಕ, ಖ, ಜ, ಢ, ಥ, ದ, ಪ.
ಶಕ್ತಿರ್ಮನ್ತ್ರಾದಿ—ಗ, ಚ.

[3] ಸಂಯುಕ್ತಂ—ಖ, ಗ, ಚ, ಜ, ಡ, ಧ.
ಸಮಾಯುಕ್ತಂ—ಛ, ಢ, ದ, ಪ.

[4] ಸಪ್ತಮಾತಂ—ಕ, ಥ.
ಸಪ್ತಮಾಂತ—ಧ.
ಸಪ್ತಮಾಂತ್ಯಂ—ಫ.

[5] ಸಮಾಯುತಂ—ಥ.

[6] ಅನಿಲಾಂತಮಾದಿಭೂತಾಂತಂ ಲಯಾದಿವರುಣಾಂತಕಮ್—ಗ, ಚ.
ಅನಿಲಾಂತಮಾದಿಸಂಯುಕ್ತಂ ಲಯಾದಿವರುಣಾದಿಕಂ—ತ
ಅನಿಲಾಂತಾ ತ್ರಿಭೂತಾಂತಂ ಪ್ರಲಯಾದ್ವರುಣಾಂತಕಂ—ಫ.

[7] ಅನಿಲಾದಿಮಾದಿ—ಪ.

[8] ಭೂತಾನ್ತಂ—ಖ (ಪಾ) ಘ, ಛ, ಜ, ಟ, ಠ, ಡ, ಢ, ಥ, ದ, ಧ, ಪ.

[9] ಲಯಾದಿ—ಖ, ಘ, ಛ, ಜ, ಟ, ಠ, ಡ, ಢ, ದ, ಧ, ಪ.

[10] ವರುಣಾಂತಕಂ—ಜ
ವರುಣಾಧಿಕಂ—ಕ, ದ

ತಯೋರ್ಮಧ್ಯಗತಂ ಯಾಂತಂ[1]
ಆದಿಬೀಜೇನ[2] ಸಂಯುತಮ್[3] ॥ ॥ ೬೪ ॥

ಸಪ್ತಮಾದ್ಯಂ[4] ಸಮುದ್ಧೃತ್ಯ
ಷಟ್ ಪಂಚಮಕಲಾಯುತಮ್[5] ।
ಬಿಂದುನಾದಸಮಾಯುಕ್ತಂ
ನವಾಕ್ಷರಮಿದಂ ವಿದುಃ[6] ॥ ॥ ೬೫ ॥

ಏತದ್ವೈ[7] ಪರಮಂ ಬೀಜಂ
ಸರ್ವಸಿದ್ಧಿಪ್ರದಾಯಕಮ್[8] ।

ಅನಂತರ ಸಪ್ತಮವರ್ಗದ ಪ್ರಥಮಾಕ್ಷರವಾದ ಯಕಾರವನ್ನು ಉದ್ಧರಿಸಿ ಅಕಾರವನ್ನು ಸೇರಿಸಿದರೆ ಯ ಎಂದಾಗುತ್ತದೆ. ತರುವಾಯ ಷಷ್ಠವರ್ಗದ ಪಂಚಮವರ್ಣವಾದ ಮಕಾರವನ್ನು ಅಕಾರದೊಡನೆ ಉದ್ಧರಿಸಿದರೆ 'ಮ' ಎಂದಾಗುತ್ತದೆ. ಹೀಗೆ ಉದ್ಧರಿಸಿದ 'ಸ್ವ' ಆದಿಗಳಿಗೆ ಬಿಂದುವನ್ನು ಸೇರಿಸಬೇಕು. ಇವುಗಳನ್ನು ಒಟ್ಟುಗೂಡಿಸಿದರೆ—ಹೌಂ, ಹಂ, ಸ್ವಂ, ಮಂ, ಕ್ಷಂ. ರಂ, ತಂ, ಯಂ, ಮಂ ಎಂದು ನವಾಕ್ಷರ ಸದಾಶಿವಮಂತ್ರವಾಗುತ್ತದೆ. ಇದು ಶಾಂತಿಕಮಂತ್ರವಾಗುತ್ತದೆ. ॥ ೬೫ ॥

ಈ ಉತ್ಕೃಷ್ಟವಾದ ನವಾಕ್ಷರಮಂತ್ರವು ಸಮಸ್ತಸಿದ್ಧಿಪ್ರದಾಯಕವಾದುದು. ಪರಕ್ಕೂ ಪರವಾದ ಹಕಾರವನ್ನು ಔಕಾರದೊಡನೆ ಉದ್ಧರಿಸಿ— ॥ ೬೬ ॥

---

[1] ಶಾನ್ತಂ—ಝ

[2] ಆದಿಬೀಜಾನಿ—ಫ.

[3] ಸಂಯುಕ್ತಂ—ಝ.

[4] ಪ್ರಥಮಾದ್ಯಂ—ಫ.

[5] ಕಲಾನ್ವಿತಂ—ಫ.
ಏವಂ ನವಾಕ್ಷರಂ ವಿದುಃ—ಕ, ಖ, (ಪಾ) ಗ, ಘ. ಚ, ಛ, ಜ, ಟ, ಠ, ಢ, ತ, ಥ, ದ, ಧ, ಪ, ಫ.

[6] ಏವಂ ತತ್—ಫ.

[7] ದಿವ್ಯಂ—ಧ.

[8] ಈ ಅರ್ಧಪದ್ಯ—ಡ, ಪ. ಪುಸ್ತಕಗಳಲ್ಲಿಲ್ಲ.

ಪರಾತ್ಪರಂ ಸಮುದ್ಧೃತ್ಯ
ಚೈಂದ್ರೀ ಚತುರ್ದಶಾನ್ವಿತಮ್[1] ॥ ॥ ೬೬ ॥

ಕಾರ್ಯಕಾರಣಸಂಯುಕ್ತಂ
ಶಕ್ತಿ[ಃ]ಜೀವಸಮನ್ವಿತಮ್[ತಾ][2] ।
ಈಶೇ[3] ತೃತೀಯಕಂ ಚಾಥೋ[4]
ಪರಿ[5]ದ್ವಿತೀಯಜೀವ[6]ಯುಕ್[7] ॥ ॥ ೬೭ ॥

ಬಿಂದುವನ್ನು ಸೇರಿಸಿದರೆ 'ಹೌಂ' ಎಂದಾಗುತ್ತದೆ. ಶಕ್ತಿಬೀಜವಾದ ಸಕಾರವನ್ನು ಉದ್ಧರಿಸಿ ಜೀವವೆನಿಸುವ ಅಕಾರವನ್ನು ಸೇರಿಸಿದರೆ 'ಸ' ಎಂದಾಗುತ್ತದೆ. ಅನಂತರ ಈಶವರ್ಗದ ತೃತೀಯಾಕ್ಷರವಾದ ಸಕಾರವನ್ನೂ ದ್ವಿತೀಯಾಕ್ಷರವಾದ ಷಕಾರವನ್ನೂ ಉದ್ಧರಿಸಿ ಅಕಾರವನ್ನು ಸೇರಿಸಿದರೆ ಸ, ಷ, ಎಂದಾಗುತ್ತದೆ. ॥೬೭॥

ಸಪ್ತಮವರ್ಗದ ಅಂತಿಮವರ್ಣವಾದ ವಕಾರವನ್ನು ಉದ್ಧರಿಸಿ ಪೂರ್ವೋದ್ಧೃತವಾದ ಷಕಾರದೊಡನೆ ಸೇರಿಸಿದರೆ 'ಷ್ವ' ಎಂದಾಗುತ್ತದೆ. ಷಷ್ಠವರ್ಗದ ಅಂತಿಮ

---

[1] ಐಂದ್ರೀ ಚತುರ್ದಶಾನ್ವಿತಂ—ಕ, ಘ, ಝ, ಥ.
ಐಂದ್ರೀ ಚತುರ್ದಲಾನ್ವಿತಂ—ಧ
ಆದಿರುದ್ರಗಣಾನ್ವಿತಂ—ಘ.

[2] ಶಿವಶಕ್ತಿಸಮನ್ವಿತಂ—ಥ
ಶಿವಬೀಜಸಮನ್ವಿತಂ—ಜ.

[3] ಈಶ—ಕ

[4] ಚಾಥೋ—ಝ. ಚಾದೌ—ಕ, ಘ, ಛ, ಟ, ತ, ಥ, ಧ.
ಚಾಧೌ—ಫ.

[5] ಪರೇ—ಕ, ಘ, ಛ, ಠ, ಡ, ಢ, ತ, ಥ, ದ, ಧ, ಪ

[6] ಬೀಜ—ಥ, ಧ

[7] ಯುತ್—ಕ
ಭೂತೇಂದ್ರಿಯಪ್ರಪಂಚಾದೌ
ಪಂಚಾಧನುತ್ರಿಬೀಜಯುಕ್—ಫ.

ಸಪ್ತಮಾಂತಂ[1] ದ್ವಿಸಂಯುಕ್ತಂ[2]
ಷಷ್ಠಾಂತಂ[3] ಷಟ್ಕಲಾನ್ವಿತಮ್[4] |
ಭೂತಾಂತಂ ತು[5] ಸಮುದ್ಧೃತ್ಯ
ವಹ್ನಿಂ[6] ತಸ್ಯೋಪರಿ[7] ನ್ಯಸೇತ್ ॥ ॥ ೭೮ ॥

ಪಂಚಮಾಂತ[8]ಕಲೋಪೇತಂ
ಭಾಂತಮೇಕಾರಸಂಯುತಮ್ |
ಪಂಚಪಂಚಮಮಾದಿ ಸ್ಯಾತ್[9]
ಷಷ್ಠಾಂತಂ[10] ಸಪ್ತಮಾದಿಕಮ್[11] ॥ ॥ ೭೯ ॥

ವರ್ಣವಾದ ಮಕಾರವನ್ನು ಉದ್ಧರಿಸಿ ಷಷ್ಠಸ್ವರವಾದ ಊಕಾರದೊಡನೆ ಸೇರಿಸಿದರೆ 'ಮೂ' ಎಂದಾಗುತ್ತದೆ. ಭೂತಾಂತವಾದ ಹಕಾರವನ್ನು ಉದ್ಧರಿಸಿ ಅದರೊಡನೆ ಅಗ್ನಿಬೀಜವಾದ ರೇಫವನ್ನೂ,— ॥ ೭೮ ॥

ಷಷ್ಠಸ್ವರವಾದ ಊಕಾರವನ್ನೂ ಸೇರಿಸಿದರೆ 'ಹ್ರೂ' ಎಂದಾಗುತ್ತದೆ. ಮಕಾರವನ್ನು ಉದ್ಧರಿಸಿ ಏಕಾರವನ್ನು ಸೇರಿಸಿದರೆ 'ಮೇ' ಎಂದಾಗುತ್ತದೆ. ಪಂಚಮವರ್ಗದ ಪಂಚಮಾಕ್ಷರವಾದ ನಕಾರವನ್ನೂ ಷಷ್ಠವರ್ಗದ ಅಂತಿಮವರ್ಣವಾದ ಮಕಾರವನ್ನೂ

---

[1] ಸಪ್ತಮಾಂತ—ಥ, ಪ.
[2] ಸಮಾಯುಕ್ತಂ—ಧ
ದ್ವಿಸಂಯುಕ್ತ—ಥ
[3] ಅಷ್ಟಾಂತಂ—ಥ
[4] ಷಟ್ಕಲಾಯುತಂ—ಜ, ಧ.
ಸಪ್ತಮಂ ಚಾಧಿಸಂಯುಕ್ತಂ .
ಅಷ್ಟಮಂ ಚಾಧಿಸಂಯುತಮ್—ಫ.
[5] ಆದ್ಯಂ ಚೈವ—ಫ.
[6] ವಹ್ನಿ—ಕ, ಟ.
[7] ಪರಿಂ—ಕ, ದ.
[8] ಪಂಚಮಾಂತಂ—ಝ
[9] ಪಂಚಮಮಾದಿಬೀಜಂ ಸ್ಯಾತ್—ಕ.
ಪಂಚಪಂಚಮದಾರಿ ಸ್ಯಾತ್—ಕ.
ಪಂಚಪಂಚಮಮಾದಿಃ ಸ್ಯಾತ್—ಗ, ಚ, ಧ.
[10] ಅಷ್ಟಾಂತಂ—ಫ.
[11] ಸಪ್ತಮಾಧಿಕಂ—ಕ, ಥ
ಪ್ರಥಮಾನ್ತಕಂ—ಫ.

[1]ವಹ್ನಿರ್ಮಾ[ರ್ಮಾ]ತ್ರಾದಿಸಂಯುಕ್ತಃ[ಂ]
ವರುಣಾದ್ಯಂ[ನ್ತ್ಯಂ] ನಮಾದಿಯುಕ್ ।
ಸಪ್ತಮಾದ್ಯಂ [ನ್ತ್ಯಂ]ತ್ವಾ[ದ್ವ್ಯಾ]ದಿಯುಕ್ತಂ
ವಾತಾನ್ತಂ ತ್ವಾದಿಸಂಯುತರ್ವ್ ॥ ॥ ೨೦ ॥

ಸಪ್ತಾಕ್ಷರಂ ಬಿನ್ದುಯುಕ್ತಂ
ಭವೇದೇಕಾಕ್ಷರೋ ಮನುಃ ॥ ॥ ೨೧ ॥

ಸಪ್ತಮವರ್ಗದ ಆದಿವರ್ಣವಾದ ಯಕಾರವನ್ನೂ ಉದ್ಧರಿಸಿ ಅಕಾರದೊಡನೆ ಸೇರಿಸಿದರೆ —ನ, ಮ, ಯ ಎಂದಾಗುತ್ತವೆ. ॥ ೧೯ ॥

ನ, ಮ ಮತ್ತು ಆದಿಪ್ರಾಸಾದಬೀಜಗಳಿಂದ ಕೂಡಿದ ವರುಣಾಂತ್ಯ ಶಕಾರವನ್ನು ತೃತೀಯಸ್ವರವಾದ ಇಕಾರದೊಡನೆ ಉದ್ಧರಿಸಿದರೆ ಹೌಂ ನಮ ಶಿ ಎಂದಾಗುತ್ತದೆ. ಸಪ್ತಮವರ್ಗದ ಅಂತ್ಯದಲ್ಲಿರುವ ವಕಾರವನ್ನು ದ್ವಿತೀಯಸ್ವರವಾದ ಆಕಾರದೊಡನೆ ಉದ್ಧರಿಸಿದರೆ ವಾ ಎಂದಾಗುತ್ತದೆ. ಮಾರುತವರ್ಗದ ಸಮೀಪಗತವಾದ ಯಕಾರವನ್ನು ಆದಿಸ್ವರವಾದ ಅಕಾರದೊಡನೆ ಉದ್ಧರಿಸಿದರೆ ಯ ಎಂದಾಗುತ್ತದೆ. ಇವುಗಳನ್ನು ಒಟ್ಟುಗೂಡಿಸಿದರೆ 'ಹೌಂ ನಮಃ ಶಿವಾಯ' ಎಂಬ ಷಡ್ಬೀಜಗಳಾಗುತ್ತವೆ. ॥ ೨೦ ॥

ಮಾಹೇಶ್ವರಸೂತ್ರಕ್ರಮದಿಂದ ಏಳನೆಯ ವರ್ಣವಾದ ಓಕಾರಕ್ಕೆ ಅನುಸ್ವಾರವನ್ನು ಸೇರಿಸಿದರೆ 'ಓಂ' ಎಂಬ ಏಕಾಕ್ಷರಮಂತ್ರವಾಗುತ್ತದೆ. ಈ ಓಂಕಾರವನ್ನು ಪೂರ್ವೋದ್ಧೃತ ಷಡ್ಬೀಜಗಳ ಆದಿಯಲ್ಲಿ ಸೇರಿಸಿದರೆ 'ಓಂ ಹೌಂ ನಮಃ ಶಿವಾಯ' ಎಂಬ ಸಪ್ತಾಕ್ಷರಸದಾಶಿವಮಂತ್ರವಾಗುತ್ತದೆ. ॥ ೨೧ ॥

---

[1] ಇಲ್ಲಿಂದ 'ಏಕಾಕ್ಷರೋ ಮನುಃ' ವರೆಗಿನ ಭಾಗವು ಕೇವಲ ಗ, ಚ, ಝ. ಪುಸ್ತಕಗಳಲ್ಲಿ ಕಂಡುಬರುತ್ತದೆ.

ಇವುಗಳಿಗೆ ಸಂಸ್ಕೃತ ಮತ್ತು ಕನ್ನಡ ವ್ಯಾಖ್ಯಾನಗಳಿಲ್ಲ.

[1]ಬಿನ್ದುನಾದಸಮಾಯುಕ್ತಂ
ದಶಬೀಜಮಿಹೋಚ್ಯತೇ[2] |
[3]ಏತೇ[4] ಪಞ್ಚವಿಧಾಃ ಪ್ರೋಕ್ತಾಃ[5]
ಮನ್ತ್ರಾಃ ಪಞ್ಚಾಕ್ಷರಾದಯಃ || || ೭೨ ||

ಸದಾಶಿವಮಿದಂ[6] ಪ್ರೋಕ್ತಂ [ವಸ್ತ್ವಯಂ ಪ್ರೋಕ್ತಃ]
ಮಹೇಶಂ[7] ಶೃಣು ಷಣ್ಮುಖ |

ಪ್ರಥಮ ಸಕಾರದಿಂದ ಮುಂದಿನ ಎಲ್ಲ ಬೀಜಗಳಿಗೆ ಅನುಸ್ವಾರವನ್ನು ಸೇರಿಸಬೇಕು. ಈಗ—ಹೌಂ ಸಂ ಸಂ ಷ್ವಂ ಮೂಂ ಹ್ರೂಂ ಮೇಂ ನಂ ಮಂ ಯಂ ಎಂದು ದಶಾಕ್ಷರ ಸದಾಶಿವಮಂತ್ರವಾಗುತ್ತದೆ. ಇದು ಪೌಷ್ಟಿಕಮಂತ್ರ. ಹೀಗೆ ಸದಾಶಿವನ ಪಂಚಾಕ್ಷರಾದಿಯಾದ ಐದು ಮಂತ್ರಗಳನ್ನು ತಿಳಿಸಿದ್ದಾಯಿತು. || ೭೨ ||

---

[1] ಈ ದಶಾಕ್ಷರಮಂತ್ರೋದ್ಧಾರದಲ್ಲಿ—ಗ, ಚ, ಝ ಪುಸ್ತಕಗಳಲ್ಲಿ ಮುಂದಿನ ಪಾಠಾನ್ತರ ಕಂಡುಬರುತ್ತದೆ—
“ಈಶೇ ವರ್ಗೇ ತುರ್ಯಮೈಂದ್ರೇ ಚತುರ್ದಶಕಲಾನ್ವಿತಂ |
ಕಾರ್ಯಕಾರಣಸಂಯುಕ್ತಾ ಶಕ್ತಿರಾದಿಕಲಾನ್ವಿತಾ ||
ಶಕ್ತಿರ್ಮಾತ್ರಾದಿಸಂಯುಕ್ತಾ ಮಜ್ಜಾಮಾತ್ರಾದಿಸಂಯುತಾ |
ಸಪ್ತಮಾಂತಸಮಾಯುಕ್ತಂ ಷಷ್ಠಾನ್ತಂ ಷಷ್ಠಬೀಜಯುಕ್ ||
ಭೂತಾಂತಂ ತು ಸಮುದ್ಧೃತ್ಯ ಕ್ಷಂ (ಪಂ)ಚಮಾಂತಕಲಾನ್ವಿತಂ |
ವೈಶ್ವಾನರಸಮಾಯುಕ್ತಂ ಭಾನ್ತಮೇಕಾರಸಂಯುತಮ್ |
ವರುಣಾಂತಂ ಚ ಮಾತ್ರಾದಿಯುಕ್ತಂ ಷಷ್ಠಾನ್ತಮಾದಿಯುಕ್ |
ಸಪ್ತಮಸ್ಮಾದಿಬೀಜಂ ಚ ಪ್ರಥಮಸ್ವರಸಂಯುತಮ್
ನವಾಕ್ಷರಂ ಬಿನ್ದುಯುಕ್ತಂ ದಶವರ್ಣಮನುಸ್ಮೃತಃ |
ಏತೇ ಪಂಚವಿಧಾ ಮನ್ತ್ರಾಃ ಪ್ರೋಕ್ತಾಃ ಪಂಚಾಕ್ಷರಾದಯಃ |
ಸದಾಶಿವ ಇತಿ ಪ್ರೋಕ್ತಃ ಮಹೇಶಂ ಶೃಣು ಷಣ್ಮುಖ ||
ಎಂದು
ಏವಂ ದಶಾಕ್ಷರಂ ಪ್ರೋಕ್ತಂ ಸರ್ವೈಶ್ವರ್ಯಪ್ರದಾಯಕಂ—ಫ.

[2] ಮಹೋಚ್ಯತೇ—ತ

[3] ಈ ಅರ್ಧಪದ್ಯ—ಪ. ಪುಸ್ತಕದಲ್ಲಿಲ್ಲ.

[4] ಏವಂ—ಥ

[5] ಪ್ರೋಕ್ತಂ ಠ, ಫ.

[6] ಸದಾಮಂತ್ರಮಿದಂ—ಡ, ಪ.

[7] ಮಹೇಶಃ—ಗ, ಚ, ಝ.

ಮಹೇಶಂ ರುದ್ರಮೂರ್ತಿತ್ವಾತ್[1]
ಸಂಹಾರೇಣ ಸಮುದ್ಧರೇತ್ ॥ ॥ ೭೩ ॥

ತಸ್ಯ ಭೇದಃ[2] ತ್ರಿಧಾ ಜ್ಞೇಯಃ[3]
ಸೃಷ್ಟಿಸ್ಥಿತಿಲಯಾಸ್ತಥಾ[4] ।
ಭೂಮೌ[5]ತೃತೀಯಮುದ್ಧೃತ್ಯ
ಚಾನ್ತರಿಕ್ಷಾಂತಬಿನ್ದುಯುಕ್ ॥ ॥ ೭೪ ॥

ತೋಯಾದಿರ್ಭ್ರಾನ್ತಬಿನ್ದು
ಯುಕ್ತೋ ಭೂಮೌ ನವಾಕ್ಷರಮ್[6] ।
ನಭೋಽನ್ತಬಿನ್ದುಸಂಯುಕ್ತಂ
ಅಮ್ಬರೇ ತು ಷಡಕ್ಷರಮ್ ॥ ॥ ೭೫ ॥

ಸದಾಶಿವಮಂತ್ರವನ್ನು ಹೇಳಿದ್ದಾಯಿತು. ಇನ್ನು ಮಹೇಶಮಂತ್ರವನ್ನು ಹೇಳುವೆನು. ಮಹೇಶನು ರುದ್ರಮೂರ್ತಿಯಾದುದರಿಂದ ಮಹೇಶಮಂತ್ರಗಳನ್ನು ಸಂಹಾರಕ್ರಮದಿಂದ ಉದ್ಧರಿಸಬೇಕು. ॥ ೭೩ ॥

ಮಹೇಶಮಂತ್ರವು ಸೃಷ್ಟಿ ಸ್ಥಿತಿ ಲಯವೆಂದು ಮೂರು ವಿಧ. ಪೃಥಿವೀವರ್ಗದ ತೃತೀಯಾಕ್ಷರವಾದ ಹಕಾರವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ ಹಂ ಎಂದಾಗುತ್ತದೆ. ॥ ೭೪ ॥

ಅಬ್ವರ್ಗದ ಪ್ರಥಮಾಕ್ಷರವಾದ ಮಕಾರವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ ಮಂ ಎಂದಾಗುತ್ತದೆ. ಪೃಥಿವೀವರ್ಗದ ನವಮಾಕ್ಷರವಾದ ರೇಫವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ 'ರಂ' ಎಂದಾಗುತ್ತದೆ. ವ್ಯೋಮವರ್ಗದ ಷಷ್ಠಾಕ್ಷರವಾದ ಏಕಾರವನ್ನು— ॥ ೭೫ ॥

---

[1] ಮೂರ್ತತ್ವಾತ್—ಟ, ತ, ಥ.

[2] ಭೇದಂ—ಕ, ಘ, ಛ, ಜ, ಟ, ಠ, ಡ, ಢ, ತ, ಥ; ದ, ಧ, ಪ.

[3] ಜ್ಞೇಯಂ—ಕ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ. ಫ.

[4] ಲಯಂತಥಾ—ಕ, ಖ.
ಲಯಸ್ತಥಾ—ಗ, ಚ, ಜ

[5] ಭೌಮಂ—ಝ

[6] ನವಾರ್ಣಕಂ—ಖ.

[1]ಆಧಾರಾಧೇಯಸಂಯುಕ್ತಂ[2]
ಸೃಷ್ಟಿಬೀಜ[3]ಮಿತಿ ಸ್ಮೃತಮ್[4] ।
[5]ಪೃಥಿವ್ಯಾಂ ತು ತೃತೀಯಾರ್ಣಂ
ಶಾ[ಖಾ]ನ್ತಬಿನ್ದುಸಮನ್ವಿತಮ್ ॥ ॥ ೭೬ ॥

ತದ್ವರ್ಗೇ ತುರ್ಯಮುದ್ಧೃತ್ಯ
ಸುರಮಾರ್ಗಾನ್ತಬಿಂದುಯುಕ್ ।

—ಅನುಸ್ವಾರದೊಡನೆ ಉದ್ಧರಿಸಿದರೆ 'ಏಂ' ಎಂದಾಗುತ್ತದೆ. ಇವುಗಳನ್ನು ಕೂಡಿಸಿದರೆ—ಹಂ ಮಂ ರಂ ಏಂ ಎಂದಾಗುತ್ತದೆ. ಇದು ಸೃಷ್ಟಿಮಂತ್ರ. ಪೃಥಿವೀ ವರ್ಗದ ತೃತೀಯಾಕ್ಷರವಾದ ಹಕಾರವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ ಹಂ ಎಂದಾಗುತ್ತದೆ. ॥ ೭೬ ॥

ಪೃಥಿವೀವರ್ಗದ ಚತುರ್ಥಾಕ್ಷರವಾದ ಸಕಾರವನ್ನು ಅಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ 'ಸಂ' ಎಂದಾಗುತ್ತದೆ. ಲಯಮಾರ್ಗದ ಪ್ರಥಮಾಕ್ಷರವಾದ ಕ್ಷಕಾರವನ್ನೂ ವಹ್ನಿಬೀಜವಾದ ರೇಫವನ್ನೂ ಪೃಥಿವೀವರ್ಗದ ಅಂತಿಮವರ್ಣವಾದ ಯಕಾರವನ್ನೂ ಉದ್ಧರಿಸಿ ಒಂದೊಂದಕ್ಕೂ ಅಕಾರ ಮತ್ತು ಅನುಸ್ವಾರಗಳನ್ನು ಸೇರಿಸಿದರೆ ಕ್ಷಂ ರಂ ಯಂ ಎಂದಾಗುತ್ತದೆ. ॥ ೭೭ ॥

---

[1] ಈ ಸೃಷ್ಟಿಬೀಜೋದ್ಧಾರದಲ್ಲಿ—ಗ, ಚ, ಝ ಪುಸ್ತಕಗಳಲ್ಲಿ ಮುಂದಿನ ಪಾಠಾಂತರ ಕಂಡುಬರುತ್ತದೆ—
"ಮಹೇಶಂ ರುದ್ರಮೂರ್ತಿತ್ವಾತ್ ಸಂಹಾರೇಣ ಸಮುದ್ಧರೇತ್ ।
ತಸ್ಯ ಭೇದಃ ತ್ರಿಧಾ ಜ್ಞೇಯಃ ಸೃಷ್ಟಿಸ್ಥಿತಿಲಯಸ್ತಥಾ ॥
ಭೂಮೌ ತೃತೀಯಮುದ್ಧೃತ್ಯ ಸಲಿಲಾದ್ಯಸಮನ್ವಿತಮ್ ॥
ಭೂಮೌ ನವಾರ್ಣಕಂ ವಿದ್ಯಾದಂಬರೇ ತು ಷಡಕ್ಷರಮ್ ।
ಆಧಾರಾಧೇಯಸಂಯುಕ್ತಂ ಸೃಷ್ಟಿಬೀಜಮಿಹೋಚ್ಯತೇ ॥
ಎಂದು

[2] ಸಂಯುತಂ—ಕ

[3] ರೂಪ—ಘ

[4] ಮಿಹೋಚ್ಯತೇ—ಖ, ಘ.

[5] ಪೃಥಿವ್ಯಾಂ ತು ತೃತೀಯಂ ಸ್ಯಾತ್
ವ್ಯೋಮಾನ್ತೇನ ಸಮನ್ವಿತಮ್ ।
ಶಕ್ತಿಂ ತಸ್ಯೋಪರಿ ನ್ಯಸ್ಯ
ತದ್ವರ್ಗೇ ತುರ್ಯಕಂ ಭವೇತ್—ಗ, ಚ, ಝ.

ಲಯಾದ್ಯಮನಲಂ[1] ಚೈವ
ಪಾರ್ಥಿವಾಂ[2]ತೇನ ಸಂಯುತಮ್ ॥ ॥ ೭೭ ॥

ವ್ಯೋಮ[3]ಷಷ್ಠ[4]ಸಮಾಯುಕ್ತಂ
ಕಾರ್ಯಕಾರಣಸಂಯುತಮ್ ।
ಸ್ಥಿತಿಬೀಜಮಿದಂ[5] ಪ್ರೋಕ್ತಂ
ಸಂಹಾರಶ್ಚಾ[6]ಧುನೋಚ್ಯತೇ ॥ ॥ ೭೮ ॥

ಮಹೀವರ್ಗೇ[7] ತೃತೀಯಾರ್ಣಂ[8]
ವ್ಯೋಮಾಂತೇನ ಸಮನ್ವಿತಮ್[9] ।

ವ್ಯೋಮವರ್ಗದ ಷಷ್ಠಾಕ್ಷರವಾದ ಏಕಾರವನ್ನು ಅನುಸ್ವಾರದೊಡನೆ ಉದ್ಧರಿಸಿದರೆ “ಏಂ’ ಎಂದಾಗುತ್ತದೆ. ಈ ಬೀಜಗಳನ್ನು ಒಟ್ಟುಗೂಡಿಸಿದರೆ “ಹಂ ಸಂ ಕ್ಷಂ ರಂ ಯಂ ಏಂ” ಎಂದಾಗುತ್ತದೆ. ಇದು ಸ್ಥಿತಿಮಂತ್ರ. ಇನ್ನು ಸಂಹಾರಮಂತ್ರವನ್ನು ಹೇಳುವೆನು. ॥ ೭೮ ॥

ಪೃಥಿವೀವರ್ಗದ ತೃತೀಯಾಕ್ಷರವಾದ ಹಕಾರವನ್ನು ಆಕಾರ ಮತ್ತು ಅನುಸ್ವಾರದೊಡನೆ ಉದ್ಧರಿಸಿದರೆ ‘ಹಂ’ ಎಂದಾಗುತ್ತದೆ. ಪೃಥಿವೀವರ್ಗದ ಆದ್ಯಕ್ಷರ

---

[1] ಲಯಾದ್ಯ ಮನಿಲಂ—ಗ, ಚ, ಜ
ಪ್ರಲಯಾದ್ಯವನಿಃ—ಫ.
ಲಯಾದ್ಯಂ ಚಾನಲಂ—ಥ
[2] ಪಾರ್ಥಿವಂ—ದ, ಪ.
[3] ವ್ಯೋಮೇ—ಕ, ಖ, ಗ, ಚ, ಛ, ಜ, ಟ, ಠ, ಢ, ಥ. ದ, ಧ, ಪ.
[4] ಷಷ್ಠಿ—ಧ
[5] ಮಿತಿ—ಫ.
[6] ಸಂಹಾರಮು—ಗ, ಚ
ಸಂಹಾರಂ ಚಾ—ಕ, ಛ, ಜ, ಟ, ಠ, ದ, ಧ; ಪ
[7] ಮಹೀವರ್ಗಃ—ಫ.
ಮಹೇವರ್ಗಂ—ಪ
[8] ತೃತೀಯಂ ಸ್ಯಾತ್—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ.
[9] ಸಮಾಶ್ರಿತಂ—ಝ
ಸಮಾಯುತಂ—ಕ, ಖ, ಗ, ಘ, ಚ, ಛ, ಜ, ಟ, ಠ, ಢ, ತ, ಥ, ದ, ಧ

ಶಿವಶಕ್ತಿಸಮಾಯುಕ್ತಂ
ಪೃಥಿವ್ಯಾದಿ[1] ಸಮುದ್ಧರೇತ್ ॥ ॥ ೭೯ ॥

ದ್ವಿತೀಯಾದ್ಯಂ ಸಮುದ್ಧೃತ್ಯ
ತೇಜೋ ವೈ ಪಾರ್ಥಿವಾನ್ತಕಮ್[2] ।
[3]ಅನ್ತರಿಕ್ಷಾಂತಸಂಯುಕ್ತಂ
ಕಾರ್ಯಕಾರಣಸಂಯುತಮ್ ॥ ॥ ೮೦ ॥

ವ್ಯೋಮ್ನಃ[4] ಷಡ್ವರ್ಣಕಂ ಬಿನ್ದುಂ[5]
ಸಂಹಾರಮಿ[ಇ]ತಿ[6] ಕೀರ್ತಿತಮ್[ಃ] ।

ವಾದ ಕ್ಷಕಾರವನ್ನು ಅಕಾರ ಮತ್ತು ಅನುಸ್ವಾರದೊಡನ ಉದ್ಧರಿಸಿದರೆ ‘ಕ್ಷಂ’ ಎಂದಾಗುತ್ತದೆ. ॥ ೭೯ ॥

ದ್ವಿತೀಯವರ್ಗದ ಪ್ರಥಮಾಕ್ಷರವಾದ ಮಕಾರವನ್ನೂ, ಅಗ್ನಿಬೀಜವಾದ ರೇಫವನ್ನೂ ಪೃಥಿವೀವರ್ಗದ ಅಂತಿಮಾಕ್ಷರವಾದ ಯಕಾರವನ್ನೂ ಉದ್ಧರಿಸಿ, ಓಂದೊಂದಕ್ಕೂ ಅಕಾರ ಮತ್ತು ಅನುಸ್ವಾರವನ್ನು ಸೇರಿಸಿದರೆ—‘ಮಂ ಯಂ ರಂ’ ಎಂದಾಗುತ್ತದೆ. ॥ ೮೦ ॥

ವ್ಯೋಮವರ್ಗದ ಷಷ್ಠಾಕ್ಷರವಾದ ಏಕಾರವನ್ನು ಉದ್ಧರಿಸಿ, ಅದಕ್ಕೆ ಅನುಸ್ವಾರವನ್ನು ಸೇರಿಸಿದರೆ ‘ಏಂ’ ಎಂದಾಗುತ್ತದೆ. ಉದ್ಧೃತವಾದ ಈ ಎಲ್ಲಾ ಬೀಜಗಳನ್ನೂ ಒಟ್ಟುಗೂಡಿಸಿದರೆ ‘ಹಂ ಕ್ಷಂ ಮಂ ರಂ ಯಂ ಏಂ’ ಎಂಬ ಮಂತ್ರವಾಗುತ್ತದೆ. ಇದು ಸಂಹಾರಮಂತ್ರದ ಉದ್ಧಾರ. ಮಹೇಶಬೀಜಮಂತ್ರೋದ್ಧಾರವನ್ನು ನಿರೂಪಿಸಿದ್ದಾಯಿತು. ಇನ್ನು ಶಕ್ತಿಮಂತ್ರೋದ್ಧಾರವನ್ನು ಹೇಳುವೆನು. ॥ ೮೧ ॥

---

[1] ಪೃಥಿವ್ಯಾದಿಂ—ಕ, ಛ, ಟ, ದ, ಧ.
ಪೃಥಿವ್ಯಾಂ ತು—ಢ.

[2] ಕಾರ್ಯಕಾರಣಸಂಯುಕ್ತಂ ಜಲಾದ್ಯಂ ಶಾನ್ತಬಿನ್ದುಯುಕ್—ಗ, ಚ, ಝ.

[3] ಈ ಅರ್ಧಪದ್ಯ—ಕ, ಖ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ. ಪುಸ್ತಕಗಳಲ್ಲಿಲ್ಲ.

[4] ವ್ಯೋಮ—ತ, ಥ.
ವ್ಯೋಮೇ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ದ, ಪ.

[5] ಬಿನ್ದು—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ದ, ಧ, ಪ, ಫ.

[6] ರಂಚೇತಿ—ಕ, ಖ, ಛ, ಜ, ಟ, ಠ, ಢ, ತ, ಥ, ದ, ಧ, ಪ.

ಮಹೇಶಬೀಜ[1]ಮಾಖ್ಯಾತಂ
ಶಕ್ತಿಬೀಜಮಥ[2]ಶೃಣು ॥ ॥ ೮೧ ॥

ಶಕ್ತಿಬೀಜಂ ಸಮುದ್ಧೃತ್ಯ
ದ್ವಿಕಲಾ[3]ವಹ್ನಿಸಂಯುತಮ್ ।
ಬಿನ್ದುನಾದಸಮಾಯುಕ್ತಂ
ಶಕ್ತಿ[4]ಬೀಜಮಿದಂ[5] ಪರಮ್ ॥ ॥ ೮೨ ॥

ಪ್ರಥಮಾ[6] ಶಕ್ತಿರಿತ್ಯುಕ್ತಾ[7]
ದ್ವಿತೀಯಾ[8] ಶಕ್ತಿರುಚ್ಯತೇ ।
ನಾದಾದ್ಯಂ[9] ತು ಸಮುದ್ಧೃತ್ಯ
ಷಷ್ಠ[10]ಮಾಯಾಸಮನ್ವಿತಮ್[11] ॥ ॥ ೮೩ ॥

ಶಕ್ತಿಬೀಜವಾದ ಸಕಾರವನ್ನು ರೇಫ ಮತ್ತು ಆಕಾರದೊಡನೆ ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ 'ಸ್ರಾಂ' ಎಂದಾಗುತ್ತದೆ. ಇದು ಪರಾಶಕ್ತಿರೂಪವಾದ ಸರ್ವೋತ್ಕೃಷ್ಟಶಕ್ತಿಮಂತ್ರ. ॥ ೮೨ ॥

ಪ್ರಥಮಶಕ್ತಿಮಂತ್ರದ ಉದ್ಧಾರವನ್ನು ಹೇಳಿದ್ದಾಯಿತು. ಇನ್ನು ದ್ವಿತೀಯ ಶಕ್ತಿಮಂತ್ರದ ಉದ್ಧಾರವನ್ನು ಹೇಳುವೆನು. ನಾದಾದಿಯಾದ ಸಕಾರವನ್ನು ಷಷ್ಠವೆಂಬ ರೇಫ, ಮತ್ತು ಮಾಯೆಯೆಂಬ ಈ ಕಾರದೊಡನೆ ಉದ್ಧರಿಸಿ,— ॥ ೮೩ ॥

---

[1] ಮೇವ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಢ, ತ, ಥ, ಧ, ಫ.

[2] ಮತಃ—ಧ

[3] ವಿಕೃತಿಃ—ಖ, ಗ, ಘ, ಚ, ಛ, ಜ, ಝ, ಠ, ಡ, ಢ, ತ, ದ, ಪ.
ಪಿಂಗಲಾ—ಫ.
ವಿಕಲಾ—ಕ, ಟ, ಥ

[4] ಶಿವ—ಗ, ಚ

[5] ಮಿತಃ—ಫ.

[6] ಪ್ರಥಮಂ—ಛ, ಫ.

[7] ರಿತ್ಯುಕ್ತಂ—ಕ, ಘ, ಛ, ಟ, ಠ, ಡ, ಢ, ತ, ಥ, ಧ, ಪ, ಫ.

[8] ದ್ವಿತೀಯಂ—ಛ.

[9] ನಾದಾನ್ತಂ—ಧ

[10] ಷಷ್ಠಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ.

[11] ನಾದಾದ್ಯಂ ತು ಷಷ್ಠಂ ತು ಮಾಯಾಬೀಜಸಮನ್ವಿತಂ—ಫ.

ಬಿನ್ದುನಾದಸಮಾಯುಕ್ತಂ
ದ್ವಿತೀಯಾ[1] ಶಕ್ತಿರೀರಿತಾ[2] |
ತತ್ತ್ವಾನ್ತಾದ್ಯಂ ಧರಾವಹ್ನಿ[3]
ಬಿನ್ದುನಾದಸಮನ್ವಿತಮ್[4] || || ೮೪ ||

[5]ತೃತೀಯಾ[6] ಶಕ್ತಿರಿತ್ಯುಕ್ತಾ[7]
ಚತುರ್ಥೀ ಶಕ್ತಿರುಚ್ಯತೇ[8] |
ಜೀವಾದ್ಯಂ ದ್ವಾದಶಕಲಾ !
ವೈಶ್ವಾನರಸಮನ್ವಿತಮ್[9] || || ೮೫ ||

—ಅದರೊಡನೆ ಅನುಸ್ವಾರವನ್ನು ಸೇರಿಸಿದರೆ 'ಸ್ರೀಂ' ಎಂದಾಗುತ್ತದೆ. ಹೀಗೆ ದ್ವಿತೀಯಶಕ್ತಿಮಂತ್ರದ ಉದ್ಧಾರವನ್ನು ನಿರೂಪಿಸಿದ್ದಾಯಿತು. ಹಕಾರಕ್ಕೆ ಆದಿಯಾದ ಸಕಾರವನ್ನು ಧರಾಬೀಜವಾದ ಊಕಾರ, ವಹ್ನಿಬೀಜವಾದ ರೇಫ, ಮತ್ತು ಅನುಸ್ವಾರಗಳೊಡನೆ ಉದ್ಧರಿಸಿದರೆ 'ಸ್ರೂಂ' ಎಂದಾಗುತ್ತದೆ. || ೮೪ ||

ತೃತೀಯಶಕ್ತಿಮಂತ್ರದ ಉದ್ಧಾರವನ್ನು ನಿರೂಪಿಸಿದ್ದಾಯಿತು. ಇನ್ನು ಚತುರ್ಥ

---

[1] ದ್ವಿತೀಯಂ—ಛ.

[2] ರುಚ್ಯತೇ—ಕ, ಖ, (ಪಾ) ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ.

[3] ದ್ಯಷ್ಟಕಲಾವಹ್ನಿ—ಫ
ದ್ಯಂ ಧರಾವಹ್ನಿಂ—ಝ

[4] ಸಮಾಯುತಂ—ಕ, ಖ, ಘ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ.

[5] ಈ ಪದ್ಯ—ಜ ಪುಸ್ತಕದಲ್ಲಿಲ್ಲ

[6] ತೃತೀಯಂ—ಕ, ಪ, ಫ.
ತೃತೀಯಂ—ಡ, ದ.

[7] ಇತ್ಯುಕ್ತಂ—ಕ, ಘ, ಛ, ಟ, ಠ, ಡ, ತ, ಥ, ದ, ಧ, ಪ, ಫ.

[8] ತದ್ಭೇದಂ ಶೃಣುಷಣ್ಮುಖ—ಕ.
ಚತುರ್ಥಂ ಶಕ್ತಿರುಚ್ಯತೇ—ಘ.
ಜೀವಾದ್ಯಂ ವಹ್ನಿಸಂಯುತಂ—ಝ

[9] ಜೀವಾದ್ಯ ವಹ್ನಿಸಂಯುಕ್ತಂ ಕಲಾದ್ವಾದಶಭೇದಕಂ—ಕ.
ಜೀವಾದ್ಯಂ ವಹ್ನಿಸಂಯುಕ್ತಂ ಕಲಾದ್ವಾದಶಕಾಭೇದ್ಯಂ—ಡ, ತ
ಕಲಾದ್ವಾದಶಕಾಭೇದ್ಯಂ ಬಿನ್ದುನಾದಸಮಾಯುತಂ—ಖ, ಟ, ಡ.
ಜೀವಾದ್ಯಂ ವಹ್ನಿಸಂಯುಕ್ತಂ ಕಲಾದ್ವಾದಶಸಂಯುತಂ—ಧ.
ಚತುರ್ಥಾ ಶಕ್ತಿಬೀಜಂ ಸ್ಯಾತ್
ಭೂತಾದ್ಯಂ ವಹ್ನಿಸಂಯುತಂ—ಜ.

೭೩/

[1]ಬಿನ್ದುನಾದಸಮಾಯುಕ್ತಂ[2]
ಚತುರ್ಥೀ[3] ಶಕ್ತಿರೀರಿತಾ[4] ।
[5]ಭೂತಾನ್ತ್ಯಾದ್ಯಂ ಸಮುದ್ಧೃತ್ಯ
ಚತುರ್ದಶಕಲಾನ್ವಿತಮ್[6] ॥ ॥ ೮೬ ॥

[7]ವಹ್ನಿಬಿನ್ದುಸಮಾಯುಕ್ತಂ[8]
ಪಂಚಮೀ ಶಕ್ತಿರೀರಿತಾ[9] ।
ಏತೇಷಾಂ ಶಕ್ತಿಬೀಜಾನಾಂ
ಶಿವಾಂಗಮಿವಚೋದ್ಧೃತಮ್ ॥ ॥ ೮೭ ॥

ಶಕ್ತಿಮಂತ್ರದ ಉದ್ಧಾರವನ್ನು ಹೇಳುವೆನು. ಹಕಾರಕ್ಕೆ ಆದಿಯಾದ ಸಕಾರವನ್ನು ದ್ವಾದಶಸ್ವರವಾದ ಐಕಾರ ಮತ್ತು ಅಗ್ನಿಬೀಜವಾದ ರೇಫದೊಡನೆ ಉದ್ಧರಿಸಿ ;— ॥ ೮೫ ॥

—ಅದಕ್ಕೆ ಅನುಸ್ವಾರವನ್ನು ಸೇರಿಸಿದರೆ 'ಸ್ರೈಂ' ಎಂದಾಗುತ್ತದೆ. ಹೀಗೆ ಚತುರ್ಥ ಶಕ್ತಿಮಂತ್ರೋದ್ಧಾರವು ನಿರೂಪಿತವಾಯಿತು. ಹಕಾರಕ್ಕೆ ಆದಿಯಾದ ಸಕಾರವನ್ನು ಔಕಾರದೊಡನೆ ಉದ್ಧರಿಸಿ,— ॥ ೮೬ ॥

—ಅದಕ್ಕೆ ರೇಫ ಮತ್ತು ಅನುಸ್ವಾರಗಳನ್ನು ಸೇರಿಸಿದರೆ 'ಸ್ರೌಂ' ಎಂದಾಗು

---

[1] ಚತುರ್ಥೀ ಶಕ್ತಿರಿತ್ಯುಕ್ತಾ ಭೂತಾದ್ಯಂ ವಹ್ನಿಸಂಯುತಂ—ಖ, ಟ.
ಚತುರ್ದಶಕಲೋಪೇತಂ ಬಿನ್ದುನಾದಸಮನ್ವಿತಂ—ಜ.

[2] ಸಮಾಯುತಂ—ದ

[3] ಚತುರ್ಥಂ—ಕ, ಥ, ಪ.

[4] ರುಚ್ಯತೇ—ಕ, ಥ, ತ, ಥ, ಧ, ಪ.
ರಿತ್ಯುಕ್ತಂ—ಥ, ದ

[5] ಚತುರ್ದಶಕಲೋಪೇತಂ ಬಿಂದುನಾದಸಮನ್ವಿತಂ—ಝ, ಛ, ಜ, ಠ, ಡ, ಫ
ಭೂತಾದ್ಯಂ ವಹ್ನಿಸಂಯುಕ್ತಂ ಚತುರ್ದಶಕಲಾಯುತಂ—ಪ.

[6] ಕಲೋಪೇತಂ—ಕ, ದ.

[7] ಪಂಚಮೀ ಶಕ್ತಿರಿತ್ಯುಕ್ತಾ ಶಿವಾಂಗಮಿವ ಚೋದ್ಧೃತಂ—ಡ.
ಪಂಚಮಃ ಶಕ್ತಿರಿತ್ಯುಕ್ತಂ ಶಿವಾಂಗಮಿವ ಚೋದ್ಧೃತಂ—ಛ, ಜ, ಠ, ಥ, ತ, ದ
ಪಂಚಮಾ ಶಕ್ತಿರಿತ್ಯುಕ್ತಂ ಶಿವಾಂಗಮಿವ ಚೋದ್ಧೃತಂ—ಝ, ತ.

[8] ಬಿನ್ದುನಾದಸಮಾಯುಕ್ತಂ—ಥ, ಧ.

[9] ರುಚ್ಯತೇ—ಥ, ಧ.
ರಿತ್ಯುಕ್ತಂ—ದ.

[1]ಏತಾಸಾಂ[2] ಪಞ್ಚಶಕ್ತೀನಾಂ[3]
ಉಮಾಶಕ್ತ್ಯಾದಿರೇವ ಚ[4] ।
[5]ಉಮಾಽಮ್ಬಿಕಾ ಗಣಾನೀ ಚ
ಈಶ್ವರೀ ಚ ಮನೋನ್ಮನೀ ॥ ॥ ೮೮ ॥

ಏತೇಷಾಂ ಪಞ್ಚತತ್ತ್ವಾನಾಂ
ಆದಿಶಕ್ತಿರುಮೈವ ಚ ।
[6]ಮನೋನ್ಮನ್ಯಾಃ[7] ಕ್ರಮೇಣೈವಂ
ಅಂಶ ಏವ ಪ್ರಕೀರ್ತ್ಯತೇ[8] ॥ ॥ ೮೯ ॥

ಗಣವರ್ಣಂ[9] ಸಮುದ್ಧೃತ್ಯ
ವಹ್ನಿಮಾಯಾಸಮನ್ವಿತಮ್ ।

ತ್ತದೆ. ಹೀಗೆ ಪಂಚಮ ಶಕ್ತಿಮಂತ್ರಗಳ ಉದ್ಧಾರವು ನಿರೂಪಿತವಾಯಿತು. ಶಿವಾಂಗ ಬೀಜೋದ್ಧಾರದಂತೆ ಈ ಶಕ್ತಿಬೀಜಗಳ ಉದ್ಧಾರವಾಗುತ್ತದೆ. ॥ ೮೭ ॥

—ಈ ಪಂಚಶಕ್ತಿಗಳಿಗೆ ಉಮಾ ಅಂಬಿಕಾ ಗಣಾನೀ ಈಶ್ವರೀ ಮನೋನ್ಮನಿಯರು ದೇವತೆಗಳು. ॥ ೮೮ ॥

ಪೂರ್ವೋಕ್ತ ಪಂಚಶಕ್ತಿಗಳಲ್ಲಿ ಉಮಾಶಕ್ತಿಯು ಪ್ರಥಮವಾದದ್ದು. ಉಮಾದಿ ಶಕ್ತಿಗಳಂತೆ ಮನೋನ್ಮನಿಯಿಂದ ಪ್ರಾರಂಭಿಸಿ ದಶಮಾಂಶಕ್ರಮದಿಂದ ಈ ಮುಂದಿನ ಶಕ್ತಿಗಳ ಆವಿರ್ಭಾವವೆಂದು ಸಂಪ್ರದಾಯವು ತಿಳಿಸುತ್ತದೆ. ॥ ೮೯ ॥

---

[1] ಈ ಪದ್ಯ—ಡ, ದ. ಪುಸ್ತಕಗಳಲ್ಲಿಲ್ಲ
[2] ಏತೇಷಾಂ—ಕ, ಘ, ಛ, ಜ, ಟ, ಥ, ಧ
ತೇಷಾಂ—ಢ
ಏತೇ ವೈ—ಫ.
[3] ಶಕ್ತೀನಾಂ ಪಂಚಕಂ—ಕ
[4] ಶಕ್ತ್ಯಾ ಚ ದೇವ ಚ—ಧ.
[5] ಇಲ್ಲಿಂದ 'ಅಂಶ ಏವ ಪ್ರಕೀರ್ತ್ಯತೇ' ವರೆಗೆ ಖ ಪುಸ್ತಕದಲ್ಲಿಲ್ಲ.
[6] ಈ ಅರ್ಧಪದ್ಯ ಜ ಪುಸ್ತಕದಲ್ಲಿಲ್ಲ
[7] ಮನೋನ್ಮನೀ—ಫ.
[8] ಮಂತ್ರಮೇವಂ ಪ್ರಕೀರ್ತಿತಂ—ಘ
ವಂಶ ಏವ ಪ್ರಕೀರ್ತ್ಯತೇ—ಢ, ದ, ಪ.
[9] ವಹ್ನಿರ್ಗಣಂ—ಕ, ಘ, ಛ, ಟ, ಠ, ತ, ಥ.
ವಹ್ನೇರ್ಗಣಂ—ಖ, ಫ.

ಬಿನ್ದುನಾದಸಮಾಯುಕ್ತಂ
ಗೌರೀಬೀಜಮಿದಂ[1] ಪರಮ್ ॥ ॥ ೯೦ ॥

ಅನ್ಯಾಸಾಂ[2] ಚೈವ ಶಕ್ತೀನಾಂ
ಸ್ವನಾಮಾದ್ಯಕ್ಷರೇಣ ತು[3] ।
ಕಾರ್ಯಕಾರಣಸಂಯುಕ್ತಂ
ಸರ್ವಾಸಾಂ[4] ಶಕ್ತಿರುಚ್ಯತೇ ॥ ॥ ೯೧ ॥

ಮನ್ತ್ರ[5] ಏವಂ[6] ಸಮಾಖ್ಯಾತಃ[7]
ಮನ್ತ್ರನ್ಯಾಸಮಥ[8] ಶೃಣು[9] ।

ಗಣವರ್ಣವಾದ ಗಕಾರವನ್ನು ಅಗ್ನಿಬೀಜವಾದ ರೇಫ ಮತ್ತು ಮಾಯಾಬೀಜವಾದ ಈಕಾರಗಳೊಡನೆ ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ 'ಗ್ರೀಂ' ಎಂದಾಗುತ್ತದೆ. ಇದು ಶ್ರೇಷ್ಠವಾದ ಗೌರೀಬೀಜ. ॥ ೯೦ ॥

ಹೀಗೆಯೇ ಇತರ ಸಮಸ್ತ ಶಕ್ತಿದೇವತೆಗಳ ಹೆಸರಿನ ಆದ್ಯಕ್ಷರವನ್ನು ಹಿಂದಿನಂತೆ ರೇಫ ಮತ್ತು ಈಕಾರಗಳೊಡನೆ ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ ಆ ದೇವತೆಗಳ ಬೀಜೋದ್ಧಾರವಾಗುತ್ತದೆ. ॥ ೯೧ ॥

ಹೀಗೆ ಮಂತ್ರೋದ್ಧಾರವನ್ನು ಹೇಳಿದ್ದಾಯಿತು. ಇನ್ನು ಮಂತ್ರನ್ಯಾಸವನ್ನು ಹೇಳುವೆನು. ಲಿಂಗವನ್ನು ಪ್ರತಿಷ್ಠೆ ಮಾಡುವಾಗ ಅದರಲ್ಲಿ ತತ್ತ್ವಗಳನ್ನೂ ಮಂತ್ರಗಳನ್ನೂ ವಿನ್ಯಾಸಮಾಡಬೇಕು. ॥ ೯೨ ॥

---

[1] ಮಿತಃ—ಫ.

[2] ಅನ್ಯೇಷಾಂ—ಕ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ.

[3] ಚ—ಝ

[4] ಸರ್ವೇಷಾಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ.

[5] ಮಂತ್ರಂ—ಕ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ
ಮಂತ್ರೇಣ—ಫ.

[6] ಏವ—ಕ, ಗ, ಘ, ಛ, ಜ, ಟ, ಡ, ಢ, ತ, ದ, ಪ

[7] ಸಮಾಖ್ಯಾತಂ—ಕ, ಘ, ಛ, ಟ, ಠ, ಡ, ತ, ಥ, ದ, ಧ

[8] ತನ್ತ್ರನ್ಯಾಸಮತಃ—ಟ

[9] ಘೋಚ್ಯತೇ

ಲಿಂಗಸ್ಯ[1] ಸ್ಥಾಪನಾ[2]ಕಾಲೇ
ತತ್ತ್ವಮನ್ತ್ರಾಂಶ್ಚ[3] ವಿನ್ಯಸೇತ್ ॥ ॥ ೯೨ ॥

ಕುಂಭೇಷ್ವನ್ತರ್ಗತಾನ್[4] ಮನ್ತ್ರಾನ್[5]
ಲಿಂಗವತ್ಪೂರಿತಾನ್[6] ಬಹಿಃ[7] ।
[8]ತಯೋರ್ಯೋಗೇ[9] ಕ್ರಿಯಾವಸ್ಥಾ
ಸು[10]ಪ್ರತಿಷ್ಠೇತಿ ಕೀರ್ತಿತಾ[11] ॥ ॥ ೯೩ ॥

ಪ್ರಾಣಪ್ರಕೃತಿಯೋಗಂ ತು
ಜ್ಞಾತ್ವಾ ಸ್ಥಾಪನಮುಚ್ಯತೇ ।

ಸ್ಥಾಪಿತವಾದ ಕುಂಭಗಳಲ್ಲಿ ವಿನ್ಯಾಸಮಾಡಿದ ಮಂತ್ರಗಳನ್ನು ಲಿಂಗದಂತೆ ಕುಂಭಗಳ ಬಾಹ್ಯದಲ್ಲಿಯೂ ವಿನ್ಯಾಸಮಾಡಬೇಕು. ಲಿಂಗ ಕುಂಭಗಳ ಸಂಬಂಧದಲ್ಲಾಗುವ ಕ್ರಿಯಾವಸ್ಥೆಯೇ ಸುಪ್ರತಿಷ್ಠೆಯೆನಿಸುತ್ತದೆ. ॥ ೯೩ ॥

ಮಂತ್ರಗಳಿಗೂ ಮೂರ್ತಿಗಳಿಗೂ ಇರುವ ಸಂಬಂಧವನ್ನು ತಿಳಿದು ಪ್ರತಿಷ್ಠೆಯನ್ನು ಮಾಡಬೇಕು. ಪ್ರಾಣವೆಂದರೆ ಮಂತ್ರ. ಪ್ರಕೃತಿಯೆಂದರೆ ಮೂರ್ತಿ. ॥ ೯೪ ॥

---

[1] ಆಂಗಸ್ಯ—ಖ
ಲಿಂಗ—ಫ

[2] ಸ್ಥಾಪನೇ—ಗ, ಚ, ಜ

[3] ತತ್ತ್ವಮಂತ್ರಸ್ಯ—ಟ.
ತತ್ತ್ವಮಂತ್ರಾಶ್ಚ—ಕ, ಥ, ಪ
ತತ್ತ್ವಮಂತ್ರಂ ಚ—ಫ.

[4] ಷ್ವಾಂತರ್ಗತಾನ್—ಕ, ದ
ಷ್ವಂತರ್ಗತಾ—ಝ

[5] ಮಂತ್ರಾಃ—ಝ

[6] ತ್ಸ್ಪೂರಿತಾನ್—ಕ
ತಲ್ಪೂರಿತಾಃ—ಝ
ತೃರಿ—ಗ, ಚ.

[7] ಪೂರಿತಾನ್—ಗ, ಚ
ಪೂಜಿತಾನ್—ಧ

[8] ಈ ಅರ್ಧಪದ್ಯ ಫ ಪುಸ್ತಕದಲ್ಲಿಲ್ಲ.

[9] ಯೋಗ—ಟ, ಡ, ಪ

[10] ಸಾ—ಗ, ಚ, ಜ

[11] ಕೀರ್ತಿತಾಃ—ಕ, ಘ, ಛ, ಠ, ಥ, ತ, ದ
ಕೀರ್ತಿತಾಂ—ಟ.

ಪ್ರಾಣೋ[1] ಮನ್ತ್ರ[2] ಇತಿ ಪ್ರೋಕ್ತಃ[3]
ಪ್ರಕೃತಿರ್ಮೂರ್ತಿರೀರಿತಾ[4] ॥ ॥ ೯೪ ॥

ಮನ್ತ್ರಮೂರ್ತಿಸು[5]ಸಂಯೋಗಃ[6]
ಶಿವ[7]ಸಾನ್ನಿಧ್ಯಕಾರಣಮ್ ।
ತಸ್ಮಾದ್ವೈ ಮಂತ್ರಮೂರ್ತೀಶ್ಚ[8]
ಲಿಂಗ[9]ಮಧ್ಯೇ ತು[10] ವಿನ್ಯಸೇತ್ ॥ ॥ ೯೫ ॥

ಮಂತ್ರ ಮತ್ತು ಮೂರ್ತಿಗಳ ಸಂಬಂಧವು ಶಿವನ ಸಾಂನಿಧ್ಯಕ್ಕೆ ಕಾರಣ. ಆದುದರಿಂದ ಲಿಂಗದ ಮಧ್ಯದಲ್ಲಿ ಮಂತ್ರಗಳನ್ನೂ ಮೂರ್ತಿಗಳಿನ್ನೂ ವಿನ್ಯಾಸಮಾಡಬೇಕು. ॥ ೯೫ ॥

ಪ್ರತಿಷ್ಠಿತ ಲಿಂಗದ ಮತ್ತು ಉದ್ಭವಲಿಂಗದ ಮಸ್ತಕದಲ್ಲಿ 'ಹ' ಎಂಬ ಶುದ್ಧ ಪ್ರಾಸಾದಮಂತ್ರವನ್ನು ವಿನ್ಯಾಸಮಾಡಬೇಕು. ಸೂತ್ರಮಧ್ಯದಲ್ಲಿ 'ಹೌಂ' ಎಂಬ

---

[1] ಪ್ರಾಣಂ—ಕ, ಛ, ಟ, ಠ, ತ, ದ, ಧ.
[2] ಮಂತ್ರಂ—ಕ, ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ, ಧ
[3] ಪ್ರೋಕ್ತಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ.
[4] ಪ್ರಕೃತಿಮೂರ್ತಿರುಚ್ಯತೇ—ಕ, ಘ, ಚ, ಛ, ಟ, ಠ, ಡ, ಢ, ತ, ದ, ಧ, ಪ.
ಪ್ರಕೃತಿಂ ಮೂರ್ತಿರುಚ್ಯತೇ—ಗ, ಜ, ಥ
ಪಂಚ ಪ್ರಕೃತಿಮೂರ್ತಯಃ—ಫ.
[5] ಮೂರ್ತಿಷು—ಢ
ಮೂರ್ತಿಸ್ತು—ಡ, ಪ.
[6] ಸಂಯೋಗ—ಝ
ಸಂಯೋಗಂ—ಕ, ಘ, ಛ, ಜ, ಟ, ಠ, ಢ, ತ, ದ
ಸಂಯೋಗಾಃ—ಥ
ಸ್ವಸಂಯೋಗಾತ್—ಫ.
[7] ದೇವ—ಫ.
[8] ಮೂರ್ತಿಂ ಚ—ಝ
ಮೂರ್ತಿಶ್ಚ—ಕ, ಘ, ಛ, ಟ, ಠ, ಡ, ಢ, ತ, ಪ ಫ,
[9] ಅಂಗ—ಖ
[10] ಮಧ್ಯಕೇ—ಕ, ಖ, ಘ, ಛ, ಟ, ಠ, ಡ, ತ, ಥ, ದ, ಧ.
ಮಧ್ಯಗೇ—ಗ, ಚ.

[1]ಮೂರ್ಧ್ನಿ[2] ಪ್ರವಿನ್ಯಸೇಚ್ಛುದ್ಧಂ
ಮೂಲಂ[3] ವೈ[4] ಸೂತ್ರಮಧ್ಯಕೇ[5] ।
ತತ್ತ್ವಂ ತು ದಕ್ಷಿಣೇ[6] ಪ್ರೋಕ್ತಂ
ಆದಿಂ[7] ವಾಮೇ ತು ವಿನ್ಯಸೇತ್ ॥ ॥ ೯೬ ॥

ಆತ್ಮಾನಂ ಸೂತ್ರಮೂಲೇ ತು[8]
ವಿನ್ಯಸೇಚ್ಚ[9] ವಿಚಕ್ಷಣಃ ।
ಮನ್ತ್ರನ್ಯಾಸೋ[10] ಮಯಾ[11] ಪ್ರೋಕ್ತಃ[12]
ತತ್ತ್ವನ್ಯಾಸಮಥ[13] ಶೃಣು[14] ॥ ॥ ೯೭ ॥

ಮೂಲಪ್ರಾಸಾದಮಂತ್ರವನ್ನೂ, ವಿನ್ಯಾಸಮಾಡಬೇಕು. ದಕ್ಷಿಣಭಾಗದಲ್ಲಿ 'ಹಂ' ಎಂಬ ತತ್ತ್ವಪ್ರಾಸಾದಮಂತ್ರವನ್ನೂ, ವಾಮಭಾಗದಲ್ಲಿ 'ಹೌಂ' ಎಂಬ ಆದಿಪ್ರಾಸಾದ ಮಂತ್ರವನ್ನೂ ವಿನ್ಯಾಸಮಾಡಬೇಕು. ॥ ೯೬ ॥

ಮಂತ್ರನ್ಯಾಸವನ್ನು ಬಲ್ಲವನು ಸೂತ್ರಮೂಲದಲ್ಲಿ 'ಹಂಸ' ಎಂಬ ಆತ್ಮ ಪ್ರಾಸಾದಮಂತ್ರವನ್ನು ವಿನ್ಯಾಸಮಾಡಬೇಕು. ಮಂತ್ರನ್ಯಾಸವನ್ನು ಹೇಳಿದ್ದಾಯಿತು. ಷಣ್ಮುಖನೇ ! ಇನ್ನು ಸದಾಶಿವತತ್ತ್ವವಿನ್ಯಾಸವನ್ನು ಹೇಳುವೆನು. ॥೯೭॥

---

[1] ಇಲ್ಲಿಂದ 'ವಿಚಕ್ಷಣಃ' ವರೆಗೆ—ಫ. ಪುಸ್ತಕದಲ್ಲಿ ಬೇರೆ ಪಾಠವಿದೆ :—'ಶುದ್ಧಮೂಲಂ ಚ ಮಧ್ಯೇ ತು ತತ್ತ್ವಂ ಸವ್ಯೇ ತು ವಿನ್ಯಸೇತ್ । ಮೂರ್ತಿಂ ವಾಮೇ ತು ವಿನ್ಯಸ್ಯ ಆತ್ಮಾನಂ ಸೂತ್ರ ಮೂಲಕೇ'' ಎಂದು.

[2] ಮೂರ್ತಿಃ—ಢ, ಪ.

[3] ಮೂಲಃ—ಢ, ಪ.

[4] ಸ್ಯಾತ್—ಖ, ಘ, ಛ, ಜ, ಠ, ಡ, ಢ.

[5] ಮಧ್ಯಮೇ—ಝ.

[6] ತ್ರಿವಿಧಂ—ಝ.
ದಕ್ಷಿಣಂ—ಠ.

[7] ಆದಿ—ಕ, ಖ, ಘ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.

[8] ತು— ಗ, ಚ, ಝ

[9] ತ್ತು—ಕ, ಖ, ಛ, ಜ, ಟ, ಡ, ಢ, ತ, ಥ, ದ, ಧ, ಪ

[10] ಮಂತ್ರನ್ಯಾಸಂ—ಕ, ಗ, ಚ, ಛ, ಜ, ಟ, ಠ, ಡ, ತ, ಥ, ದ, ಧ, ಪ, ಫ.

[11] ಇದಂ—ಕ, ಗ, ಚ, ಛ, ಜ, ಟ, ಠ, ಡ, ತ, ಥ, ದ, ಧ, ಪ
ಅಯಂ—ಝ
ಇತಿ—ಫ

[12] ಪ್ರೋಕ್ತಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ.

[13] ಮಿಹ—ಥ

[14] ಉಚ್ಯತೇ—ಕ, ಗ, ಘ, ಚ, ಛ, ಜ, ಠ, ಢ, ತ, ಥ, ದ, ಧ, ಫ

ಕರ್ಮೇಶಂ ಪುರತೋ[1] ನ್ಯಸ್ಯೇತ್[2]
ಕರ್ತೃ ಸವ್ಯೇ ಚ ವಿನ್ಯಸೇತ್[3] |
ಮೂರ್ತಂ[4] ಚ[5] ಪಶ್ಚಿಮೇ[6] ನ್ಯಸ್ಯೇತ್[7]
ಅಮೂರ್ತಂ[8] ಚೋತ್ತರೇ[9] ನ್ಯಸೇತ್[10] || || ೯೮ ||

ಊರ್ಧ್ವೇ ತು ಶಿವಸಾದಾಖ್ಯಂ
ಪಂಚತತ್ತ್ವಾನಿ ವಿನ್ಯಸೇತ್[11] |
ಪಂಚಮೂರ್ತಿಮಯಂ[12] ದೇವಂ
ಸರ್ವಕಾರಣಕಾರಣಮ್ || || ೯೯ ||

ಸೂತ್ರಮೂಲದಲ್ಲಿ ಕರ್ಮಸಾದಾಖ್ಯತತ್ತ್ವವನ್ನೂ, ದಕ್ಷಿಣಭಾಗದಲ್ಲಿ ಕರ್ತೃಸಾದಾಖ್ಯತತ್ತ್ವವನ್ನೂ, ಪಶ್ಚಿಮಭಾಗದಲ್ಲಿ ಮೂರ್ತಸಾದಾಖ್ಯತತ್ತ್ವವನ್ನೂ, ಉತ್ತರಭಾಗದಲ್ಲಿ ಅಮೂರ್ತಸಾದಾಖ್ಯತತ್ತ್ವವನ್ನೂ ವಿನ್ಯಾಸಮಾಡಬೇಕು. ||೯೮||

ಊರ್ಧ್ವಭಾಗದಲ್ಲಿ ಶಿವಸಾದಾಖ್ಯತತ್ತ್ವವನ್ನು ವಿನ್ಯಾಸಮಾಡಬೇಕು. ಹೀಗೆ ಪಂಚ, ಸದಾಶಿವತತ್ತ್ವಗಳನ್ನು ವಿನ್ಯಾಸಮಾಡಬೇಕು. ಕರ್ಮೇಶಾದಿ ಪಂಚಮೂರ್ತಿಸ್ವರೂಪನೂ ಸಮಸ್ತ ಕಾರಣಗಳಿಗೂ ಕಾರಣನೂ ;— ||೯೯||

---

[1] ಪೂರ್ವತೋ—ಡ, ಫ.
[2] ನ್ಯಸ್ಯ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಫ.
[3] ಕರ್ತೃಪಕ್ಷೇ ಪ್ರವಿನ್ಯಸೇತ್—ಧ
ಕರ್ತೃ ಸವ್ಯೇ ತು ವಿನ್ಯಸೇತ್—ಜ, ಫ.
ಕರ್ತೃ ಸರ್ವ್ಯೇ ಚ ದಕ್ಷಿಣೇ—ಝ
[4] ಮೂರ್ತಿಂ—ಕ, ಛ, ಜ, ಟ, ಠ, ಢ, ತ, ಥ, ದ, ಫ.
[5] ವೈ—ಕ, ಟ, ಠ, ಢ, ತ, ಥ, ದ, ಧ.
ಚೈವ—ಧ.
[6] ಚಾಪರೇ—ಕ, ಘ, ಟ, ಠ, ಡ, ಢ, ತ, ಥ, ದ
[7] ನ್ಯಸ್ಯ—ಕ, ಖ, ಘ, ಟ, ಠ, ಢ, ತ, ಥ, ಧ
[8] ತತ್ತ್ವಮೂರ್ತಿಂ—ಕ, ಘ, ಠ
ತ್ವಮೂರ್ತಿಂ—ಖ, ಟ, ತ, ಥ, ಧ
[9] ಇತರೇ—ಕ, ಘ, ಟ, ಠ, ತ, ಥ, ದ
[10] ನ್ಯಸ್ಯೇತ್—ಕ
[11] ವಿನ್ಯಸ್ಯೇತ್
[12] ತತ್ತ್ವಮಯಂ—ಫ.

ಅಷ್ಟತ್ರಿಂಶತ್ಕಲೋ[1]ಪೇತಂ
  ಧ್ಯಾತ್ವಾ ತು[2] ಸಕಲೀ[3]ಕೃತಮ್ |
ಆವಾಹಯೇತ್[4] ತತೋ ದೇವಂ
  ಪಂಚಾಕ್ಷರವಿಧಾನತಃ[5] || || ೧೦೦ ||

ಷಡಕ್ಷರೇಣ[6] ಮನ್ತ್ರೇಣ
  ಸ್ಥಾಪಯೇತ್ತು[7] ವಿಚಕ್ಷಣಃ |
ಅಷ್ಟಾಕ್ಷರೇಣ[8] ಮನ್ತ್ರೇಣ
  ಸನ್ನಿಧೀ[9]ಕರಣಂ[10] ಕುರು || || ೧೦೧ ||

ಮೂವತ್ತೆಂಟು ಕಲೆಗಳಿಂದ ಕೂಡಿ ಸಕಲನೂ ಆದ ಪರಮೇಶ್ವರನನ್ನು ಹೃದಯದಲ್ಲಿ ಧ್ಯಾನಿಸಿ, ತರುವಾಯ ಪಂಚಾಕ್ಷರಮಂತ್ರದಿಂದ ಅವನನ್ನು ಆವಾಹನೆ ಮಾಡಬೇಕು. || ೧೦೦ ||

ಮಂತ್ರವನ್ನು ಬಲ್ಲವನು ಷಡಕ್ಷರ ಮಂತ್ರದಿಂದ ಈಶ್ವರನನ್ನು ಸ್ಥಾಪಿಸಬೇಕು. ಅಷ್ಟಾಕ್ಷರಮಂತ್ರದಿಂದ ಸಂನಿಧೀಕರಿಸಬೇಕು. || ೧೦೧ ||

ನವಾಕ್ಷರಮಂತ್ರದಿಂದ ಮನಸ್ಸನ್ನು ಮಹೇಶ್ವರನಲ್ಲಿ ನಿರೋಧಿಸಬೇಕು. ದಶಾಕ್ಷರಮಂತ್ರದಿಂದ ಅವನನ್ನು ಪೂಜಿಸಬೇಕು. ಬುದ್ಧಿವಂತನು ಬ್ರಹ್ಮಾಂಗಮಂತ್ರ

---

[1] ತ್ರಿಂಶಕಲೋ—ಕ
[2] ಮಧ್ಯೇ ತು—ಝ
[3] ಸಕಲಂ—ಕ
[4] ಆವಾಹಯ—ಕ, ಘ, ಛ, ಠ, ತ
[5] ಪಂಚಾಕ್ಷರೇಣ ಮಂತ್ರೇಣ—ಝ. ಫ.
[6] ಣ ತು—ಕ, ಜ, ಢ, ಪ, ಫ.
[7] ಯೇಚ್ಛ—ಖ.
ಯಂತು—ಛ
[8] ಕ್ಷರ—ಕ
[9] ಶಾನ್ತ್ಯರ್ಥ—ಫ.
ಸಂನಿಧಿ—ಪ
[10] ಕಾರಣಂ—ಢ, ದ.

ನಿರೋಧಯೇ[1]ನ್ನವಾರ್ಣೇನ
ದಶಬೀಜೇನ ಪೂಜಯೇತ್[2] ।
ಪಾದ್ಯಂ[3] ಗನ್ಧಾದಿಕಂ ದದ್ಯಾತ್
ಬ್ರಹ್ಮಾಂಗೈಃ ಸಹ ಬುದ್ಧಿಮಾನ್ ॥ ॥ ೧೦೨ ॥

ಸಕಲಸ್ಥಾಪನಾ[4]ಕಾಲೇ
ತದ್ಬೀಜಂ ಹೃದಿ ವಿನ್ಯಸೇತ್ ।
ಸೃಷ್ಟಿಮೂರ್ತ್ಯಾ[5] ನ್ಯಸೇತ್ ಸೃಷ್ಟಿಂ[6]
ಸ್ಥಿತಿಮೂರ್ತ್ಯಾ ನ್ಯಸೇತ್ ಸ್ಥಿತಿಮ್ ॥ ॥ ೧೦೩ ॥

ಪೂರ್ವಕವಾಗಿ ಪಾದ್ಯ ಮತ್ತು ಗಂಧಾದಿಗಳನ್ನು ಸಮರ್ಪಿಸಬೇಕು. ॥ ೧೦೨ ॥

ಮಹೇಶ್ವರಮೂರ್ತಿಯ ಪ್ರತಿಷ್ಠಾಸಮಯದಲ್ಲಿ ಮಂತ್ರಬೀಜವನ್ನು ಆ ಮೂರ್ತಿಯ ಹೃದಯದಲ್ಲಿ ವಿನ್ಯಾಸಮಾಡಬೇಕು. ಸೃಷ್ಟಿಮೂರ್ತಿಯಲ್ಲಿ ಸೃಷ್ಟಿ ಮಂತ್ರಬೀಜವನ್ನೂ, ಸ್ಥಿತಿಮೂರ್ತಿಯಲ್ಲಿ ಸ್ಥಿತಿಮಂತ್ರ ಬೀಜವನ್ನೂ ವಿನ್ಯಾಸಮಾಡಬೇಕು. ॥ ೧೦೩ ॥

ಶೈವ ಪ್ರತಿಷ್ಠೆಯಲ್ಲಿ ಕುಶಲನಾದ ಆಚಾರ್ಯನು ಸಂಹಾರಮೂರ್ತಿಯಲ್ಲಿ ಸಂಹಾರಮಂತ್ರಬೀಜವನ್ನು ವಿನ್ಯಾಸಮಾಡಬೇಕು. ಅವನು ಈ ಮಂತ್ರಭೇದವನ್ನು

---

[1] ನಿವೇದಯು—ಕ, ಖ, ಘ, ಛ, ಜ, ಟ, ತ, ಥ, ದ
ನಿರೋಧಯು—ಧ
ನಿವೇದಯೋ—ಚ, ಠ, ಡ.
ನಿರೋಧನ—ಫ

[2] ಪೂಜಯುಃ—ಕ, ಥ, ದ
ಪೂಜಯು—ಖ, ಗ, ಘ, ಚ, ಜ, ಟ, ಠ, ತ
ಪೂರಯು—ಛ
ಪೂಜಯೇಃ—ಪ
ಪೂರಯೇಃ—ಡ
ಪೂರಯೇತ್—ಝ.

[3] ಪಾದ್ಯ—ಝ

[4] ಸ್ಥಾಪನೇ—ಜ, ಡ, ಫ.
ಸ್ಥಾಪನ—ಪ

[5] ಮೂರ್ತಿಂ—ಟ, ಥ

[6] ಸೃಷ್ಟಿ—ಕ, ಟ

ಸಂಹಾರೇ ಸಂಹೃತಿಂ[1] ಬೀಜಂ
ವಿನ್ಯಸೇತ್ತು ವಿಚಕ್ಷಣಃ ।
ಶಕ್ತೀನಾಂ ಸ್ಥಾಪನಾಕಾಲೇ[2]
ತತ್ತದ್ಬೀಜಂ ಹೃದಿ ನ್ಯಸೇತ್[3] ॥ ॥ ೧೦೪ ॥

[4]ಮನ್ತ್ರಭೇದಮಿದಂ[ಮಂ] ಜ್ಞಾತ್ವಾ
ತ್ವಾಚಾರ್ಯಃ[5]ಸ್ಥಾಪಕೋತ್ತಮಃ ।
ಕ್ರಿಯಾ ಶರೀರಮಿತ್ಯುಕ್ತಂ [ಕ್ತಾ][6]
ಮನ್ತ್ರೋ[7] ಜೀವ ಇತಿ ಸ್ಮೃತಃ[8] ॥ ॥ ೧೦೫ ॥

ತಿಳಿದು ಉಮಾದಿ ಶಕ್ತಿಮೂರ್ತಿಗಳನ್ನು ಪ್ರತಿಷ್ಠೆ ಮಾಡುವ ಸಮಯದಲ್ಲಿ ಆಯಾ ಮಂತ್ರಬೀಜವನ್ನು ಆಯಾ ಮೂರ್ತಿಯ ಹೃದಯದಲ್ಲಿ ವಿನ್ಯಾಸಮಾಡಬೇಕು. ॥ ೧೦೪ ॥

ಶೈವಕ್ರಿಯೆಯನ್ನು ದೇಹವೆಂದೂ, ಮಂತ್ರವನ್ನು ಬೀಜವೆಂದೂ ಹೇಳುತ್ತಾರೆ. ॥ ೧೦೫ ॥

---

[1] ಸಂಹೃತಂ—ಬಿ
ಸಂಹೃತಿಃ—ಟ, ಡ, ಢ, ತ, ಥ, ದ, ಧ, ಪ

[2] ಶಕ್ತಿಸ್ಥಾಪನಕಾಲೇ ತು—ಫ.
ಶಕ್ತೀನಾಂ ಸ್ಥಾಪನೇ ಕಾಲೇ—ಗ, ಚ, ಜ, ಥ
ಶಕ್ತೀನಾಂ ಸ್ಥಾಪನಕಾಲೇ—ಡ, ಪ

[3] ತದ್ಬೀಜಂ ಹೃದಿ ವಿನ್ಯಸೇತ್—ಝ.

[4] ಈ ಅರ್ಧಪದ್ಯ—ಕ, ಖ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಫ. ಪುಸ್ತಕಗಳಲ್ಲಿಲ್ಲ.

[5] ಮಂತ್ರಭೇದಂ ಹಿ ಯೋ ಜ್ಞಾತುಮಾಚಾರ್ಯಃ—ಫ.

[6] ಮಿತ್ಯುಕ್ತೋ—ಝ

[7] ಮನ್ತ್ರಂ—ಕ, ಗ, ಜ,
ಮನ್ತ್ರ—ಘ, ಛ, ಟ, ಠ, ಡ, ಢ, ತ, ಥ, ದ, ಪ.
ಮನ್ತ್ರೋ—ಫ.

[8] ಜೀವಮಿತಿ ಸ್ಮೃತಂ—ಕ, ಗ, ಘ, ಛ, ಜ, ಠ, ಡ, ತ, ಥ, ದ, ಧ, ಫ.
ಬೀಜ ಇತಿ ಸ್ಮೃತಃ—ಟ.

ಕ್ರಿಯಾಮಂತ್ರಪ್ರಯೋಗೋ[1] ಹಿ
ಶಿವಸಾನ್ನಿಧ್ಯಕಾರಣಮ್[2] ।
ತಸ್ಮಾತ್ ಜೀವಂ[3] ಶರೀರಂ ಚ
ಜ್ಞಾತ್ವಾ ಸರ್ವಂ ಸಮಾಚರೇತ್[4] ॥ ॥ ೧೦೬ ॥

ಮನ್ತ್ರಭೇದೋ[5] ಮಯಾ[6] ಪ್ರೋಕ್ತಃ[7]
ಪ್ರಣವಂ ಚ ತತಃ ಶೃಣು[8] ॥ ॥ ೧೦೭ ॥

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಮನ್ತ್ರಭೇದೋ ನಾಮ ಪಂಚಮಃ ಪಟಲಃ

ಕ್ರಿಯೆ ಮತ್ತು ಮಂತ್ರಗಳ ಸಂಬಂಧವು ಶಿವನ ಸಾಂನಿಧ್ಯಕ್ಕೆ ಕಾರಣವಾಗುತ್ತದೆ. ಆದುದರಿಂದ ಜೀವರೂಪವಾದ ಮಂತ್ರವನ್ನೂ ದೇಹರೂಪವಾದ ಕ್ರಿಯೆಯನ್ನು ತಿಳಿದು ಸಮಸ್ತ ಶೈವಕ್ರಿಯೆಗಳನ್ನೂ ಆಚರಿಸಬೇಕು. ॥ ೧೦೬ ॥

ಎಲೈ ಷಣ್ಮುಖನೇ ! ಮಂತ್ರಭೇದವನ್ನು ಹೇಳಿದ್ದಾಯಿತು. ಇನ್ನು ಪ್ರಣವ ಭೇದವನ್ನು ಹೇಳುವೆನು. ॥ ೧೦೭ ॥

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಮಂತ್ರಭೇದೋ ನಾಮ ಪಂಚಮಃ ಪಟಲಃ

---

[1] ಪ್ರಯೋಗಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ.
[2] ಕಾರಕಃ—ಫ.
[3] ತಸ್ಮಾಜ್ಜೀವ—ಡ, ಪ.
ತಸ್ಯದೀಪ—ಫ.
[4] ಕರ್ಮಾರಭೇದುಪ್ಪಧಃ—ಫ.
[5] ಭೇದಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ.
[6] ಇದಂ—ಕ, ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ, ಪ.
ಅಯಂ—ಝ—ಇತಿ—ಧ.
[7] ಪ್ರೋಕ್ತಂ—ಕ, ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ
[8] ಪ್ರಣವಂ ಚ ಪರಿಶೃಣು—ಕ
ಪ್ರಣವಂ ಚ ತಥಾ ಶೃಣು—ಪ
ಪ್ರಣವ್ಯೋಽಥ ಪ್ರಕಾಶ್ಯತೇ—ಫ.

ಷಷ್ಠ—ಪ್ರಣವಭೇದ ಪಟಲ

[1]ಉಚ್ಚಾರಯನ್ತಿ ಯಮಿನಃ[2] ಶಿವಸಂಗಮಾಯ
ವಾಮಾದಿಶಕ್ತಿಸಹಿತಂ ಸಕಲಸ್ಯ ಹೇತುಮ್[3] ।
ದೇವಾದಿ[4]ಜನ್ಮವಿಲಯಸ್ಥಿತಿಭೂಮಿಭೂತಂ[5]
ಉಚ್ಚಾರಯಾಮಿ ಹೃದಯಂ ಪ್ರಣವಂ
ತಥಾಽಽನ್ತಮ್[6] ॥ ॥ ೧ ॥

ಅಥ ಪ್ರಣವಭೇದಂ ತು[7]
ಪ್ರವಕ್ಷ್ಯಾಮಿ ಸಮಾಸತಃ ।

ವಾಮಾದಿ ಶಕ್ತಿಗಳಿಂದ ಕೂಡಿದ ಸಮಸ್ತ ಪ್ರಪಂಚಕ್ಕೆ ಕಾರಣವಾದ ದೇವಾದಿ ಸಮಸ್ತರ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಪ್ರಣವವನ್ನು ಶಿವಯೋಗಿಗಳು ಶಿವಸಾಯುಜ್ಯಕ್ಕಾಗಿ ಜೀವವಿರುವವರೆಗೂ ಉಚ್ಚರಿಸುವಂತೆ ನಾನೂ ಜೀವವಿರುವವರೆಗೆ ಅದನ್ನು ಮನಸ್ಸಿನಲ್ಲಿ ಉಚ್ಚರಿಸುತ್ತೇನೆ. ॥ ೧ ॥

ಮನುಷ್ಯರಿಗೆ ಸಮಸ್ತ ಪಾಪಪರಿಹಾರಕವೂ ಮೋಕ್ಷಪ್ರದವೂ ಸರ್ವೋತ್ಕೃಷ್ಟವೂ ಆದ ಪ್ರಣವಭೇದವನ್ನು ಸಂಕ್ಷೇಪವಾಗಿ ಹೇಳುವೆನು. ॥ ೨ ॥

---

[1] ಈ ಮಂಗಲಪದ್ಯ—ಖ, ಝ, ಡ, ಢ, ತ, ಥ, ದ, ಫ. ಪುಸ್ತಕಗಳಲ್ಲಿಲ್ಲ.

[2] ಯಾಮಿನಃ—ಗ

[3] ಸಕಲಸ್ಸಮೇತಂ—ಧ

[4] ವೇದಾದಿ—ಕ, ಗ, ಘ, ಚ, ಜ, ಟ, ಠ, ಧ, ಪ

[5] ಭೂತಃ—ಕ
ಭೂತಿಂ—ಧ
ಭೂತಾಂ—ಘ, ತ

[6] ತಥಾ ತಂ—ಕ, ಘ, ಛ, ಧ, ಪ.

[7] ಚ—ಪ

ಸರ್ವಪಾಪಹರಂ ಚೈವ
ಮುಕ್ತಿದಂ ಪರಮಂ[1] ನೃಣಾಮ್ ॥ ॥ ೨ ॥

ಪ್ರಣವಂ ಸರ್ವದೇವಾಖ್ಯಂ
ಸರ್ವದೇವಮಯಂ ವಿದುಃ ।
ಸರ್ವೇಷಾಂ ಚೈವ ಮಂತ್ರಾಣಾಂ
ಪ್ರಣವಃ ಪ್ರಾಣ[2] ಉಚ್ಯತೇ ॥ ॥ ೩ ॥

ಪ್ರಣವಃ[3] ಪಞ್ಚಭೇದಃ[4] ಸ್ಯಾತ್
ತದ್ಭೇದಂ ಶೃಣು ಷಣ್ಮುಖ ।
ಸಾಕಲ್ಯಂ ಶಾಮ್ಭವಂ ಸೌಖ್ಯಂ
ಸಾವಶ್ಯಂ ಸಾಯುಜಂ[5] ತಥಾ ॥ ॥ ೪ ॥

ಏತೇ ವೈ ಪಂಚ ಭೇದಾಸ್ತು
ಪಂಚವಕ್ತ್ರೇಷು ಚೋದ್ಧೃತಾಃ।

ಈ ಪ್ರಣವವನ್ನು ಸಮಸ್ತ ವರ್ಣಾಧಿದೇವತೆಗಳ ಹೆಸರನ್ನುಳ್ಳದ್ದೆಂದೂ, ಸರ್ವದೇವಸ್ವರೂಪವಾದುದೆಂದೂ, ಸಮಸ್ತಮಂತ್ರಗಳಿಗೆ ಪ್ರಾಣಸ್ವರೂಪವಾದುದೆಂದೂ ಭಾವಿಸುತ್ತಾರೆ. ॥ ೩ ॥

ಷಣ್ಮುಖನೇ ! ಸಾಕಲ್ಯ ಶಾಂಭವ ಸೌಖ್ಯ ಸಾವಶ್ಯ ಮತ್ತು ಸಾಯುಜ್ಯವೆಂಬ ಪಂಚ ಪ್ರಣವಭೇದಗಳನ್ನು ಕೇಳು. ॥ ೪ ॥

ಪ್ರಣವದ ಈ ಪಂಚವಿಧಗಳು ಸದಾಶಿವನ ಪಂಚಮುಖಗಳಿಂದ ಆವಿರ್ಭವಿಸಿವೆ.

---

[1] ಪ್ರಣಮಂ—ಛ
ಪ್ರಣವಂ—ತ

[2] ಪ್ರಣವಂ ಪ್ರಾಣಂ—ಕ, ಗ, ಘ, ಚ, ಛ, ಜ, ಟ, ಡ, ಢ, ತ, ದ, ಧ, ಪ

[3] ಪ್ರಣವಂ—ಕ, ಗ, ಘ, ಚ, ಜ, ದ, ಧ, ಪ
ಪ್ರಣಮಂ—ಛ, ಟ.

[4] ಭೇದಂ—ಕ, ಗ, ಘ, ಚ, ಛ, ಜ, ಟ, ಢ, ದ, ಧ, ಪ

[5] ಸಾಯುಜ್ಯಂ—ಕ, ಢ, ದ.
ಸಯುಜಂ—ಧ

ಅಕಾರಶ್ಚ[1] ಉ[ಹ್ಯ]ಕಾರಶ್ಚ[2]
ಮಕಾರಶ್ಚ[3] ತ್ರಿಧಾ ಭವೇತ್ ॥ ॥ ೫ ॥

ತ್ರಿತ[4]ಯಾಂತರ್ಗತಂ[ತೋ] ನಾದಂ[ದಃ]
ಚತುರ್ಥಂ[5][ರ್ಥೋ] ಮುಕ್ತಿಕಾರಣಮ್ ।
ಅಕಾರೋ[6] ದಕ್ಷಿಣಾಂಶಃ[7] ಸ್ಯಾತ್
ವಾಮಾಂಶಃ[8] ಸ್ಯಾದುಕಾರಕಃ[9] ॥ ॥ ೬ ॥

ಮಕಾರೋ[10] ಮಧ್ಯದೇಶಃ[11] ಸ್ಯಾತ್
ತಸ್ಮಾತ್ ತ್ರಿಃ[12] ಪ್ರಣವಾತ್ಮಕಮ್[13] ।
ಹಕಾರಃ[14] ತಸ್ಯ ಮಧ್ಯೇ ತು
ಸಂಸ್ಥಿತಃ[15] ಸರ್ವಕಾರಣಮ್ ॥ ॥ ೭ ॥

ಪ್ರಣವವು ಅ, ಉ, ಮ ಎಂಬ ವರ್ಣತ್ರಯಾತ್ಮಕವಾದುದು. ॥ ೫ ॥

ಅ, ಉ, ಮ, ವರ್ಣಗಳಲ್ಲಿ ಅಂತರ್ಗತವೂ ಮುಕ್ತಿಗೆ ಕಾರಣವೂ ಆಗಿರುವ ಹಕಾರವು ನಾಲ್ಕನೆಯ ವರ್ಣ. ಅಕಾರವು ಪ್ರಣವದ ಬಲಭಾಗವೂ, ಉಕಾರವು ಎಡಭಾಗವೂ,— ॥ ೬ ॥

—ಮಕಾರವು ಮಧ್ಯಭಾಗವೂ ಆಗಿವೆ. ಈ ಮೂರುವರ್ಣಗಳೂ ಕೂಡಿ

---

[1] ಅಕಾರಂ ಚ—ಕ, ಗ, ಘ, ಚ, ಛ, ಟ, ತ, ಧ, ದ, ಧ, ಪ.
[2] ಕಾರಂ ಚ—ಕ, ಗ, ಘ, ಜ, ಛ, ಟ, ತ, ಥ, ದ, ಧ, ಪ.
[3] ಮಕಾರಂ ಚ—ಕ, ಗ, ಘ, ಚ, ಛ, ಟ, ತ, ಥ, ದ, ಧ, ಪ.
[4] ತೃತೀ—ಖ, ಗ, ಘ, ಚ, ಛ, ಜ, ಝ, ಟ, ಡ, ಢ, ತ, ಥ, ದ, ಪ, ಫ.
[5] ಚತುರ್ಯಂ—ಕ, ಟ, ಠ, ಢ, ತ, ದ
[6] ಅಕಾರಂ—ಕ, ಘ, ಛ, ಜ, ಟ, ಢ, ತ, ಥ, ದ, ಧ.
[7] ದಕ್ಷಿಣಾಂಗಂ—ಧ
[8] ವಾಮಾಂಗಂ—ಧ
[9] ಉಕಾರಕಂ—ಕ, ಗ, ಘ, ಚ, ಛ, ಜ, ಟ, ಠ, ತ, ಥ, ದ, ಥ, ಪ
[10] ಮಕಾರಂ—ಕ, ಗ, ಘ, ಚ, ಛ, ಜ, ಟ, ಠ, ತ, ದ, ಧ
[11] ದೇಹಂ—ಕ, ಘ, ಟ, ಢ, ತ, ದ, ಧ, ಪ
[12] ತ್ರಿ—ಕ, ಖ, ಘ, ಛ, ಜ, ಟ, ಢ, ತ, ಥ, ದ
[13] ಪ್ರಥಮಾತ್ಮಕಂ—ಛ
[14] ಹಕಾರಂ—ಕ, ಗ, ಘ, ಚ, ಛ, ಜ, ಟ, ತ, ಥ, ದ, ಧ, ಪ
[15] ಸಂಸ್ಥಿತಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.

ಅಕಾರಂ[1] ಬ್ರಹ್ಮದೈವತ್ಯಂ
ಉಕಾರಂ[2] ವಿಷ್ಣುದೈವತಮ್[3] ।
ಮಕಾರಂ[4] ರುದ್ರದೈವತ್ಯಂ
ಓಙ್ಕಾರಂ ತು[5] ಸದಾಶಿವಮ್[6] ॥ ॥ ೮ ॥

ನಾದಂ ಶಿವಮಯಂ ವಿದ್ಯಾತ್[7]
ಪಞ್ಚದೇವಾತ್ಮಕಂ[8] ವಿದುಃ ।
ಅಕಾರೋಕಾರಸಂಯೋಗಾತ್
ಓಕಾರಂ[9] ಸ್ವರ[10] ಉಚ್ಯತೇ ॥ ॥ ೯ ॥

ಓಮಿತ್ಯೇಕಾಕ್ಷರಂ ಬ್ರಹ್ಮ[11]
ವದಂತಿ[12] ಸರ್ವ[13]ಯೋಗಿನಃ

ಪ್ರಣವವಾಗುತ್ತದೆ. ಸಮಸ್ತಕ್ಕೂ ಕಾರಣವಾದ ಹಕಾರವು ಪ್ರಣವದ ಮಧ್ಯದಲ್ಲಿದೆ ॥ ೭ ॥

ಅಕಾರಕ್ಕೆ ಬ್ರಹ್ಮನೂ, ಉಕಾರಕ್ಕೆ ವಿಷ್ಣುವೂ, ಮಕಾರಕ್ಕೆ ರುದ್ರನೂ ಓಂಕಾರಕ್ಕೆ ಸದಾಶಿವನೂ ಅಧಿದೇವತೆಗಳು. ॥ ೮ ॥

ನಾದವೆಂಬ ಹಕಾರಕ್ಕೆ ಶಿವನು ಅಧಿದೇವತೆ. ಹೀಗೆ ಪ್ರಣವವು ಪಂಚದೇವತಾ ರೂಪವಾದುದು. ಅ, ಉ, ವರ್ಣಗಳ ಸಂಯೋಗದಿಂದಾದ ಓ ವರ್ಣವನ್ನು ಸ್ವರವೆನ್ನುತ್ತಾರೆ. ॥ ೯ ॥

---

[1] ಅಕಾರೋ—ಖ, ಝ.
[2] ಉಕಾರೋ—ಖ, ಝ.
[3] ದೈವತಃ—ಕ
[4] ಮಕಾರಃ—ಖ, ಝ.
[5] ಓಙ್ಕಾರಸ್ತು—ಖ, ಝ.
[6] ಸದಾಶಿವಃ—ಖ, ಝ.
[7] ವಿನ್ದ್ಯಾತ್—ಕ, ಘ, ಟ, ಠ, ತ, ಥ, ದ, ಧ.
[8] ವೇದಾತ್ಮಕಂ—ಟ
[9] ಓಙ್ಕಾರಃ—ಛ, ಥ.
[10] ಸ್ವರಂ—ಕ, ಘ, ಛ, ಝ, ಟ, ಠ, ಡ, ಢ, ಥ, ದ, ಧ, ಪ, ಫ.
[11] ಬ್ರಹ್ಮಾ—ಕ
[12] ವದನ್ತೇ—ಕ, ಘ, ಛ, ಜ, ಟ, ಠ, ತ, ದ.
[13] ಶಿವ—ಖ, ಗ, ಚ, ಜ, ಝ, ಡ, ಧ, ಫ.

ಪಞ್ಚಮಂ ಪ್ರಥಮೋಪೇತಂ
ತೃತೀಯಾನ್ತರ್ಗತಂ ಪರಮ್ ॥ ॥ ೧೦ ॥

ಸಾಕಲ್ಯಮಿತಿ ವಿ[1]ಜ್ಞೇಯಂ
ಪೂರ್ವವ[ಕ್ತ್ರಾತ್ತು]ಕ್ತ್ರೇ ತು ಜಾಯತೇ ।
[2]ಆದಿಬೀಜಂ ಚತುರ್ಥಾನ್ತಂ[3]
ಭಾಂತಂ[4] ಭೂತಾನ್ತಸಂಯುತಮ್[5] ॥ ॥ ೧೧ ॥

ಚತುರ್ಥ[6]ಸ್ವರಸಂಯುಕ್ತಂ
ಶಾಮ್ಭವಂ ದಕ್ಷಿಣಾನನೇ[ನಾತ್][7] ।

ಸಮಸ್ತ ಯೋಗಿಗಳು ಓಂ ಎಂಬ ಏಕಾಕ್ಷರವನ್ನು ಪರಬ್ರಹ್ಮವೆಂದು ಭಾವಿಸುತ್ತಾರೆ. ಅಕಾರಸಹಿತವಾದ ಉಕಾರವನ್ನೂ, ಹಕಾರವನ್ನು ಮಧ್ಯದಲ್ಲುಳ್ಳ ಮಕಾರವನ್ನೂ ಉದ್ಧರಿಸಿದರೆ—ಅ, ಉ, ಮ, ಓಂ ಎಂದಾಗುತ್ತದೆ. ॥ ೧೦ ॥

ಇದನ್ನು ಸಾಕಲ್ಯ ಪ್ರಣವವೆಂದು ತಿಳಿಯಬೇಕು. ಇದು ಸದಾಶಿವನ ಪೂರ್ವ ಮುಖದಿಂದ ಆವಿರ್ಭವಿಸುತ್ತದೆ.

ಅಕಾರವನ್ನೂ ಉಕಾರವನ್ನೂ ಹಕಾರಸಹಿತವಾದ ಮಕಾರವನ್ನೂ ಉದ್ಧರಿಸಿ— ॥ ೧೧ ॥

ಈ ಕಾರವನ್ನು ಸೇರಿಸಿದರೆ ಅ, ಉ, ಮ, ಹ, ಈ ಎಂಬ ಶಾಂಭಪ್ರಣವವಾಗು

---

[1] ಲ್ಯಾಖ್ಯಮಿತಿ—ಕ, ಛ.

[2] ಇಲ್ಲಿಂದ 'ಶಾಮ್ಭವಂ ದಕ್ಷಿಣಾನನಾತ್' ವರೆಗೆ—ಕ, ಘ, ತ, ಥ ಪುಸ್ತಕಗಳಲ್ಲಿಲ್ಲ

[3] ಚತುರ್ಥ್ಯಾನ್ತಂ—ಗ, ಚ, ಜ.
ಚತುರ್ಯಂ ಚ—ಛ, ಟ, ಠ, ದ
ಚ ತುರ್ಯಾನ್ತಂ—ಝ.

[4] ಭಾನ್ತ—ಪ

[5] ಸಂಯುಕ್ತಂ—ಛ
ಕಲಾದಿಪಂಚಮಂ ಚೈವ ಅನಿಲಾನ್ತಂ ಸಮುದ್ಧರೇತ್—ಥ.

[6] ದ್ವಾದಶ—ಠ, ಧ.
ಪಂಚಮಂ—ಛ, ಟ, ಥ.
ಪಂಚಮ—ಠ, ದ.

[7] ದಕ್ಷಿಣಾನನಂ—ಝ.

ವರ್ಗಾದಿ ಪಂಚಮಂ ಚೈವ
ಷಷ್ಠಾನ್ತಂ[1] ಜೀವಸಂಯುತಮ್ ॥ ॥ ೧೨ ॥

ತೃತೀಯಸ್ವರಸಂಯುಕ್ತಂ
ಸೌಖ್ಯಂ ವೈ ಪಶ್ಚಿಮಾನನೇ[ನಾತ್][2]
ಅಕಾರಂ ಪಞ್ಚಮಂ ಚೈವ[3]
ಮಕಾರಂ[4] ತತ್ತ್ವಬೀಜಕಮ್ ॥ ॥ ೧೩ ॥

ಏಕಾದಶಕಲೋಪೇತಂ
ಸಾವಶ್ಯಂ[5] ಸೌಮ್ಯವಕ್ತ್ರಕೇ[ಕಾತ್]
ಆದಿಪ್ರಕೃತಿವರ್ಣಂ ಚ
ಪಂಚಮಂ ಚ[6] ಮಕಾರಕಮ್[7] ॥ ॥ ೧೪ ॥

ತ್ತದೆ. ಇದು ಸದಾಶಿವನ ದಕ್ಷಿಣಮುಖದಿಂದ ಆವಿರ್ಭವಿಸುತ್ತದೆ. ಅಕಾರವನ್ನೂ ಉಕಾರವನ್ನೂ ಹಕಾರ ಸಹಿತವಾದ ಮಕಾರವನ್ನೂ ಉದ್ಧರಿಸಿ,— ॥ ೧೨ ॥

—ಇಕಾರವನ್ನು ಸೇರಿಸಿದರೆ—ಅ, ಉ, ಮ, ಹ, ಇ ಎಂಬ ಸೌಖ್ಯಪ್ರಣವವಾಗುತ್ತದೆ. ಇದು ಸದಾಶಿವನ ಪಶ್ಚಿಮಮುಖದಿಂದ ಆವಿರ್ಭವಿಸುತ್ತದೆ. ಅಕಾರವನ್ನೂ ಉಕಾರವನ್ನೂ ಮಕಾರವನ್ನೂ ಹಕಾರವನ್ನೂ ಉದ್ಧರಿಸಿ ;— ॥ ೧೩ ॥

ಏಕಾರವನ್ನು ಸೇರಿಸಿದರೆ ಅ, ಉ, ಮ, ಹ, ಏ ಎಂಬ ಸಾವಶ್ಯ ಪ್ರಣವವಾಗುತ್ತದೆ. ಈ ಪ್ರಣವವು ಸದಾಶಿವನ ಉತ್ತರಮುಖದಿಂದ ಆವಿರ್ಭವಿಸುತ್ತದೆ. ಅಕಾರವನ್ನೂ ಉಕಾರವನ್ನೂ ಮಕಾರವನ್ನೂ ;— ॥ ೧೪ ॥

---

[1] ಮಕಾರೋ—ಝ.

[2] ಪಶ್ಚಿಮಾನನಂ—ಝ.

[3] ಪಞ್ಚಮಾನ್ತಂ ಚ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ದ, ಧ, ಪ.

[4] ವಕಾರಂ—ಧ.

[5] ಸಾವನ್ಯಂ—ಧ

[6] ಪಂಚಮೂನ್ತ—ದ, ಧ.
ಪಂಚಮೂನ್ತಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ಪ, ಫ.

[7] ಷಡಾತ್ಮಕಂ—ಕ.
ಷಡಂಗಕಂ—ಧ
ಷಡಾನ್ತಕಂ—ಛ
ಷಡನ್ತಕಂ—ಖ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ಪ, ಫ.

ಗುಹ್ಯಂ[1] ಚತುರ್ದಶೋಪೇತಂ
    ಸಾಯುಜ್ಯಂ ಚೋರ್ಧ್ವವಕ್ತ್ರಕೇ[ಕಾತ್] ।
ಸಾಕಲ್ಯಂ ರಕ್ತವರ್ಣಂ ಸ್ಯಾತ್
    ಛನ್ದೋಽನುಷ್ಟುಪ್ ಪ್ರಕೀರ್ತಿತಮ್[2] ॥ ॥ ೧೫ ॥

ಋಷಿಃ ಸನತ್ಕುಮಾರಸ್ತು
    ಪಾರ್ಥಿವಂ ಭೂತ[3]ಮುಚ್ಯತೇ[4] ।
ತತ್ತ್ವಂ ಕರ್ಮೇಶ್[5] ಇತ್ಯುಕ್ತಂ[6]
    ಈಶಾನಶ್ಚಾ[7]ಧಿದೈವತಮ್ ॥ ॥ ೧೬ ॥

[8]ಚತುರ್ಮಾತ್ರಾಸಮಾಯುಕ್ತಂ[9]
    ಸರ್ವಸಿದ್ಧಿಕರಂ ಪರಮ್ ।

ಹಕಾರವನ್ನೂ ಉದ್ಧರಿಸಿ, ಔಕಾರವನ್ನು ಸೇರಿಸಿದರೆ ಅ, ಉ, ಮ, ಹ, ಔ ಎಂಬ ಸಾಯುಜ್ಯಪ್ರಣವವಾಗುತ್ತದೆ. ಇದು ಸದಾಶಿವನ ಊರ್ಧ್ವಮುಖದಿಂದ ಆವಿರ್ಭವಿಸುತ್ತದೆ. ಸಾಕಲ್ಯ ಪ್ರಣವದ ಬಣ್ಣ ಕೆಂಪು. ಛಂದಸ್ಸು ಅನುಷ್ಟುಪ್ ॥ ೧೫ ॥

ಋಷಿಯು ಸನತ್ಕುಮಾರ, ಭೂತವು ಪೃಥಿವೀ, ತತ್ತ್ವವು ಕರ್ಮೇಶ, ಅಧಿದೇವತೆಯು ಈಶಾನ ॥ ೧೬ ॥

---

[1] ಗುಹ್ಯ—ತ

[2] ಪ್ರಕೀರ್ತಿತಃ—ಝ, ಠ, ಡ, ಢ, ಫ.

[3] ಬೀಜ—ಧ

[4] ಮೀರಿತಂ—ಝ.

[5] ಕರ್ಮೇಶಂ ತತ್ತ್ವಂ—ಪ
ತತ್ತ್ವಂ ಕರ್ಮೇಶಂ—ಕ, ಖ, ಗ, ಘ, ಚ, ಛ, ಜ, ಟ, ತ, ದ, ಧ

[6] ಇತ್ಯುಕ್ತಃ—ಢ.

[7] ಈಶಾನಂ ಚಾ—ಕ, ಖ, ಛ, ಜ, ಟ, ಠ, ಢ, ತ, ಥ, ದ, ಧ, ಪ.

[8] ಈ ಅರ್ಧಪದ್ಯ ಚ ಪುಸ್ತಕದಲ್ಲಿಲ್ಲ.

[9] ಮಾತ್ರಾಚತುರ್ಭುಜಸ್ಸಂಯುಕ್ತಂ—ಖ, ಘ, ಜ, ಟ, ದ, ಧ.
ಮಂತ್ರಂ ಚತುರ್ಭಿಸ್ಸಂಯುಕ್ತಂ—ಗ, ಚ.
ಮಾತ್ರಂ ಚತುರ್ಭಿಸ್ಸಂಯುಕ್ತಂ—ಠ, ಪ.
ಮಾತ್ರಾಂ ಚತುರ್ಭಿಸ್ಸಂಯುಕ್ತಂ—ಕ, ಢ.
ಮಾತ್ರಾಶ್ಚತುರ್ಭಿಸ್ಸಂಯುಕ್ತಂ—ತ, ಥ.

ಶಾಮ್ಭವಂ [1]ತ್ವಂಜನ[2]ಪ್ರಖ್ಯಂ
ತ್ರಿಷ್ಟುಪ್ ಛನ್ದಃ ಪ್ರಕೀರ್ತಿತಮ್ ॥ ॥ ೧೭ ॥

ಭಾರದ್ವಾಜ ಋಷಿಃ ಜ್ಞೇಯಃ[3]
ಸಲಿಲಂ ಭೂತಮುಚ್ಯತೇ[4] ।
ತತ್ತ್ವಂ ಕರ್ತೃ ಸಮಾಖ್ಯಾತಂ
ಈಶ್ವರಸ್ತ್ವ[5]ಧಿದೈವತಮ್ ॥. ॥ ೧೮ ॥

ಪಞ್ಚಮಾತ್ರಾ[6]ಸಮೋಪೇತಂ
ಸರ್ವಸಿದ್ಧಿ[7]ಪ್ರದಾಯಕಮ್ ।
ಸೌಖ್ಯಂ ಗೋಕ್ಷೀರವರ್ಣಂ ಸ್ಯಾತ್
ಬೃಹತೀ ಛನ್ದ ಈರಿತಮ್[8] ॥ ॥ ೧೯ ॥

ವಿಶ್ವಾಮಿತ್ರ ಋಷಿರ್ಜ್ಞೇಯಃ[9]
ತೇಜೋ ಭೂತಮಿತಿ ಸ್ಮೃತಮ್ ।

ಇದರ ಮಾತ್ರೆಗಳು ನಾಲ್ಕು. ಇದು ಸಕಲ ಇಷ್ಟಾರ್ಥಗಳನ್ನೂ ಕೊಡುತ್ತದೆ. ಶಾಂಭವ ಪ್ರಣವದ ಬಣ್ಣ ಕಪ್ಪು, ಛಂದಸ್ಸು ತ್ರಿಷ್ಟುಪ್. ॥ ೧೭ ॥

ಋಷಿಯು ಭಾರದ್ವಾಜ, ಭೂತವು ಅಪ್ಪು, ತತ್ತ್ವವು ಕರ್ತೃಸಾದಾಖ್ಯ, ಅಧಿದೇವತೆಯು ಈಶ್ವರ. ॥ ೧೮ ॥

ಇದರ ಮಾತ್ರೆಗಳು ಐದು. ಇದು ಸಮಸ್ತ ಇಷ್ಟಾರ್ಥಗಳನ್ನೂ ಕೊಡುತ್ತದೆ. ಸೌಖ್ಯಪ್ರಣವದ ಬಣ್ಣ ಬಿಳುಪು. ಛಂದಸ್ಸು ಬೃಹತೀ ॥ ೧೯ ॥

---

[1] ಶಾಮ್ಭವ—ಧ.
[2] ತ್ವಂಜನಂ—ತ.
[3] ಜ್ಞೇಯಂ—ಕ, ಘ
[4] ಮೀರಿತಂ—ಝ.
[5] ಈಶಾನಂ ತ್ವ—ಖ, ಚ, ಪ
[6] ಚತುರ್ಮಾತ್ರಾ—ಧ
[7] ಸರ್ವಸೌಖ್ಯ—ಧ
[8] ಛನ್ದೋ ಬೃಹತಿರುಚ್ಯತೇ—ಕ, ಘ, ಛ, ಟ, ತ, ದ, ಧ, ಪ.
ಛನ್ದೋ ಬೃಹತಿರಿಷ್ಯತೇ—ಖ, (ಪಾ) ಗ, ಚ, ಜ, ಟ, ಠ, ಢ, ಥ
[9] ಜ್ಞೇಯಂ—ಕ, ಧ.

ಸಮೂರ್ತಂ[1] ತತ್ತ್ವಮಿತ್ಯುಕ್ತಂ
ಬ್ರಹ್ಮಾ ತಸ್ಯಾಧಿದೈವತಮ್[2] ॥ ॥ ೨೦ ॥

ಚತುರ್ಮಾತ್ರಾ[3]ಸಮಾಯುಕ್ತಂ
ಸರ್ವಸಮ್ಪತ್ಕರಂ ಪರಮ್ ।
ಸಾವಶ್ಯಂ ಕುಙ್ಕುಮಾಭಂ[4] ಸ್ಯಾತ್
ಜಗತೀ ಛನ್ದ ಈರಿತಮ್[5] ॥ ॥ ೨೧ ॥

ಗೌತಮೋಽಸ್ಯ[6] ಋಷಿರ್ಜ್ಞೇಯಃ[7]
ಮಾರುತಂ[ತೋ] ಭೂತಮುಚ್ಯತೇ[8] ।

ಇದರ ಋಷಿಯು ವಿಶ್ವಾಮಿತ್ರ, ಭೂತವು ತೇಜಸ್ಸು, ತತ್ತ್ವವು ಮೂರ್ತ ಸಾದಾಖ್ಯ, ಅಧಿದೇವತೆಯು ಬ್ರಹ್ಮೇಶ ॥ ೨೦ ॥

ಇದರ ಮಾತ್ರೆಗಳು ನಾಲ್ಕು, ಇದು ಸಮಸ್ತ ಐಶ್ವರ್ಯದಾಯಕ, ಸಾವಶ್ಯ ಪ್ರಣವದ ಬಣ್ಣ ಕೆಂಪು, ಛಂದಸ್ಸು ಜಗತೀ,— ॥ ೨೧ ॥

ಋಷಿಯು ಗೌತಮ, ಭೂತವು ಮಾರುತ, ತತ್ತ್ವವು ಅಮೂರ್ತಸಾದಾಖ್ಯ, ಅಧಿದೇವತೆಯ ಈಶ ॥ ೨೨ ॥

---

[1] ಸಮೂರ್ತಿಂ—ಕ, ಜ.
ಸಮೂರ್ತಂ—ಚ, ಡ.
ಅಮೂರ್ತಂ—ಥ

[2] ತಸ್ಯಾಧಿದೈವತಂ ಬ್ರಹ್ಮಾ—ಢ.
ಬ್ರಹ್ಮಾತಸ್ಯಾಧಿದೇವತಾ—ಜ.
ಬ್ರಹ್ಮೇಶಸ್ತ್ವಧಿದೈವತಂ—ಧ.

[3] ಪಞ್ಚಮಾತ್ರ—ಧ.

[4] ಕುಂಕುಮಾಭಃ—ಧ.

[5] ಛನ್ದೋ ಜಗತಿರುಚ್ಯತೇ—ಕ, ಖ, (ಪಾ) ಗ, ಚ, ಜ, ಠ, ಢ, ಥ, ಧ, ಪ
ಜಗತೀ ಛನ್ದ ಈರಿತಃ—ಝ.

[6] ಗೌತಮೋ ಹಿ—ಠ
ಗೌತಮಶ್ಚ—ಥ
ಗೌತಮಸ್ತು—ದ

[7] ಜ್ಞೇಯಂ—ಕ

[8] ಮೀರಿತಂ—ಝ.

ಅಮೂರ್ತಂ[1] ತತ್ತ್ವಮಿತ್ಯುಕ್ತಂ
ಈಶಃ ತಸ್ಯಾ[2]ಧಿದೈವತಮ್ ॥ ॥ ೨೨ ॥

ಪಞ್ಚಮಾತ್ರಾಸಮೋಪೇತಂ
ಸರ್ವವಶ್ಯಕರಂ ಪರಮ್ ।
[3]ಸಾಯುಜ್ಯಂ ಸ್ಫಟಿಕಾಭಾಸಂ[4]
ಛನ್ದೋ ವೈ ಜಗತೀ ಸ್ಮೃತಮ್[5] ॥ ॥ ೨೩ ॥

ಅಗಸ್ತ್ಯೋಽಸ್ಯ[6] ಋಷಿರ್ಜ್ಞೇಯಃ
ವ್ಯೋಮ ಭೂತಮುದಾಹೃತಮ್[7] ।

ಮಾತ್ರೆಗಳು ಐದು, ಸರ್ವವಶೀಕರಣವು ಇದರ ಪರಮಪ್ರಯೋಜನ, ಸಾಯುಜ್ಯ ಪ್ರಣವದ ಬಣ್ಣ ಬಿಳುಪು. ಛಂದಸ್ಸು ಜಗತೀ. ॥ ೨೩ ॥

ಋಷಿಯು ಅಗಸ್ತ್ಯ, ಭೂತವು ಆಕಾಶ, ತತ್ತ್ವವು ಶಿವಸಾದಾಖ್ಯ, ಅಧಿದೇವತೆಯು ಸದಾಶಿವ. ॥ ೨೪ ॥

---

[1] ಅಮೂರ್ತಿಂ—ಕ

[2] ಈಶಸ್ತತ್ತ್ವ—ಥ, ದ
ಈಶತತ್ತ್ವ—ಘ, ಟ, ತ, ಥ

[3] ಇಲ್ಲಿಂದ "ಸರ್ವಭೀಷ್ಟಫಲಪ್ರದಂ"ವರೆಗೆ—ಕ, ಘ, ತ, ಥ. ಪುಸ್ತಕಗಳಲ್ಲಿಲ್ಲ. ಆದರೆ ಆ ಸ್ಥಾನದಲ್ಲಿ—ಖ ಪುಸ್ತಕದಲ್ಲಿ—
"ಸಾಯುಜ್ಯಂ ಶುದ್ಧಪೀತಂ ಸ್ಯಾತ್ ಗಾಯತ್ರೀ ಛನ್ದ ಉಚ್ಯತೇ ।
ನಾರದೋಽಸ್ಯ ಋಷಿರ್ಜ್ಞೇಯಃ ಆಕಾಶಂ ಭೂತಮುಚ್ಯತೇ ।
ಶಿವಸಾದಾಖ್ಯಮೇವೋಕ್ತಂ ಸದಾಶಿವೋಽಧಿದೈವತಂ ।
ಪಂಚಮಾತ್ರಾಸಮೋಪೇತಂ ಸರ್ವಕಾಮ್ಯಪ್ರದಂ ಮಹತ್ ॥
ಎಂಬ ಶ್ಲೋಕಗಳಿವೆ.

[4] ಭಂ ಸ್ಯಾತ್—ಝ.
ಕಪ್ರಜ್ಯಂ—ಥ
ಸ್ಫಾಟಿಕಾಭಾಸಂ—ಚ

[5] ಜಗತೀ ಛನ್ದ ಈರಿತಂ—ಕ, ಖ, ಘ, ಛ, ಝ, ಟ, ಡ, ಢ, ತ, ಥ, ಧ, ಫ.

[6] ಅಗಸ್ತ್ಯೋಽತ್ರ—ಗ, ಘ, ಚ, ಜ, ಝ, ಡ, ತ, ಥ, ದ, ಪ, ಫ.
ಕಶ್ಯಪೋಽಸ್ಯ—ಧ

[7] ಆಕಾಶಂ ಭೂತಮುಚ್ಯತೇ—ಧ

ಶಿವಾಖ್ಯಂ[1] ತತ್ತ್ವಮಿತ್ಯುಕ್ತಂ
ಅಧಿದೈವಂ[2] ಸದಾಶಿವಃ[3] ॥ ॥ ೨೪ ॥

ಪಞ್ಚಮಾತ್ರಾಸಮೋಪೇತಂ[4]
ಸರ್ವಾಭೀಷ್ಟಫಲಪ್ರದಮ್[5] ।
ಪ್ರಣವಃ[6] ಸರ್ವವರ್ಣಾನಾಂ
ಶಿವಬೀಜಮುದಾಹೃತಃ[7] ॥ ॥ ೨೫ ॥

ಬಿನ್ದುನಾದ ಪ್ರಕಾರೇಣ
ಪ್ರಣವಾಕೃತಿರುಚ್ಯತೇ[8] ।
ಸೃಷ್ಟಿ[ಷ್ಟ]ಸ್ಥಿತಿನಿಮಿತ್ತಾಯ
ಚೋಚ್ಚಾರಣ[9]ಮಥೋ[10]ಮುಖಮ್ ॥ ॥ ೨೬ ॥

ಮಾತ್ರೆಗಳು ಐದು. ಇದು ಸಮಸ್ತ ಇಷ್ಟಾರ್ಥಗಳನ್ನು ಕೊಡುತ್ತದೆ. ಪಂಚಪ್ರಣವ ಭೇದಗಳ ಸಮಸ್ತವರ್ಣಗಳಲ್ಲಿ ಶಿವಬೀಜವಾದ ಹಕಾರವೇ ಪ್ರಣವ. ॥ ೨೫ ॥

ಶಿವಶಕ್ತಿ ಪ್ರಕಾರದಿಂದ ಪ್ರಣವಾಕಾರವು ಆವಿರ್ಭವಿಸುತ್ತದೆ. ಸೃಷ್ಟವಾಗಿರುವುದರ ಸಂರಕ್ಷಣೆಗಾಗಿ ಮುಮುಕ್ಷುಗಳು ಹೃತ್ಪೂರ್ವಕವಾಗಿ ಪ್ರಣವವನ್ನು ಉಚ್ಚರಿಸಬೇಕು. ॥ ೨೬ ॥

---

[1] ಅಮೂರ್ತ—ಧ
ಸಾದಾಖ್ಯ—ಝ
[2] ಆಧಿದೈವಃ—ಛ, ಜ, ಟ, ಪ.
[3] ಸದಾಶಿವಂ—ಖ, ಘ, ಝ, ಠ, ಡ, ಢ, ತ, ಥ, ದ, ಫ.
[4] ಸಮಾಯುಕ್ತಂ—ಘ, ಝ, ಠ, ಡ, ಢ. ತ, ಥ, ಪ
[5] ಸಾಯುಜ್ಯಪದಮಾಪ್ನುಯಾತ್—ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ
[6] ಪ್ರಣವಂ—ಕ, ಗ, ಘ, ಚ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.
[7] ಮಿತಿ ಸ್ಮೃತಂ—ಝ.
ಮಿತಿ ಸ್ಮೃತಃ—ಖ
ಮುದಾಹೃತಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಫ.
[8] ಪ್ರಣವಾಕೃತಿಮುಚ್ಯತೇ—ಛ, ಠ, ಢ, ಧ.
ಪ್ರಣವಾಕೃತಿರೀರಿತಾ—ಝ.
[9] ಉಚ್ಚಾರಣ—ಝ.
[10] ಮಥೋ—ಚ.

ಸಾಕಲ್ಯಾದೀನಿ[ದ್ಯಾಶ್ಚ] ಪಂಚೈತೇ[1]
ಕ್ರಮೇಣ ಪರಿಕೀರ್ತಿತಾಃ[2] ।
[3]ಉಕ್ತಃ ಪ್ರಣವಭೇದಶ್ಚ[4]
ಬ್ರಹ್ಮಭೇದಮಥ[5] ಶೃಣು ॥ ॥ ೨೭ ॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಪ್ರಣವಭೇದೋ ನಾಮ ಷಷ್ಠಃ ಪಟಲಃ

ಸಾಕಲ್ಯಾದಿ ಪಂಚ ಪ್ರಣವಭೇದಗಳು ಕ್ರಮವಾಗಿ ನಿರೂಪಿತವಾದವು. ಹೀಗೆ ಪ್ರಣವಭೇದವನ್ನು ಹೇಳಿದ್ದಾಯಿತು. ಇನ್ನು ಬ್ರಹ್ಮಭೇದವನ್ನು ಹೇಳುವೆನು. ॥ ೨೭ ॥

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ ಸಂಹಿತಾಯಾಂ
ಪ್ರಣವಭೇದೋ ನಾಮ ಷಷ್ಠಃ ಪಟಲಃ

---

[1] ತಂ ಚೈತತ್— ಧ
ಪಂಚಾತ್ರ—ಝ

[2] ಕ್ರಮೇಣೈವ ಪ್ರಕೀರ್ತಿತಾಃ—ಕ

[3] ಈ ಅರ್ಧಪದ್ಯ—ಕ. ಪುಸ್ತಕದಲ್ಲಿಲ್ಲ.

[4] ಪ್ರಣವಭೇದಮಿದಂ ಪ್ರೋಕ್ತಂ—ಗ, ಘ, ಚ, ಜ, ಟ, ಠ, ಥ, ತ, ದ.
ಪ್ರಣಮುಭೇದಮಿದಂ ಪ್ರೋಕ್ತಂ—ಥ, ಪ.
ಪ್ರಣವಂ ಭೇದಮಿತ್ಯುಕ್ತಂ—ಫ.

[5] ಮಿದಂ—ಗ, ಚ, ಜ.
ಮತಃ—ಧ.

ಸಪ್ತಮ—ಬ್ರಹ್ಮಭೇದ ಪಟಲ

[1]ಯೇನೇದಂ[2] ಪರಯಾ ವಿಭಕ್ತ[3]ಮಖಿಲಂ
ಪಂಚಾಶದರ್ಣಂ[4] ಮಹಃ[5]
ಬ್ರಹ್ಮಾಖ್ಯಂ ನಿಜಭೂತಮೇತದಖಿಲಂ[6]
ವಿಶ್ವಾಧಿಕಂ[7] ರಾಜತೇ[8] ।
ಕ್ಷೇತ್ರಜ್ಞಾದಿಸಮಸ್ತವರ್ಣಜನಿತಂ
ವಾಗ್ಬ್ರಹ್ಮಶ್ರುತ್ಯಾದಿಕಂ[9]

ಪರಾಶಕ್ತಿಯು ಮೂಲಕ ತನ್ನ ತೇಜಸ್ಸನ್ನು ಐವತ್ತು ವರ್ಣಗಳನ್ನಾಗಿ ವಿಭಜಿಸಿದ, ಸ್ವಸ್ವರೂಪವಾದ ಮೂರ್ತ್ಯಾದಿ ಸಮಸ್ತ ಬ್ರಹ್ಮವನ್ನು ಬೆಳಗಿಸುವ, ಅಕಾರಾದಿ ಸಮಸ್ತ ವರ್ಣಗಳಿಂದ ಜನಿಸಿದ ವೇದಾದಿ ಸಮಸ್ತ ವಾಗ್ಬ್ರಹ್ಮವನ್ನು ಪ್ರಕಾಶಗೊಳಿಸುವ, ವಿಶ್ವದ ಸೃಷ್ಟಿ ಸ್ಥಿತಿ ಲಯಗಳಿಗೆ ಕರ್ತೃವಾದ ಪರಶಿವ ಬ್ರಹ್ಮವನ್ನು ವಂದಿಸುತ್ತೇನೆ. ॥ ೧ ॥

---

[1] ಈ ಪದ್ಯ—ಖ, ಝ. ಪುಸ್ತಕಗಳಲ್ಲಿಲ್ಲ.

[2] ಏವೇದಂ—ಢ.
ಪಲವೇದಂ—ಕ.

[3] ವಿಭಕ್ತಿ—ಘ, ಡ.

[4] ಪಞ್ಚಾಶದರ್ಥಂ—ಘ, ಛ, ಥ.
ಪಂಚಾಶದರ್ಥಂ—ಕ, ಟ, ತ, ದ.
ಪಂಚಾಶದರ್ಣಂ—ಗ, ಚ.

[5] ಮಹತ್—ಘ, ಛ, ಟ.
ಮಹಾತ್—ಕ, ಠ, ಢ, ತ, ಥ, ದ, ಪ.

[6] ನಿಜಯಾ ತದೇತದಮಿತಂ—ಕ, ಘ, ಛ, ಠ, ಢ, ಥ, ದ, ಪ
ನಿಜಯಾ ತದೇದಮಿತಂ—ಟ
ನಿಭೂತದೇತದಮಿತಂ—ಜ
ನಿಜಯಾತ್ಮಾದಿತದಮಿತಂ—ತ

[7] ವಿದ್ಯಾದಿಕಂ—ಘ, ಛ, ತ, ಪ.
ವಿದ್ಯಾಧಿಕಂ—ಕ, ಟ, ಠ, ಢ. ತ, ಥ, ದ.

[8] ಭ್ರಾಜತೇ—ಕ, ಘ, ಛ. ಟ, ಠ, ಢ, ತ, ಥ, ದ.

[9] ಶ್ರುತ್ಯಾಧಿಕಂ—ಗ, ಘ, ಚ, ಛ, ಟ, ಢ, ದ, ಪ.

ವಿಶ್ವೋತ್ಪತ್ತಿ ವಿನಾಶಸಂಸ್ಥಿತಿಕೃತೇ[1]
ತಸ್ಮೈ ನಮೋ ಬ್ರಹ್ಮಣೇ ॥ ॥ ೧ ॥

ಅಥ ವಕ್ಷ್ಯೇ ವಿಶೇಷೇಣ
ಬ್ರಹ್ಮಭೇದವಿಧಿಂ ಪರಮ್ ।
ಬೃಹತ್ವಾತ್[2] ಬೃಂಹಣತ್ವಾಚ್ಚ[3]
ಬ್ರಹ್ಮೇತಿ ಪರಿಕೀರ್ತಿತಮ್[4] ॥ ॥ ೨ ॥

ಬ್ರಹ್ಮತತ್ತ್ವಮಿತಿ ಜ್ಞೇಯಂ[5]
ಭವೇತ್ ತದ್ಬ್ರಹ್ಮ ಪಂಚಧಾ[6]
ಪಂಚಬ್ರಹ್ಮಪ್ರಕಾರೇಣ
ಪಂಚವಿಂಶತಿ ಭೇದಕಮ್[7] ॥ ॥ ೩ ॥

ಇನ್ನು ಬ್ರಹ್ಮಭೇದಗಳನ್ನು ವಿಶೇಷವಾಗಿ ಹೇಳುವೆನು. ಮಹತ್ತ್ವದಿಂದಲೂ ಕಲಾಪರಿಪೂರ್ಣತೆಯಿಂದಲೂ ಇದು ಬ್ರಹ್ಮವೆನಿಸುತ್ತದೆ. ॥ ೨ ॥

ಈ ಬ್ರಹ್ಮವು ಐದು ವಿಧ. ಇವುಗಳಲ್ಲಿ ಒಂದೊಂದು ಬ್ರಹ್ಮವೂ ಐದು ವಿಧ. ಹೀಗೆ ಒಟ್ಟು ಇಪ್ಪತ್ತೈದು ಬ್ರಹ್ಮವಿಧಗಳು. ॥ ೩ ॥

---

[1] ಶ್ರುತೇ—ಕ

[2] ಬ್ರಹ್ಮತ್ವಾತ್—ಪ.

[3] ಬ್ರಾಹ್ಮಣತ್ವಾಚ್ಚ—ಪ.
ಬ್ರಹ್ಮಣತ್ವಾಚ್ಚ—ಘ, ಢ, ತ, ದ.

[4] ಬ್ರಹ್ಮಮಿತ್ಯಭಿಧೀಯತೇ—ಗ.
ಬ್ರಹ್ಮ ಇತ್ಯಭಿಧೀಯತೇ—ಖ, (ಪಾ) ಧ.

[5] ಬ್ರಹ್ಮತ್ವಮಿತಿ ವಿಜ್ಞೇಯಂ—ಗ, ಚ, ಛ, ಜ, ಝ, ಡ, ಢ, ತ, ದ ಪುಸ್ತಕಗಳನ್ನು ಬಿಟ್ಟು ಇತರ ಪುಸ್ತಕಗಳಲ್ಲಿ.

[6] ತದ್ ಬ್ರಹ್ಮ ಪಂಚಧಾ ಭವೇತ್—ಖ, ಫ.
ತದ್ ಬ್ರಹ್ಮಂ ಪಂಚಧಾ ಭವೇತ್ --ಕ, ಛ, ಜ, ಟ, ಠ, ಢ, ಥ, ದ, ಧ, ಪ.

[7] ಭೇದಕಃ—ಖ, ಝ.

ಏಭಿರ್ಭೇದೈರ್ಯುತಂ[1] ಪಞ್ಚ-
ವಿಂಶತಿ ಸ್ತತ್ತ್ವಸಂಯುತಮ್[2] ।
ಇತ್ಯೇತತ್ಪಂಚಭೇದತ್ವಾತ್
ಬ್ರಹ್ಮಪಞ್ಚಕಮೀರಿತಮ್[3] ॥ ॥ ೪ ॥

ಮೂರ್ತಿಬ್ರಹ್ಮ[4] ತಥಾ ಪೂರ್ವಂ[5]
ತತ್ತ್ವಬ್ರಹ್ಮ[6] ದ್ವಿತೀಯಕಮ್ ।
ಭೂತಬ್ರಹ್ಮ[7] ತೃತೀಯಂ ಸ್ಯಾತ್
ಪಿಂಡಬ್ರಹ್ಮ[8] ಚತುರ್ಥಕಮ್ ॥ ॥ ೫ ॥

ಪಂಚಮಂ ಚ ಕಲಾಬ್ರಹ್ಮ[9]
ಬ್ರಹ್ಮಪಂಚಕಮೀರಿತಮ್[10] ।

ಸಕಲ ತತ್ತ್ವಗಳಿಂದ ಕೂಡಿದ ಬ್ರಹ್ಮವು ಈ ಭೇದಗಳಿಂದ ಇಪ್ಪತ್ತೈದು ವಿಧ. ನಿಷ್ಕಲ ಶಿವತತ್ತ್ವವಾದ ಆ ಬ್ರಹ್ಮವು ಸಕಲ ತತ್ತ್ವದಿಂದ ಭೇದಗೊಂಡು ಪಂಚ ಬ್ರಹ್ಮವೆನಿಸುತ್ತದೆ. ॥ ೪ ॥

ಮೂರ್ತಿಬ್ರಹ್ಮವು ಒಂದನೆಯದು. ತತ್ತ್ವಬ್ರಹ್ಮವು ಎರಡನೆಯದು. ಭೂತ ಬ್ರಹ್ಮವು ಮೂರನೆಯದು. ಪಿಣ್ಡಬ್ರಹ್ಮವು ನಾಲ್ಕನೆಯದು. ॥ ೫ ॥

---

[1] ಯುಕ್ತಂ—ಘ.
[2] ಪಂಚವಿಂಶತ್ತತ್ತ್ವ ಸಂಯುತಂ—ಪ
ಪಂಚವಿಂಶತಿ ತತ್ತ್ವಸಂಯುತಂ—ಕ, ಘ, ಛ, ಟ, ಢ, ಜ, ದ, ಧ.
[3] ಪಂಚಬ್ರಹ್ಮ ಉದಾಹೃತಂ—ಖ, (ಪಾ) ಧ.
ಪಂಚಬ್ರಹ್ಮಮುದಾಹೃತಂ—ಘ, ಛ, ಜ, ಟ, ಠ, ಢ, ತ, ಥ, ದ.
[4] ಬ್ರಹ್ಮಂ—ಘ, ಛ, ಜ, ಟ, ಠ, ಢ, ತ, ಥ, ದ.
[5] ಭವೇತ್ ಪೂರ್ವಂ—ಖ, ಝ.
[6] ಬ್ರಹ್ಮಂ—ಕ, ಧ, ಘ, ಜ, ಥ.
[7] ಭೂತ ಬ್ರಹ್ಮಂ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಪ.
ಭೂತಿಬ್ರಹ್ಮ—ಝ.
[8] ಪಿಂಡಂ ಬ್ರಹ್ಮ
[9] ಪಂಚ ಪಂಚ ಕಲಾ ಬ್ರಹ್ಮ—ಝ.
ಪಂಚಮಂ ತು ಕಲಾಬ್ರಹ್ಮಂ—ಖ, ಘ, ಛ, ಠ, ತ, ಥ, ಪ
ಪಂಚಮಂ ತು ಕಲಾಬ್ರಹ್ಮ—ಖ, ಟ, ಢ, ದ, ಧ.
ಪಂಚಮಂತು ಕಲಾಪ್ರೋಕ್ತಂ—ಗ.
[10] ಪಂಚಮಂ ಚ ಮುದಾಹೃತಂ—ಛ, ತ.
ಪಂಚಬ್ರಹ್ಮ ಉದಾಹೃತಂ—ಗ

ಪಂಚಾನಾಂ ಬ್ರಹ್ಮಣಾಮೇಷಾಂ[1]
ಲಕ್ಷಣಂ[2] ವಕ್ಷ್ಯತೇಽಧುನಾ ॥ ॥ ೬ ॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ
ಮೂರ್ತಯಃ[3] ಪ್ರಣವಾಧಿಪಾಃ
ತಸ್ಮಾತ್[4] ಪ್ರಣವ ರೂಪಂ ತು
ಮೂರ್ತಿರೂಪಮುದಾಹೃತಮ್ ॥ ॥ ೭ ॥

ಸಾಕಲ್ಯಾದಿಸ್ತು[ತು] ಯತ್ಪಂಚ
ಮೂರ್ತಿಬ್ರಹ್ಮ ತದುಚ್ಯತೇ[5] ।
ಏತೇಷಾಂ ಚೈವ ತತ್ತ್ವಾನಾಂ[6]
ಶಿವತತ್ತ್ವಂ ಪ್ರಭುಃ ಸ್ಮೃತಮ್ ॥ ॥ ೮ ॥

ಕಲಾಬ್ರಹ್ಮವು ಐದನೆಯದು ಈಗ ಪಂಚಬ್ರಹ್ಮಗಳ ಸ್ವರೂಪವನ್ನು ಹೇಳುವೆನು. ॥ ೬ ॥

ಬ್ರಹ್ಮಾ ವಿಷ್ಣು ರುದ್ರರು ಪ್ರಣವದ ಅಧಿದೇವತೆಗಳು. ಆದುದರಿಂದ ಪ್ರಣವವು ಮೂರ್ತಿಬ್ರಹ್ಮ ॥ ೭ ॥

ಸಾಕಲ್ಯಾದಿ ಪಂಚಪ್ರಣವ ಸ್ವರೂಪವೇ ಮೂರ್ತಿ ಬ್ರಹ್ಮ, ಪ್ರಣವದಲ್ಲಿರುವ ಅಕಾರ ಉಕಾರ ಮಕಾರಗಳಿಗೆ ಶಿವಬೀಜವಾದ ಹಕಾರವೇ ಪ್ರಭು. ॥ ೮ ॥

---

[1] ಏತೇಷಾಂ ಬ್ರಹ್ಮಪಂಚಾನಂ—ಕ. ಜ.
ಏತೇಷಾಂ ಬ್ರಹ್ಮ ಪಂಚಾನಾಂ—ಗ, ಘ, ಜ, ಝ, ಟ, ಠ, ಡ, ಢ, ತ, ಥ, ದ, ಧ.

[2] ಲಕ್ಷಣೇ—ತ

[3] ತ್ರಿಮೂರ್ತಿಃ—ಜ, ಧ.
ತ್ರಿಮೂರ್ತಿ—ಕ, ಖ, ಘ, ಝ, ಟ, ಠ, ಢ, ತ, ದ, ಪ

[4] ಏತತ್—ಖ, ಝ.

[5] ಮೂರ್ತಿಬ್ರಹ್ಮಂ ತದುಚ್ಯತೇ—ಕ, ಘ, ಝ, ಟ, ಠ, ತ, ಥ.
ಮೂರ್ತಿ ಬ್ರಹ್ಮೇತಿ ಕೀರ್ತಿತಂ—ಗ

[6] ಏತೇಷಾಂ ತತ್ತ್ವಭೇದಾನಾಂ—ಝ.

ಏತ ಚ್ಛಿವಮಯಂ[1] ಬೀಜಂ
ಶಿವಾರ್ಣಂ ಚೇತಿ ಕೀರ್ತಿತಮ್ ।
ತಸ್ಮಾತ್ ಶುದ್ಧಾದಿ ಚಾತ್ಮಾನ್ತಂ[2]
ತತ್ತ್ವಬ್ರಹ್ಮ ಪ್ರಕೀರ್ತಿತಮ್ ॥ ॥ ೯ ॥

ಪ್ರಥಮಂ ಮಾಂಸಬೀಜಂ ಸ್ಯಾತ್
ದ್ವಿತೀಯಂ ಮೇದಸೋ[3] ಭವೇತ್ ।
ತೃತೀಯಂ ಷಷ್ಠಬೀಜಂ[4] ಸ್ಯಾತ್[5]
ಚತುರ್ಥಂ ಸಪ್ತಮಂ ತಥಾ[6] ॥ ॥ ೧೦ ॥

ಪಂಚಮಂ ಪಂಚಮಂ ವಿದ್ಯಾತ್[7]
ಪಾಂಚ[8]ಭೌತಿಕಮುಚ್ಯತೇ ।

ಈ ಶಿವಸ್ವರೂಪವಾದ ಹಕಾರವು ಶಿವಬೀಜವೆನಿಸುತ್ತದೆ. ಶುದ್ಧಪ್ರಾಸಾದ ಮೊದಲ್ಗೊಂಡು ಆತ್ಮಪ್ರಾಸಾದವರೆಗಿನ ಪಂಚಪ್ರಾಸಾದಸ್ವರೂಪವು ತತ್ತ್ವಬ್ರಹ್ಮ. ॥ ೯ ॥

ಮಾಂಸಬೀಜವಾದ ಲಕಾರವು ಪ್ರಥಮ ಭೂತಬೀಜ. ಮೇದೋಬೀಜವಾದ ವಕಾರವು ದ್ವಿತೀಯ ಭೂತಬೀಜ, ಷಷ್ಠವೆಂಬ ರೇಫವು ತೃತೀಯ ಭೂತಬೀಜ. ಸಪ್ತಮವೆಂಬ ಯಕಾರವು ಚತುರ್ಥ ಭೂತಬೀಜ. ॥ ೧೦ ॥

ಪಂಚಮವೆಂಬ ಹಕಾರವು ಪಂಚಮಭೂತಬೀಜ. ಇವು ಪಂಚಭೂತ ಬೀಜ

---

[1] ಏವಂ ಶಿವಮಯಂ—ಘ.
ಏತೇ ಚೈವ ಮತಂ—ತ

[2] ಚಾತ್ಮಾನಂ—ಗ, ಚ.

[3] ಮೇಧಸೋ—ಢ.

[4] ಷಷ್ಠಭೇದಂ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ
ಷಷ್ಠಭೇದಃ—ಖ, (ಪಾ)

[5] ತು—ಕ, ಖ, (ಪಾ) ಘ, ಛ. ಜ, ಟ, ಠ, ಢ, ತ, ಥ, ದ, ಧ, ಪ.

[6] ತದಾ—ತ.
ತತಃ---ಝ.

[7] ವಿಂದ್ಯಾತ್—ಕ, ಖ, ಟ, ಠ, ಢ, ತ, ಥ, ದ, ಧ.

[8] ಪಂಚ—ಕ, ಛ, ಟ, ಠ, ಢ, ಥ, ದ.

[1]ಮಾಂಸಂ ವೈ ಪಾರ್ಥಿವಂ ಬೀಜಂ
ಮೇದಸೋ[2] ಹ್ಯಾಪ[3] ಉಚ್ಯತೇ[4] ॥ ॥ ೧೧ ॥

ಷಷ್ಠಂ[5] ತೇಜೋ ವಿನಿರ್ದಿಷ್ಟಂ[6]
ಸಪ್ತಮಂ ಮಾರುತಾತ್ಮಕಮ್ ।
ಪಂಚಮಂ ವ್ಯೋಮಬೀಜಂ ಸ್ಯಾತ್
ಭೂತಬ್ರಹ್ಮೇತಿ ಕೀರ್ತಿತಮ್[7] ॥ ॥ ೧೨ ॥

ಸಪ್ತಕೇ ಪ್ರಕೃತೌ ವರ್ಣೇ[8]
ತುರೀಯಂ[9] ಪಂಚಮಂ[10] ತ್ಯಜೇತ್[11]

ಗಳು, ಮಾಂಸಬೀಜವಾದ ಲಕಾರವು ಪೃಥಿವೀಬೀಜ, ಮೇದೋಬೀಜವಾದ ವಕಾರವು ಅಬ್ಬೀಜ. ॥ ೧೧ ॥

ಷಷ್ಠಬೀಜವಾದ ರೇಫವು ತೇಜೋಬೀಜ, ಸಪ್ತಮಬೀಜವಾದ ಯಕಾರವು ವಾಯುಬೀಜ, ಪಂಚಮಬೀಜವಾದ ಹಕಾರವು ವ್ಯೋಮಬೀಜ. ಇವು ಭೂತಬ್ರಹ್ಮ. ॥ ೧೨ ॥

---

[1] ‘ಮಾಸಂ ವೈ’ ಇಲ್ಲಿಂದ “ಭೂತಬ್ರಹ್ಮೇತಿ ಕೀರ್ತಿತಂ”ವರೆಗೆ ಗ್ರಂಥಾಂತರದ ಉದ್ಧಾರವಾಗಿ ತಿಳಿಸಿದೆ—ಖ.

[2] ಮೇದಸಾ - ಢ.

[3] ಹ್ಯಾಪಂ—ಕ, ಘ, ಟ. ರೂಪಂ—ಝ.

[4] ಈರಿತಂ—ಝ.

[5] ಷಷ್ಠ—ಕ.

[6] ವಿನಿರ್ದೇಷ್ಟಂ—ತ

[7] ಬ್ರಹ್ಮ ಪ್ರಕೀರ್ತಿತಂ—ಖ (ಪಾ)
ಬ್ರಹ್ಮಂ ಪ್ರಕೀರ್ತಿತಂ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಪ.

[8] ಸಪ್ತತೇ ಪ್ರಕೃತಾ ವರ್ಣೇ—ದ, ಪ.
ಸಪ್ತ ಪ್ರಕೃತಿವರ್ಣೇ—ಖ (ಪಾ)
ಸಪ್ತಪ್ರಕೃತಿ ವರ್ಣೇ ತು—ಝ. (ಪಾ)

[9] ಚತುರ್ಥಂ—ಜ, ಪ. ತುರ್ಯಂ—ಘ, ಟ, ಠ, ತ, ದ.
ತುರ್ಯಂ ವೈ—ಥ. ತೂರ್ಯ—ಢ.

[10] ಪಂಚಕಂ—ಕ, ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ, ಪ

[11] ನ್ಯಸೇತ್—ಝ

ಶೇಷೇಷು ಪಂಚವರ್ಣೇಷು
ಪಂಚಮಂ ಸಹ ಯೋಜಯೇತ್[1] ॥ ॥ ೧೩ ॥

ಬಿನ್ದುನಾದಸಮಾಯುಕ್ತಂ
ಪಞ್ಚಾರ್ಣಾನಾಮನುಕ್ರಮಾತ್[2] ।
[3]ಪ್ರಕೃತಿಸ್[4]ವರಸಂಯುಕ್ತಂ
ಹಕಾರೇಷು ಅ[ಹ್ಯ]ನುಕ್ರಮಾತ್ ॥ ॥ ೧೪ ॥

[5]ತೇಷಾಂ ನಾಮಾನಿ ವಕ್ಷ್ಯಾಮಿ
ಸಮಾಸಾತ್ ಶೃಣು ಷಣ್ಮುಖ ।

ಸಪ್ತಪ್ರಕೃತಿಸ್ವರಗಳಲ್ಲಿ ನಾಲ್ಕನೆಯ ಋಕಾರವನ್ನೂ, ಐದನೆಯ ಲೃಕಾರವನ್ನೂ ಬಿಟ್ಟು ಉಳಿದ ಐದು ವರ್ಣಗಳಲ್ಲಿ ಒಂದೊಂದಕ್ಕೂ ಹಕಾರವನ್ನು ಸೇರಿಸಬೇಕು. ॥ ೧೩ ॥

ಪೂರ್ವೋಕ್ತ ಪಂಚವರ್ಣಗಳಲ್ಲಿ ಒಂದೊಂದಕ್ಕೂ ಅನುಸ್ವಾರವನ್ನು ಸೇರಿಸಬೇಕು. ಪಂಚ ಹಕಾರಗಳಲ್ಲಿ ಒಂದೊಂದಕ್ಕೂ ಕ್ರಮವಾಗಿ ಪ್ರಕೃತಿಸ್ವರವನ್ನು ಸೇರಿಸಬೇಕು. ಹೀಗೆ ಸೇರಿಸಿದರೆ ರೇಫರಹಿತವಾದ ಹಂ ಹಿಂ ಹುಂ ಹೇಂ ಹೋಂ ಎಂಬ ಪಂಚತಾಂತ್ರಿಕ ಪಿಂಡ ಬ್ರಹ್ಮಬೀಜಗಳಾಗುತ್ತವೆ. ರೇಫವನ್ನು ಸೇರಿಸಿದರೆ—ಹ್ರಂ ಹ್ರಿಂ ಹ್ರುಂ ಹ್ರೇಂ ಹ್ರೋಂ ಎಂಬ ಪಂಚವೈದಿಕ ಪಿಂಡಬ್ರಹ್ಮಬೀಜಗಳಾಗುತ್ತವೆ. ॥ ೧೪ ॥

ಎಲೈ ಷಣ್ಮುಖನೇ! ಇನ್ನು ಆ ಪಿಂಡಬ್ರಹ್ಮಗಳ ಹೆಸರನ್ನು ಹೇಳುವೆನು. ಸದ್ಯೋಜಾತ ಮುಖವು ಮೊದಲನೆಯದು. ವಾಮದೇವಮುಖವು ಎರಡನೆಯದು. ॥ ೧೫ ॥

---

[1] ಪಂಚಮಂ ಚ ಪ್ರಯೋಜಯೇತ್—ಖ, ಝ.

[2] ಪಂಚವರ್ಣೇಷ್ವನುಕ್ರಮಾತ್—ಕ, ಖ, ಘ, ಜ, ಟ, ಠ, ಢ, ತ, ಥ, ದ, ಧ. ಪ. ಪಂಚವರ್ಣೋಽಪನುಕ್ರಮಾತ್—ಛ.

[3] ಈ ಅರ್ಧಪದ್ಯ—ಕ, ಖ, ಘ, ಛ, ಝ, ಟ, ತ, ಢ, ತ, ಥ. ದ, ಧ, ಪ ಪುಸ್ತಕಗಳಲ್ಲಿಲ್ಲ.

[4] ಪ್ರಕೃತ—ಜ

[5] ಈ ಅರ್ಧಪದ್ಯ—ಕ, ಘ, ಛ, ಜ, ಟ, ಠ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.

ಸದ್ಯೋಜಾತಂ ತಥಾ[1]ಪೂರ್ವಂ
ವಾಮದೇವಂ ದ್ವಿತೀಯಕಮ್ ॥ ॥ ೧೫ ॥

ಅಘೋರಂ ತು[2] ತೃತೀಯಂ ಚ[3]
ಚತುರ್ಥಂ ಪುರುಷಂ ತಥಾ[4] ।
ಈಶಾನಂ ಪಂಚಮಂ ವಿದ್ಯಾತ್[5]
ಏವಮಾಖ್ಯಾಃ ಪ್ರಕೀರ್ತಿತಾಃ[6] ॥ ॥ ೧೬ ॥

ಪ್ರಣವಾದಿ ಚತುರ್ಥ್ಯನ್ತ[7]
ಸನಾಮಪದಮಧ್ಯಗಾಃ[8] ।

ಅಘೋರಮುಖವು ಮೂರನೆಯದು. ತತ್ಪುರುಷಮುಖವು ನಾಲ್ಕನೆಯದು. ಈಶಾನಮುಖವು ಐದನೆಯದು. ॥ ೧೬ ॥

ಪ್ರಣವ, ಪಿಂಡಬ್ರಹ್ಮಬೀಜ, ಚತುರ್ಥ್ಯಂತವಾದ ಸದ್ಯೋಜಾತಾದಿ ನಾಮ, ನಮಃಪದಗಳನ್ನು ಕ್ರಮವಾಗಿ ಸೇರಿಸಿದರೆ ಐದು ಪಿಂಡಬ್ರಹ್ಮಮಂತ್ರಗಳ ಉದ್ಧಾರವಾಗುತ್ತದೆ. ಆ ಮಂತ್ರಗಳು ಇವು :—

“ಓಂ ಹಂ ಸದ್ಯೋಜಾತಾಯ ನಮಃ, ಓಂ ಹಿಂ ವಾಮದೇವಾಯ ನಮಃ, ಓಂ ಹುಂ ಅಘೋರಾಯ ನಮಃ, ಓಂ ಹೇಂ ತತ್ಪುರುಷಾಯ ನಮಃ, ಓಂ ಹೋಂ ಈಶಾಯ ನಮಃ

ವೈದಿಕ ಪಿಂಡಬ್ರಹ್ಮಮಂತ್ರಗಳು—ಓಂ ಹ್ರಂ ಸದ್ಯೋಜಾತಾಯ ನಮಃ,

---

[1] ತದಾ – ತ.

[2] ಚ – ಖ.

[3] ಸ್ಯಾತ್—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ.

[4] ತತ್ಪುರುಷಂ ಹಿ ವೈ—ಕ, ಛ, ಟ, ಠ, ಢ, ತ, ಥ, ದ, ಧ, ಪ
ಪುರುಷಂ ವೈ ಹಿ—ಘ. ಭವೇತ್—ಗ, ಚ.

[5] ವಿಂದ್ಯಾತ್—ಕ, ಘ, ಛ, ಟ, ಠ, ಢ, ತ, ಥ, ದ, ಧ.

[6] ಪಂಚನಾಮಾನಿ ಚೋಚ್ಯತೇ—ಗ, ಚ.

[7] ರ್ಥ್ಯಂತಂ—ಗ, ಚ.

[8] ಮಧ್ಯಗಂ—ಗ, ಚ.

ನಮಸ್ಕಾರಾಂತ ಸಂಯುಕ್ತಾನ್[1]
    ಸದ್ಯಾದೀನ್ ಯೋಜಯೇತ್[2] ಕ್ರಮಾತ್ ॥ ॥ ೧೭ ॥

ಶಿವಾರ್ಣೇ ಜೀವವರ್ಣಾನಾಂ[3]
    ಸಂಯೋಗಾತ್ ಪಿಣ್ಡಮುಚ್ಯತೇ !
ಕರ್ಮೇಶಃ[4] ಪಿಣ್ಡರೂಪತ್ವಾತ್
    ಪಿಣ್ಡಬ್ರಹ್ಮೇತಿ ಕೀರ್ತಿತಂ[ಃ][5] ॥ ॥ ೧೮ ॥

ಈಶಾನಃ[6] ಪುರುಷ[7]ಶ್ಚೈವಂ[8]
    ಅಘೋರೋ[9] ವಾಮದೇವಕಃ[10] ।

ಓಂ ಹ್ರಿಂ ವಾಮದೇವಾಯ ನಮಃ, ಓಂ ಹ್ರುಂ ಅಘೋರಾಯ ನಮಃ, ಓಂ ಹ್ರೇಂ ತತ್ಪುರುಷಾಯ ನಮಃ, ಓಂ ಹ್ರೋಂ ಈಶಾನಾಯ ನಮಃ ॥ ೧೭ ॥

ಶಿವಬೀಜವಾದ ಹಕಾರದಲ್ಲಿ ಅಕಾರಾದಿ ಪಂಚ ಜೀವಸ್ವರಗಳ ಸಂಬಂಧದಿಂದ ಪಿಂಡವಾಗುತ್ತದೆ. ಪಿಂಡಸ್ವರೂಪವಾದ್ದರಿಂದ ಕರ್ಮೇಶನು ಪಿಂಡಬ್ರಹ್ಮ. ॥ ೧೮ ॥

(ಕಲಾಬ್ರಹ್ಮ :—) ಈಶಾನ, ತತ್ಪುರುಷ, ಅಘೋರ ವಾಮದೇವ, ಸದ್ಯೋಜಾತ ಈ ಐದು ತತ್ತ್ವಸ್ವರೂಪಗಳೇ ಕಲಾಬ್ರಹ್ಮ. ॥ ೧೯ ॥

---

[1] ಸಂಯುಕ್ತಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ

[2] ಪೂಜಯೇತ್—ತ.

[3] ಜೀವವರ್ಣಾನಿ—ಕ, ಘ, ಛ, ಠ, ಢ, ತ, ಥ, ದ, ಧ, ಪ.
ಶಿವವರ್ಣಾನಿ—ಟ.
ಶಿವವರ್ಣಾನಾಂ ಗ, ಚ.

[4] ಕರ್ಮೇಶಾತ್—ಕ.
ಕರ್ಮೇಶಂ—ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ.

[5] ಬ್ರಹ್ಮ ಉದಾಹೃತಂ—ಖ, (ಪಾ) ಧ.
ಬ್ರಹ್ಮಮುದಾಹೃತಂ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ.

[6] ಈಶಾನಂ—ಕ, ಗ, ಘ, ಚ, ಛ, ಜ, ಟ, ಠ, ಢ, ತ, ಥ, ದ, ಧ, ಪ.

[7] ಪುರುಷಂ—ಕ, ಗ, ಘ, ಚ, ಛ, ಜ, ಟ, ಠ, ಢ, ತ, ಥ, ದ, ಧ, ಪ.

[8] ಚೈವ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ.

[9] ಅಘೋರಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ.

[10] ವಾಮದೇವಕಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ.

ಸದ್ಯೋಜಾತಶ್ಚ[1] ಪಂಚೈತೇ
ಕಲಾಬ್ರಹ್ಮ ಪ್ರಕೀರ್ತಿತಾಃ[2] ॥ ॥ ೧೯ ॥

ಈಶಾನಸ್ಯ[3] ಕಲಾಃ ಪಞ್ಚ
ಪುರುಷಸ್ಯ ಚತುಷ್ಕಲಾಃ[4] ।
ಅಘೋರಸ್ಯ ಕಲಾಶ್ಚಾಷ್ಟೌ[5]
ವಾಮದೇವೇ[6] ತ್ರಯೋದಶ[7] ॥ ॥ ೨೦ ॥

ಸದ್ಯಸ್ಯಾಷ್ಟಕಲಾ ಜ್ಞೇಯಾ[8]
ಅಷ್ಟತ್ರಿಂಶತ್ ಕಲಾಃ ಸ್ಮೃತಾಃ[9] ।

ಈಶಾನದಲ್ಲಿ ಐದು ಕಲೆಗಳೂ, ತತ್ಪುರುಷದಲ್ಲಿ ನಾಲ್ಕುಕಲೆಗಳೂ, ಅಘೋರದಲ್ಲಿ ಎಂಟು ಕಲೆಗಳೂ ವಾಮದೇವದಲ್ಲಿ ಹದಿಮೂರು ಕಲೆಗಳೂ— ॥ ೨೦ ॥

ಸದ್ಯೋಜಾತದಲ್ಲಿ ಎಂಟು ಕಲೆಗಳೂ, ಹೀಗೆ ಮೂವತ್ತೆಂಟು ಕಲೆಗಳಿವೆ.

---

[1] ಸದ್ಯೋಜಾತಂ ಚ—ಕ. ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ.

[2] ಬ್ರಹ್ಮ ಪ್ರಕೀರ್ತಿತಂ—ಛ, ಠ, ಧ.
ಬ್ರಹ್ಮಂ ಪ್ರಕೀರ್ತಿತಂ—ಕ, ಘ, ಠ, ಢ, ತ. ಥ. ದ, ಪ.
ಬ್ರಹ್ಮಮುದಾಹೃತಂ—ಗ, ಚ.

[3] ಈಶಾನಸ್ಸ್ಯಾತ್—ಕ.

[4] ಚತುಃ ಕಲಾಃ—ಛ.
ಚತುಕಲಾ—ಕ, ಘ, ಟ, ಠ, ಢ, ತ, ಥ, ದ.

[5] ಕಲಾಚಾಷ್ಟಂ—ಛ.
ಕಲಾಶ್ಚಾಷ್ಟಾ—ಕ ಟ, ಠ, ಢ.
ಕಲಾ ಚಾಷ್ಟಾ—ಜ, ಠ, ತ.

[6] ವಾಮದೇವಾಃ—ಧ.
ವಾಮದೇವ—ಕ, ಘ, ಛ, ಟ, ಡ, ಢ, ತ, ಥ, ದ, ಪ.
ವಾಮದೇವಃ— ಜ.

[7] ತ್ರಯೋದಶಂ—ಢ, ದ.

[8] ಸದ್ಯೋಜಾತಕಲಾಶ್ಚಾಷ್ಟಾ—ಪ.
ಸದಶಾಷ್ಟಕಲಾಜ್ಞೇಯಃ – ಛ.
ಸದ್ಯಸ್ಯಾಷ್ಟಕಲಾ ಜ್ಞೇಯಂ—ಕ. ಠ.
ಸದ್ಯಸ್ಯಾಷ್ಟಕಲಾ ಜ್ಞೇಯಃ—ಘ, ಢ, ತ, ದ.

[9] ಸ್ಮೃತಂ—ಢ, ದ

ಈಶಾನಃ ಸರ್ವವಿದ್ಯಾನಾಂ
ಪ್ರಥಮಂ[1] ಪರಿಕೀರ್ತಿತಮ್[2] ॥ ॥ ೨೧ ॥

ಈಶ್ವರಃ ಸರ್ವಭೂತಾನಾಂ
ದ್ವಿತೀಯಂ[3] ಪರಿಕೀರ್ತಿತಮ್[4] ।
ಬ್ರಹ್ಮಾಧಿಪತಿರಿತ್ಯೇವ[5]
ಬ್ರಹ್ಮಣೋಽಧಿಪತಿಸ್ತಥಾ ॥ ॥ ೨೨ ॥

ಬ್ರಹ್ಮೇತೀದಂ[6] ತೃತೀಯಂ ಸ್ಯಾತ್
ಶಿವೋ ಮೇಽಸ್ತು ಚತುರ್ಥಕಮ್[7] ।

'ಈಶಾನಃ ಸರ್ವವಿದ್ಯಾನಾಂ' ಎಂಬುದು ಈಶಾನಮಂತ್ರದ ಪ್ರಥಮಕಲೆ. ॥ ೨೧ ॥

'ಈಶ್ವರಃ ಸರ್ವಭೂತಾನಾಂ' ಎಂಬುದು ದ್ವಿತೀಯಕಲೆ. 'ಬ್ರಹ್ಮಾಧಿಪತಿಬ್ರ್ಹಹ್ಮಣೋಽಧಿಪತಿಬ್ರ್ಹಹ್ಮಾ' ಎಂಬುದು ತೃತೀಯ ಕಲೆ. 'ಶಿವೋಮೇ ಅಸ್ತು' ಎಂಬುದು ಚತುರ್ಥಕಲೆ. 'ಸದಾಶಿವೋಂ' ಎಂಬುದು ಪಂಚಮಕಲೆ. 'ಈಶಾನಃ ಸರ್ವವಿದ್ಯಾನಾಂ' ಊರ್ಧ್ವಮುಖ, 'ಈಶ್ವರಃ ಸರ್ವಭೂತಾನಾಂ' ಪೂರ್ವಮುಖ. ಬ್ರಹ್ಮಾಧಿಪತಿಬ್ರ್ಹಹ್ಮಣೋಽಧಿಪತಿಬ್ರ್ಹಹ್ಮಾ' ದಕ್ಷಿಣಮುಖ, 'ಶಿವೋಮೇ ಅಸ್ತು' ಉತ್ತರಮುಖ, 'ಸದಾಶಿವೋಂ' ಪಶ್ಚಿಮಮುಖ. ॥ ೨೨ ॥

ಈಶಾನಮಂತ್ರ—ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿಬ್ರ್ಹಹ್ಮಣೋಽಧಿಪತಿಬ್ರ್ಹಹ್ಮಾ ಶಿವೋಮೇ ಅಸ್ತು ಸದಾಶಿವೋಮ್ ॥ ೨೩ ॥

---

[1] ಪ್ರಥಮಃ—ಝ.

[2] ಪರಿಕೀರ್ತಿತಃ—ಝ.

[3] ದ್ವಿತೀಯಃ—ಝ.

[4] ಚೇತಿಕೀರ್ತಿತಂ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ
ಸಮುದಾಹೃತಃ—ಝ.

[5] ಪತಿಶ್ಚೈವ—ಖ, ಜ, ಥ.

[6] ತಿ ಚ—ಝ. ತಿ ತತ್—ಥ.

[7] ಚತುರ್ಥಕಃ—ಝ.

[1]ಸದಾಶಿವೋಽಪಿತಿ ಜ್ಞೇಯಂ[2]
　　ಪಂಚಮಂ[3] ಪರಿಕೀರ್ತಿತಮ್[4] ॥ ॥ ೨೩ ॥

ಏತಾ[5] ಈಶಾನ[6]ರೂಪಾಶ್ಚ
　　ಪಂಚಸಂಖ್ಯಾಃ[7] ಪ್ರಕೀರ್ತಿತಾಃ ।
ತತ್ಪುರುಷಾಯ ವಿದ್ಮಹೇ
　　ಪ್ರಥಮಂ ಪರಿವಕ್ಷ್ಯತೇ[8] ॥ ॥ ೨೪ ॥

ಮಹಾದೇವಾಯ ಧೀಮಹಿ
　　ತನ್ನೋ ಚೇತಿ ದ್ವಿತೀಯಕಮ್[9] ।
ರುದ್ರಃ ತೃತೀಯಮಿತ್ಯುಕ್ತಂ[10]
　　ಚತುರ್ಥಂ ತು[11] ಪ್ರಚೋದಯಾತ್ ॥ ॥ ೨೫ ॥

ಹೀಗೆ ಈಶಾನಮಂತ್ರದಲ್ಲಿ ಪಂಚಕಲೆಗಳಿವೆ. ತತ್ಪುರುಷಮಂತ್ರದ ಕಲೆಗಳು—'ತತ್ಪುರುಷಾಯ ವಿದ್ಮಹೇ' ಎಂಬುದು ಪ್ರಥಮಕಲೆ. ॥ ೨೪ ॥

'ಮಹಾದೇವಾಯ ಧೀಮಹಿ, ತನ್ನೋ' ಎಂಬುದು ದ್ವಿತೀಯ ಕಲೆ. 'ರುದ್ರಃ' ಎಂಬುದು ತೃತೀಯ ಕಲೆ. 'ಪ್ರಚೋದಯಾತ್' ಎಂಬುದು ಚತುರ್ಥಕಲೆ. ॥ ೨೫ ॥

---

[1] 'ಸದಾಶಿವೋಽಂ' ಇಲ್ಲಿಂದ 'ಚತುರ್ಥಕಂ'ವರೆಗಿನ ಭಾಗ ಚ ಪುಸ್ತಕದಲ್ಲಿಲ್ಲ.

[2] ಮಿತಿ ಬ್ರಹ್ಮ—ಋ.

[3] ಪಂಚಮಃ—ಋ.

[4] ತ್ವಿತಿ ಕೀರ್ತಿತಂ—ಕ, ಘ. ಟ, ಠ, ಢ, ತ, ಥ, ದ, ಪ.
ಚೇತಿ ಕೀರ್ತಿತಂ—ಜ.

[5] ಏತೇ—ಗ, ಛ, ಜ.

[6] ಚೇಶಾನ—ಖ, ಘ, ಜ, ಧ.
ಚೈಶಾನ—ಕ, ಟ, ಠ, ಢ, ತ, ಥ, ದ, ಪ.

[7] ಸಂಖ್ಯಾ—ಕ, ಘ, ಟ.

[8] ಪ್ರಥಮಃ ಪರಿಕೀರ್ತಿತಃ—ಋ.

[9] ದ್ವಿತೀಯಃ ಪರಿಕೀರ್ತಿತಃ—ಋ.

[10] ತನ್ನೋ ರುದ್ರಃ ತೃತೀಯಃ ಸ್ಯಾತ್—ಋ.

[11] ಚತುರ್ಥಸ್ತು—ಋ

ಏವಂ ತತ್ಪುರುಷಸ್ಯೈವ[1]
ಚತಸ್ರಶ್ಚ ಕಲಾಃ ಸ್ಮೃತಾಃ[2] |
ಅಘೋರೇಭ್ಯಸ್ತಥಾ ಪೂರ್ವಂ
ಅಘೋರೇಭ್ಯೋ ದ್ವಿತೀಯಕಮ್[3] || || ೨೬ ||

ಘೋರಘೋರ ತೃತೀಯಂ ಸ್ಯಾತ್[4]
ತರೇಭ್ಯಶ್ಚ ಚತುರ್ಥಕಮ್[5] |
ಸರ್ವತಃ ಪಂಚಮಂ ವಿದ್ಯಾತ್[6]
ಷಷ್ಠಂ ಸರ್ವಮು[ಉ]ದಾಹೃತಮ್[7] || || ೨೭ ||

ಹೀಗೆ ತತ್ಪುರುಷ ಮಂತ್ರದಲ್ಲಿ ನಾಲ್ಕು ಕಲೆಗಳಿವೆ. ತತ್ಪುರುಷಮಂತ್ರ—“ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ, ತನ್ನೋ ರುದ್ರಃ ಪ್ರಚೋದಯಾತ್” ಅಘೋರಮಂತ್ರದ ಕಲೆಗಳು—‘ಅಘೋರೇಭ್ಯಃ’ ಎಂಬುದು ಪ್ರಥಮಕಲೆ, ‘ಅಥ ಘೋರೇಭ್ಯಃ’ ಎಂಬುದು ದ್ವಿತೀಯ ಕಲೆ, || ೨೬ ||

‘ಘೋರಘೋರ’ ಎಂಬುದು ತೃತೀಯ ಕಲೆ, ‘ತರೇಭ್ಯಃ’ ಎಂಬುದು ಚತುರ್ಥ ಕಲೆ, ‘ಸರ್ವತಃ’ ಎಂಬುದು ಪಂಚಮ ಕಲೆ, ‘ಸರ್ವ’ ಎಂಬುದು ಷಷ್ಠ ಕಲೆ. || ೨೭ ||

‘ಸರ್ವೇಭ್ಯೋ ನಮಸ್ತೇ ಅಸ್ತು’ ಎಂಬುದು ಸಪ್ತಮಕಲೆ, ‘ರುದ್ರರೂಪೇಭ್ಯಃ’ ಎಂಬುದು ಅಷ್ಟಮಕಲೆ. ಅಘೋರಮಂತ್ರ—‘ಅಘೋರೇಭ್ಯೋಽಥಘೋರೇಭ್ಯೋ

---

[1] ಏವಂ ಪುರುಷಕಲಾಶ್ಚೈವ—ಕ, ಘ, ಜ, ಟ, ಠ, ಢ, ತ, ಥ, ದ, ಧ, ಪ.

[2] ಚತ್ವಾರಶ್ಚೇತಿ ಕೀರ್ತಿತಾಃ—ಕ, ಘ, ಜ, ಟ, ಠ, ಢ, ತ, ಥ, ದ, ಧ.
ಚತ್ವಾರೇತಿ ಪ್ರಕೀರ್ತಿತಾಃ—ಪ.

[3] ಅಘೋರೇಭ್ಯೋ ಭವೇದಾದ್ಯೋಽಥ ಘೋರೇಭ್ಯೋ ದ್ವಿತೀಯಕಃ—ಗ, ಚ.
ಘೋರೇಭ್ಯಶ್ಚ ದ್ವಿತೀಯಕಂ—ಕ, ಖ, ಘ, ಟ, ಠ, ಢ, ತ, ಥ, ದ, ಧ.
ಅಘೋರೇಭ್ಯೋ ದ್ವಿತೀಯಕಂ—ಜ.
ಘೋರೇತ್ಯುಕ್ತಂ ದ್ವಿತೀಯಕಂ—ಪ.

[4] ಘೋರಘೋರ ಸ್ತೃತೀಯಂ ಸ್ಯಾತ್—ಖ.
ಘೋರಘೋರಂ ತೃತೀಯಂ ಸ್ಯಾತ್—ಕ, ಜ, ಟ.

[5] ಘೋರಃ ಸ್ಯಾದಪರೋ ಘೋರತರೇಭ್ಯಃ ಸ್ಯಾಚ್ಚತುರ್ಥಕಃ—ಗ, ಚ.

[6] ವಿಂದ್ಯಾತ್—ಕ, ಘ, ಟ, ಠ, ಢ, ತ, ಥ, ದ, ಧ.

[7] ಪಂಚಮಃ ಸರ್ವತಃ ಸರ್ವಃ ಶರ್ವೇಭ್ಯಃ ಷಷ್ಠ ಉಚ್ಯತೇ—ಗ, ಚ.

ಸರ್ವೇಭ್ಯೋ ನಮಸ್ತೇ ಅಸ್ತು
ಸಪ್ತಮಂ ಚೇತಿ ಕೀರ್ತಿತಮ್[1]
ಅಷ್ಟಮಂ ರುದ್ರರೂಪೇಭ್ಯ
ಶ್ಚಾ ಘೋರಸ್ಯಾಷ್ಟಕಂ ಸ್ಮೃತಮ್[2] ॥ ॥ ೨೮ ॥

ಪ್ರಥಮಂ ವಾಮದೇವಾಯ
ಜ್ಯೇಷ್ಠಾಯೇತಿ ದ್ವಿತೀಯಕಮ್ ।
ತೃತೀಯಂ ರುದ್ರಾಯ ನಮಃ
ಕಾಲಾಯೇತಿ ಚತುರ್ಥಕಮ್[3] ॥ ॥ ೨೯ ॥

ಪಂಚಮಂ ಕಲ ಇತ್ಯುಕ್ತಂ
ವಿಕರಣಾಯ ನಮಸ್ತು ಷಟ್[4] ।

ಘೋರಘೋರ ತರೇಭ್ಯಃ ಸರ್ವತಃ ಸರ್ವಸರ್ವೇಭ್ಯೋ ನಮಸ್ತೇ ಅಸ್ತು ರುದ್ರ ರೂಪೇಭ್ಯಃ' ಈ ಮಂತ್ರದಲ್ಲಿ ಎಂಟು ಕಲೆಗಳಿವೆ. ॥ ೨೮ ॥

ವಾಮದೇವ ಮಂತ್ರದ ಕಲೆಗಳು—'ವಾಮದೇವಾಯನಮಃ' ಎಂಬುದು ಪ್ರಥಮಕಲೆ, 'ಜ್ಯೇಷ್ಠಾಯ ನಮಃ' ಎಂಬುದು ದ್ವಿತೀಯಕಲೆ, 'ರುದ್ರಾಯ ನಮಃ' ಎಂಬುದು ತೃತೀಯಕಲೆ, 'ಕಾಲಾಯ ನಮಃ' ಎಂಬುದು ಚತುರ್ಥಕಲೆ. ॥ ೨೯ ॥

'ಕಲ' ಎಂಬುದು ಪಂಚಮಕಲೆ, 'ವಿಕರಣಾಯ ನಮಃ' ಎಂಬುದು ಷಷ್ಠಕಲೆ, 'ಬಲ' ಎಂಬುದು ಸಪ್ತಮಕಲೆ, 'ವಿಕರಣಾಯ ನಮಃ' ಎಂಬುದು ಅಷ್ಟಮಕಲೆ. ॥ ೩೦ ॥

---

[1] ಸರ್ವೇಭ್ಯೋ ನನುಸ್ತೇ ಅಸ್ತು ಸಪ್ತಮಂ ಪರಿಕೀರ್ತಿತಮ್—ಥ.
ಸರ್ವೇಭ್ಯೋ ನಮಸ್ತೇ ಅಸ್ತು ಸಪ್ತಮಂ ಚೇತಿ ಕೀರ್ತಿತಾಃ—ಕ
ನಮಸ್ತೇ ಅಸ್ತು ರುದ್ರೇತಿ ಸಪ್ತಮಃ ಸಮುದಾಹೃತಃ—ಗ, ಚ, ಝ.

[2] ರೂಪೇಭ್ಯಶ್ಚಾಷ್ಟಮಃ ಪ್ರೋಕ್ತಶ್ಚಾಘೋರಸ್ಯಾಷ್ಟಕಂ ಸ್ಮೃತಂ—ಗ, ಚ, ಝ.
ಅಷ್ಟಮಂ ರುದ್ರರೂಪೇಭ್ಯಃ ಅಘೋರಸ್ಯಾಷ್ಟಕಂ ಸ್ಮೃತಂ—ಕ, ಖ, ಘ, ಛ, ಟ, ಠ, ಢ, ತ, ಥ, ದ.
ಅಘೋರಸ್ಯಾಷ್ಟಕಂ ಸ್ಮೃತಂ ರುದ್ರರೂಪೇಭ್ಯಶ್ಚಾಷ್ಟಮಂ—ಥ, ಪ.

[3] ಶ್ರೇಷ್ಠಾಯೇತಿ ತೃತೀಯಂ ಸ್ಯಾತ್ ರುದ್ರಾಯೇತಿ ಚತುರ್ಥಕಂ—ಗ, ಚ, ಝ.
ತೃತೀಯರುದ್ರಾಯ ನಮಃ ಕಾಲಾಯೇತಿ ಚತುರ್ಥಕಂ—ತ.

[4] ಪಂಚಮಂ ಕಾಲ ಇತ್ಯುಕ್ತಂ ಕಲವಿಕರಣಾಯ ನಮಸ್ತು ಷಟ್—ಗ, ಚ, ಝ.
ಕಾಲಾಯ ಪಂಚಮಂ ಚೈವ ಕಲಾವಿಕರಣಾಯ ಷಟ್—ಥ.
ಪಂಚಮಂ ಕಾಲಮಿತ್ಯುಕ್ತಂ ವಿಕರಣಾಯ ನಮಸ್ತು ಷಟ್—ಕ, ಘ, ಜ.

ಸಪ್ತಮಂ ಬಲ[1] ಇತ್ಯುಕ್ತಂ
ಅಷ್ಟಮಂ[2] ವಿಕರಣಾಯ ಚ ॥ ॥ ೩೦ ॥

ನವಮಂ ಬಲ ಇತ್ಯುಕ್ತಂ[3]
ದಶಮಂ[4] ಪ್ರಮಥನಾಯ ಚ ।
ಸರ್ವಭೂತದಮನಾಯ
ನಮಶ್ಚೈಕಾದಶಂ ಸ್ಮೃತಮ್[5] ॥ ॥ ೩೧ ॥

[6]ದ್ವಾದಶಂ ಚ ಮನಶ್ಚೇತಿ
ತ್ರಯೋದಶೋನ್ಮನಾಯ ಚ[7] ।

‘ಬಲ’ ಎಂಬುದು ನವಮಕಲೆ, ‘ಪ್ರಮಥನಾಯ ನಮಃ’ ಎಂಬುದು ದಶಮಕಲೆ, ಸರ್ವಭೂತದಮನಾಯ ನಮಃ’ ಎಂಬುದು ಏಕಾದಶಕಲೆ. ॥ ೩೧ ॥

ವಿದ್ಯಾಂಗದ ಹೃದಯದ ವರ್ಣ ದಾಸವಾಳಹೂವಿನ ಬಣ್ಣ, ಶಿರಸ್ಸಿನ ವರ್ಣ ಕುಂದಕುಸುಮವರ್ಣ, ಶಿಖೆಯ ವರ್ಣ ಅಗ್ನಿಯ ವರ್ಣ, ಕವಚದ ವರ್ಣ ಇಂದ್ರನೀಲ ಮಣಿಯ ವರ್ಣ, ನೇತ್ರದ ವರ್ಣ ಸಿಂದೂರವರ್ಣ ಮತ್ತು ಅಸ್ತ್ರದ ವರ್ಣ ಹರಿತಾಲದ ವರ್ಣ, ಇವು ಆರು ವಿದ್ಯಾಂಗಗಳ ವರ್ಣಗಳು. ಶಕ್ತ್ಯಂಗದ ಹೃದಯದ ವರ್ಣ ಆಕಾಶದ ವರ್ಣ, ಶಿರಸ್ಸಿನ ವರ್ಣ ಪೀತ ವರ್ಣ, ಶಿಖೆಯ ವರ್ಣ ಶ್ಯಾಮವರ್ಣ ಕವಚದ ವರ್ಣ ರಕ್ತವರ್ಣ, ನೇತ್ರದ ವರ್ಣ ಕೃಷ್ಣವರ್ಣ ಮತ್ತು ಅಸ್ತ್ರದ ವರ್ಣ ಮರಕತ ಮಣಿಯುವರ್ಣ ಇವು ಆರು ಶಕ್ತ್ಯಂಗಗಳ ವರ್ಣಗಳು, ॥ ೮೨ ॥

ಸಾಮಾನ್ಯಾಂಗದ ಹೃದಯದ ವರ್ಣ ಸ್ಫಟಿಕ ವರ್ಣ, ಶಿರಸ್ಸಿನ ವರ್ಣ ರಕ್ತವರ್ಣ ಶಿಖೆಯ ವರ್ಣ ಪೀತವರ್ಣ, ಕವಚದ ವರ್ಣ ಶ್ಯಾಮವರ್ಣ, ನೇತ್ರದ ವರ್ಣ

---

[1] ಜಟಾ — ಕ. ಫ.

[2] ಚಂದ್ರ — ಧ.

[3] ಸಿಂಧೂರಂ — ಕ, ಘ, ಠ, ಥ.

[4] ಹರಿತಾ ಭಂ ಚ — ಪ.

[5] ವಿದ್ಯಾಂಗಾನಿ — ಖ.

[6] ನಭಸ್ತ್ಥಾ — ಗ. ಚ. ಭ. ದ.
ಅನುಕ್ರಮಾತ್ — ಧ

[7] ಕ್ರಮಾಣಿ ತು — ಗ, ಚ, ಭ.
ಪ್ರಕೀರ್ತಿತಾ :– ಝ.

ಸ್ಫಟಿಕಂ[1] ರಕ್ತಪೀತಂ ಚ[2]
ಶ್ಯಾಮಂ ಸ್ಯಾತ್[3] ಕಾಂಚನಾರುಣೇ[4] ।
ಏತಾನ್ಯುಕ್ತಾನಿ ವರ್ಣಾನಿ[5]
ಸಾಮಾನ್ಯಾಂಗಮುದೀರಿತಮ್[6] ॥ ॥ ೮೩ ॥

[7]ಚತುರ್ಭುಜಂ [8]ತ್ರಿಣೇತ್ರಂ ಚ
ಜಟಾಮುಕುಟಮಣ್ಡಿತಮ್ ।
ಸರ್ವಲಕ್ಷಣಸಂಯುಕ್ತಂ
ಸರ್ವಾಭರಣಭೂಷಿತಮ್ ॥ ॥ ೮೪ ॥

ತ್ರಿಶೂಲಮಭಯಂ ಸವ್ಯೇ
ಕಪಾಲಂ ವರಮನ್ಯಕೇ[9]

ಕಾಂಚನವರ್ಣ, ಮತ್ತು ಅಸ್ತ್ರದ ವರ್ಣ ಅರುಣವರ್ಣ, ಇವು ಆರು ಸಾಮಾನ್ಯಾಂಗಗಳ ವರ್ಣಗಳು, ಸಾಮಾನ್ಯಾಂಗವು ನಿರೂಪಿತವಾಯಿತು, ॥ ೮೩ ॥

ಇನ್ನು ಧ್ಯಾನಾರ್ಹಸ್ವರೂಪದ ನಿರೂಪಣೆ— ಈ ಸ್ವರೂಪವು ನಾಲ್ಕು ಹಸ್ತಗಳನ್ನು ಮೂರು ನೇತ್ರಗಳನ್ನೂ ಹೊಂದಿ ಸರ್ವಲಕ್ಷಣಗಳಿಂದ ಕೂಡಿ ಸಮಸ್ತ ಆಭರಣಗಳಿಂದ ಅಲಂಕೃತವಾಗಿ, ॥ ೮೪ ॥

ದಕ್ಷಿಣ ಹಸ್ತದಲ್ಲಿ ತ್ರಿಶೂಲ ಅಭಯ ಮುದ್ರೆಗಳನ್ನು ವಾಮಹಸ್ತಗಳಲ್ಲಿ ಕಪಾಲ

---

[1] ಸ್ಫಾಟಿಕಂ — ಖ, ಗ, ಜ, ಝ.
[2] ರಕ್ತಂ ಪೀತಂ ಚ — ಕ, ಘ, ಛ. ಟ, ಠ, ಡ, ಢ.
ತ, ಥ, ದ, ಧ, ಪ, ಫ, ಬ. ಭ.
[3] ಶ್ಯಾಮಾಂಗಂ — ಖ, ಗ, ಚ, ಛ, ಝ.
[4] ಕಾಂಚನಾ ರುಣಂ — ಕ, ಖ, ಗ ಘ, ಚ, ಛ ಭ, ಝ.
ಟ, ಠ, ಡ, ಢ, ತ, ಥ, ದ, ಪ.
[5] ಏತಾನಿ ವರ್ಣಾನ್ಯುಕಾನಿ — ಟ, ಥ.
[6] ಜ್ಞಂ ಪ್ರಕೀರ್ತಿತಂ — ಕ, ಖ, ಘ, ಟ, ಠ, ಢ, ತ, ಥ, ದ, ಧ, ಪ.
ಜ್ಞಂ ಪ್ರಕೀರ್ತಿತಾ :— ಛ.
[7] ಇಲ್ಲಿಂದ – 'ಭೂತ ಶೋಧನಂ' – (ಶ್ಲೋ, ೮೨) ವರೆಗೆ
ಢ, ದ. ಪುಸ್ತಕಗಳಲ್ಲಿಲ್ಲ.
[8] ಚುತುರ್ಭುಜ — ಠ.
[9] ವರದವಾಮಕೇ — ಕ, ಘ, ಟ, ಠ, ತ, ಥ, ಪ.
ವರವಾಮಕೇ — ಛ, ಧ.

ಹಾರಕೇಯೂರಸಂಯುಕ್ತಂ
ಕಟಕೈಃ ಕುಣ್ಡಲೈರ್ಯುತಮ್ ॥ ॥ ೮೫ ॥

ಹೃದಾದಿವರ್ಣ[1] ಪರ್ಯನ್ತಂ
ಸ್ವರೂಪಂ ಸೌಮ್ಯ[2]ಮುಚ್ಯತೇ ।
ರೌ ಶೇಷಾಃ[3] ತಾದ್ರಾ[4] ಕೃತಿರ್ಜ್ಞೇಯಾಃ[5]
ಸರ್ವೇಷಾಂ ರೂಪಮೀರಿತಮ್[6] ॥ ॥ ೮೬ ॥

ಶಿವಾಂಗೈಸ್ತು ಯಜೇದ್ದೇವಂ
ಸ್ಥಾಪನಾದೀನಿ ಸರ್ವಶಃ[7] ।

ಮತ್ತು ವರದ ಮುದ್ರೆಗಳನ್ನೂ ಧರಿಸಿ ಹಾರ ತೋಳ್ಬಳೆ ಕಡಗ ಕುಂಡಲಗಳಿಂದ ಅಲಂಕೃತವಾಗಿರುತ್ತದೆ. ॥೮೫ ॥

ಹೃದಯಾದಿ ವರ್ಣ ಪರ್ಯಂತವಾದ ಈ ಸ್ವರೂಪವು ಸೌಮ್ಯವಾದುದು. ಉಳಿದವು ರೌದ್ರಸ್ವರೂಪಗಳು, ಹೀಗೆ ಎಲ್ಲ ರೂಪಗಳನ್ನೂ ನಿರೂಪಿಸಿದ್ದಾಯಿತು. ॥ ೮೬ ॥

ಶಿವಾಂಗ ಮಂತ್ರಗಳಿಂದ ಪರಶಿವನನ್ನು ಪೂಜಿಸಬೇಕು ; ಮತ್ತು ಪ್ರತಿಷ್ಠಾದಿ

---

[1] ಹೃದಾದಿವರ್ಣ — ಗ, ಚ.
ಹೃದಾದಿ ಪಾನು — ಖ (ಪಾ), ಛ.
ಹೃದಯಾಪ್ಯಸ್ಯ — ಧ.
ಹೃದಯಾದಿ — ಘ, ಛ, ಟ, ತ, ಪ.
ಹೃದಯಾದಿಂ — ಥ.
ಹೃದಯಾದಿಷು — ಕ.

[2] ಸಾಮ್ಯ — ಠ, ತ.

[3] ಶೇಷಂ, ತ, ಥ, ಪ.

[4] ರೌದಂ — ತ, ಥ, ಪ.

[5] ಜ್ಞೇಯಂ — ತ, ಥ, ಪ. ಜ್ಞೇರ್ಯ :- ಕ.

[6] ರೂಪಮುಚ್ಯತೇ — ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ.

[7] ಶಿವಾಂಗೈಸ್ತು ಯಜೇ ದ್ದೇವಂ ಸ್ಥಾಪನಾದೌ ಚ ಸರ್ವಶ :- ಚು.
ಶಿವಾಂಗೈರ್ಯಃ ಪೂಜಯೇದ್ದೇವಂ ಸ್ಥಾಪನಾದಿಷು ಸರ್ವಶಃ— ಪ.

ಭೂತಾಂಗೈಶ್ಚೈವ[1] ಷಡ್ವಕ್ತ್ರ[2]
ಪಾದಾದೇ : ಭೂತ[3]ಶೋಧನಮ್ ॥ ॥ ೮೭ ॥

ಅಣೌ[4] ನಾಮಾನಿ ಸಂಯೋಜ್ಯ[5]
ಭೂತಾಂಗೇಷು ಸಮಾಚರೇತ್ ।
ಕೂಟಾಂಗೈಶ್ಚೈವ[6] ವಿದ್ಯಾಂಗೈ :[7]
ಪ್ರಾಯಶ್ಚಿತ್ತಂ ತು ಕಾರಯೇತ್ ॥ ॥ ೮೮ ॥

ಶಕ್ತೀನಾಂ ಸ್ಥಾಪನಾಕಾಲೇ[8]
ಶಕ್ತ್ಯಂಗೈಸ್ತು[9] ಸಮಾಚರೇತ್ ।

ಕ್ರಿಯೆಗಳನ್ನೂ ಆಚರಿಸಬೇಕು. ಭೂತಾಂಗ ಮಂತ್ರಗಳಿಂದ ಪಾದಾದಿ ಮಸ್ತಕ ಪರ್ಯನ್ತವಾಗಿ ಪಂಚ ಭೂತ ಶುದ್ಧಿಯನ್ನು-ಮಾಡಬೇಕು. ॥ ೮೭ ॥

ಹೀಗೆ ಭೂತಶುದ್ಧಿಯನ್ನು ಮಾಡುವಾಗ ಭೂತಾಂಗ ಮಂತ್ರಗಳಲ್ಲಿ ಆಯಾಯ ಭೂತನಾಮವನ್ನು ಸೇರಿಸಿ ಮಂತ್ರವನ್ನು ಉಚ್ಚರಿಸಬೇಕು, ಶೈವಾಚಾರ್ಯರ ಮತ್ತು ಶಿಷ್ಯರ ಸಮಯಾಚಾರಕ್ಕೆ ಚ್ಯುತಿ ಬಂದಾಗ ವಿಧ್ಯುಕ್ತ ಪ್ರಕಾರವಾಗಿ ಕೂಟಾಂಗ ಮತ್ತು ವಿದ್ಯಾಂಗ ಮಂತ್ರಗಳಿಂದ ಪ್ರಾಯಶ್ಚಿತ್ತವನ್ನು ಮಾಡಬೇಕು. ॥ ೮೮ ॥

ಉಮಾದಿ ಶಕ್ತಿದೇವತೆಗಳನ್ನು ಸ್ಥಾಪಿಸುವಾಗ ಶಕ್ತ್ಯಂಗ ಮಂತ್ರಗಳಿಂದ

---

[1] ಭೂತಾಂಗೇಷು ಚ — ಕ, ಖ, ಗ, ಘ, ಙ, ಛ, ಭ, ಝ, ಟ, ಠ, ಢ, ತ, ಥ, ದ, ಪ.

[2] ವೈ ವತ್ಸ ! — ಕ, ಖ, ಘ, ಛ, ಭ, ಝ, ಟ, ಠ, ಢ, ತ, ಥ, ದ, ಪ.

[3] ಪಾದಾದಿಭೂತ — ಕ, ಖ, ಘ ಛ, ಭ, ಟ, ಠ, ತ, ಪ.

[4] ಅರ್ಣ — ಧ, ಅಣು — ಛ.

[5] ಸಂಯುಜ್ಯ — ಘ.

[6] ಕೂಟಾಂಗಂ ಚೈವ — ಭ. ಟ.

[7] ವಿದ್ಯಾಂಗಂ — ಭ.

[8] ಸ್ಥಾಪನೇ ಕಾಲೇ — ಖ, ಗ, ಜ, ಭ, ಝ.

[9] ಶಕ್ತ್ಯಂಗೇಷು — ಥ. ಧ.

ಅನ್ಯೇಷಾಂ ಸರ್ವದೇವಾನಾಂ
ಸಾಮಾನ್ಯಾಂಗೈಸ್ತು ಯೋಜಯೇತ್ । ॥ ೮೯ ॥

ಏವಂ ಷಡಂಗಮಾಖ್ಯಾತಂ
ವಿಶೇಷಸ್ತ್ವಥುನೋಚ್ಯತೇ[1] ।
ಕೇವಲಂ ಜ್ಞಾನಜಂ ಚೈವ
ಯೋಗಜಂ ಭೂತಜಂ ತಥಾ ॥ ॥ ೯೦ ॥

ಕಾಮದಂ ಚ [2]ಕ್ರಮೇಣೈವ
ಹೃದಯಂ ಪಂಚಧಾ ಭವೇತ್ ।
ಶಿವಾಂಗಂ[3] ಹೃದಯಂ ಯತ್ತು[4]
ಕೇವಲಂ ಸಮುದಾಹೃತಮ್ ॥ ॥ ೯೧ ॥

ಸಾಂತಂ[5] ಯಾಂತ[6]ಸಮಾಯುಕ್ತಂ
ಆದಿವರ್ಗಾಂತ[7]ಸಂಯುತಮ್ ।

ಸಮಸ್ತಕ್ರಿಯೆಗಳನ್ನು ಆಚರಿಸಬೇಕು. ಉಳಿದ ದೇವತೆಗಳ ಸ್ಥಾಪನಾದಿ ಕಾರ್ಯಗಳನ್ನುಸಾಮಾನ್ಯಾಂಗ ಮಂತ್ರಗಳಿಂದ ಆಚರಿಸಬೇಕು. ॥೮೯॥

ಇನ್ನು ಷಡಂಗಗಳಲ್ಲಿ ವಿಶೇಷವನ್ನು ಹೇಳುತ್ತೇನೆ, ಕೇವಲಹೃದಯ ಜ್ಞಾನಜ ಹೃದಯ ಯೋಗಜಹೃದಯ ಭೂತಜಹೃದಯ— ॥ ೯೦ ॥

ಕಾಮದಹೃದಯವೆಂದು ಹೃದಯವು ಐದುವಿಧ. ಹ್ರಾಂ ಎಂಬ ಶಿವಾಂಗ ಹೃದಯಬೀಜವು ಕೇವಲಹೃದಯ. ॥ ೯೧ ॥

ಸಾಂತವಾದ ಹಕಾರವನ್ನು ಯಾಂತವಾದ ರೇಫ ಔಕಾರ ಮತ್ತು ಅನುಸ್ವಾರಗ

---

[1] ವಿಶೇಷಮಧುನೋಚ್ಯತೇ —
ಕ, ಖ, ಗ, ಘ, ಛ, ಛ, ಝ, ಟ, ಠ, ಢ, ತ, ಥ, ದ, ಧ, ಪ.

[2] ಕಾಮದಶ್ಚ — ಥ.

[3] ಶಿವಾಂಗ — ಕ, ಘ, ಟ, ಥ.

[4] ಯತ್ತತ್ — ಢ.

[5] ಸಾಂತ — ಕ, ಛ.

[6] ಯಾಸ — ಖ
ಯಾಂತಂ — ಘ, ಛ, ಠ, ತ.

[7] ವರ್ಗಾಂಗ — ದ.

ಜ್ಞಾನಾತ್ಮಹೃದಯಂ ಬಿನ್ದು :[1]
ಸಮಾಸಾತ್ ಪರಿಕೀರ್ತಿತಮ್ ॥ ॥ ೯೨ ॥

ಭೂತಾಂತಮನಿಲೋಪೇತಂ
ತತ್ತ್ವಾಂತಂ ಸ್ವರಸಂಯುತಮ್ ।
ಶಿವಶಕ್ತಿಸಮೋಪೇತಂ[2]
ಯೋಗಜಂ[3] ಹೃದಯಂ ವಿದು : ॥ ॥ ೯೩ ॥

[4]ಪಂಚಮಂ ಪಾರ್ಥಿವೋಪೇತಂ
ದ್ವಿತೀಯ[5]ಸ್ವರ ಸಂಯುತಮ್ ।
ಬಿನ್ದುನಾದಸಮಾಯುಕ್ತಂ
ಭೂತಜಂ ಹೃದಯಂ ವಿದು : ॥ ॥ ೯೪ ॥

ಳೊಡನೆ ಉದ್ಧರಿಸಿದರೆ ಹ್ರೌಂ ಎಂಬ ಜ್ಞಾನಾತ್ಮಹೃದಯವಾಗುತ್ತದೆ. ॥ ೯೨ ॥

ಅನಿಲಬೀಜವಾದ ಯಕಾರದಿಂದ ಕೂಡಿದ ಭೂತಾಂತವಾದ ಹಕಾರವನ್ನು, ತತ್ತ್ವಾಂತವಾದ ಮತ್ತೊಂದು ಹಕಾರವನ್ನೂ ಉದ್ಧರಿಸಿ ಎರಡಕ್ಕೂ ಅಕಾರ ಮತ್ತು ಅನುಸ್ವಾರಗಳನ್ನು ಸೇರಿಸಿದರೆ 'ಹ್ಯಂ ಹಂ' ಎಂದು ಯೋಗಜಹೃದಯಬೀಜವಾಗುತ್ತದೆ. ॥ ೯೩ ॥

ಪಾರ್ಥಿವ ಬೀಜವಾದ ಲಕಾರದಿಂದ ಕೂಡಿದ ಪಂಚಮವೆಂಬ ಹಕಾರವನ್ನು ಆಕಾರ ಮತ್ತು ಅನುಸ್ವಾರಗಳೊಡನೆ ಉದ್ಧರಿಸಿದರೆ ಹ್ಲಾಂ ಎಂದು ಭೂತಜಹೃದಯಬೀಜವಾಗುತ್ತದೆ. ॥ ೯೪ ॥

---

[1] ಬಿಂದು — ಗಾ, ಚ.
[2] ಸಮಾಯುಕ್ತಂ — ಕ, ಖ, ಘ, ಛ, ಟ, ತ, ದ, ಧ, ಪ.
ಸಮಾಯುಕ್ತ — ಥ.
[3] ಯೋಗಜ — ಛ.
[4] ಈ ಪದ್ಯ — ಕ, ಘ, ಛ, ಭ, ಟ, ಠ, ಢ
ತ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.
[5] ದ್ವಿತೀಯಂ — ಕ, ಗ, ಘ, ಚ, ಛ, ಭ, ಝ,
ಟ, ಠ, ಡ, ತ, ಥ, ದ, ಧ, ಪ.

ತತ್ತ್ವಾನ್ತಮನಿಲಾಂತಂ ಚ
ದಶಾನ್ತಾನ್ತ[1]ಕಲಾನ್ವಿತಮ್ |
ಬಿನ್ದುನಾದಸಮಾಯುಕ್ತಂ
ಹೃದಯಂ ಸರ್ವಕಾಮದಮ್ || || ೯೫ ||

ಹೃದಯಾದಿ ನಮೋಽನ್ತಂ ತು[2]
ಸರ್ವೇಷಾಂ ಸಹ[3] ಯೋಜಯೇತ್ |
ಈಶಾನಂ ಪ್ರಥಮಂ ವಿದ್ಯಾತ್[4]
ಶುಕ್ಲವರ್ಣಮುದಾಹೃತಮ್[5] || || ೯೬ ||

ಈಶ್ವರಂ ಜ್ಞಾನಹೃದಯಂ
ತಪ್ತಕಾಂಚನಸಂನಿಭಮ್ |

ತತ್ತ್ವಾಂತವಾದ ಹಕಾರ ಮತ್ತು ಅನಿಲಾಂತವಾದ ರೇಫಗಳನ್ನು ಐಕಾರದೊಡನೆ ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ ಹ್ರೈಂ ಎಂದು ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಕಾಮದ ಹೃದಯ ಬೀಜವಾಗುತ್ತದೆ. || ೯೫ ||

ಪೂರ್ವೋಕ್ತ ಪಂಚಹೃದಯಗಳನ್ನು ಆಯಾಯ ಹೃದಯಾದಿಯಾಗಿಯೂ ನಮೋಂತವಾಗಿಯೂ ಪ್ರಯೋಗಿಸಬೇಕು. ಹೇಗೆಂದರೆ— ಹ್ರಾಂ ಕೇವಲಹೃದಯಾಯನಮಃ, ಹ್ರೌಂ ಜ್ಞಾನಜಹೃದಯಾಯ ನಮಃ, ಹ್ಯಂ ಹಂ ಯೋಗಜ ಹೃದಯಾಯ ನಮಃ, ಹ್ಲಾಂ ಭೂತಜಹೃದಯಾಯನಮಃ, ಹ್ರೈಂ ಕಾಮದ ಹೃದಯಾಯ ನಮಃ. ಕೇವಲ ಹೃದಯವು ಈಶಾನ ಸ್ವರೂಪ, ಇದರ ವರ್ಣ ಶುಕ್ಲ. || ೯೬ ||

ಜ್ಞಾನಜಹೃದಯವು ಈಶ್ವರಸ್ವರೂಪ, ಇದು ಪುಟವಿಟ್ಟ ಸುವರ್ಣದ ವರ್ಣವನ್ನು

---

[1] ದಶಾಂತಂ ಚ — ಛ, ಥ.
ದಶಾಂತಾಂತಂ — ಕ.

[2] ಚ — ಧ.

[3] ಸಮ — ಥ.

[4] ವಿಂದ್ಯಾತ್ — ಕ, ಘ, ಟ, ಠ, ಢ, ತ, ದ, ಧ

[5] ಸಮನ್ವಿತಂ— ಚು.

ಯೋಗಜಂ ಬ್ರಹ್ಮರೂಪಂ ಸ್ಯಾತ್
ಪೀತವರ್ಣಂ ತು ನಿರ್ದಿಶೇತ್ । ॥ ೯೭ ॥

ಭೂತಜಂ ಚೇಶರೂಪಂ ತು[1]
ರಕ್ತ[2]ವರ್ಣಮುದಾಹೃತಮ್ ।
ಸಾದಾಖ್ಯಂ ಕಾಮದಂ ವಿದ್ಯಾತ್[3]
ಶುದ್ಧಸ್ಫಟಿಕಸನ್ನಿಭಮ್ ॥ ॥ ೯೮ ॥

ಯಜನಂ ಕೇವಲೇನೈವ
ಸ್ಥಾಪನಂ ಜ್ಞಾನಜೇನ ತು ।
ಪ್ರೋಕ್ಷಣಂ[4] ಯೋಗಜೇನೈವ
ದೀಕ್ಷಾಕರ್ಮ ತು ಭೂತಜಮ್[5] ॥ ॥ ೯೯ ॥

ಹೊಂದಿರುತ್ತದೆ. ಯೋಗಜಹೃದಯವು ಬ್ರಹ್ಮಸ್ವರೂಪ, ಇದರ ಬಣ್ಣ ಹಳದಿ. ॥ ೯೭ ॥

ಭೂತಜ ಹೃದಯವು ಈಶಸ್ವರೂಪ, ಇದರ ಬಣ್ಣ ಕೆಂಪು, ಕಾಮದ ಹೃದಯವು ಸಾದಾಖ್ಯತತ್ತ್ವ ಸ್ವರೂಪ, ಇದು ಶುದ್ಧಸ್ಫಟಿಕವರ್ಣವನ್ನು ಹೊಂದಿರುತ್ತದೆ. ॥೯೮॥

ಕೇವಲ ಹೃದಯಾಂಗಮಂತ್ರದಿಂದ ಪೂಜೆಯನ್ನು ಜ್ಞಾನಜಹೃದಯಾಂಗ ಮಂತ್ರದಿಂದ ಸ್ಥಾಪನೆಯನ್ನು ಯೋಗಜಹೃದಯಾಂಗ ಮಂತ್ರದಿಂದ ಪ್ರೋಕ್ಷಣೆಯನ್ನು ಭೂತಜ ಹೃದಯಾಂಗ ಮಂತ್ರದಿಂದ ದೀಕ್ಷಾಕಾರ್ಯವನ್ನು ಆಚರಿಸಬೇಕು. ॥೯೯॥

---

[1] ಚೋಶ್ವರಂ ರೂಪಂ — ಗ, ಚು, ಟ,
ಚ್ಯೇಶ್ವರಂ ರೂಪಂ — ಖ
ಭೂತಮೀಶ್ವರ ರೂಪಂ ತು — ಧ.

[2] ರತ್ನ — ಕ, ಘ, ಟ, ಠ, ಢ, ತ, ಥ, ದ, ಧ.

[3] ವಿಂದ್ಯಾತ್ ಕ, ಘ, ಟ, ಠ, ಢ, ತ, ಥ, ದ, ಧ.

[4] ಪ್ರೋಕ್ಷ್ತ್ರಣೀ — ಪ.

[5] ದೀಕ್ಷಾ ವೈ ಭೂತಜೇನ ತು — ಖ, ಪಾ
ದೀಕ್ಷಾಕರ್ಮಣಿ ಭೂತಜಂ — ಧ.

ಸರ್ವಕರ್ಮ ವಿಶೇಷೇಣ
ಕಾಮದೇನೈವ ಕಾರಯೇತ್ ।
ಏವಂ ಹೃದಯ ಮಾಖ್ಯಾತಂ
ಅಸ್ತ್ರಭೇದ ಮಥ ಶೃಣು[1] ॥ ॥ ೧೦೦ ॥

ಶಿವಾಸ್ತ್ರಂ ಕ್ಷುರಿಕಾಸ್ತ್ರಂ ಚ
ತಥಾ ಪಾಶುಪತಾಸ್ತ್ರಕಮ್ ।
ವ್ಯೋಮಾಸ್ತ್ರಂ ಚೈವಾಘೋರಾಸ್ತ್ರಂ
ಅಸ್ತ್ರಂ ಪಂಚವಿಧಂ ಭವೇತ್[2] ॥ ॥ ೧೦೧ ॥

ಷಡಕ್ಷರಂ ಶಿವಾಸ್ತ್ರಂ ಸ್ಯಾತ್
ಕ್ಷುರಿಕಾ ತ್ವಷ್ಟ[3] ವರ್ಣಕಮ್ । [ಕಾ]

ಕಾಮದ ಹೃದಯಾಂಗ ಮಂತ್ರದಿಂದ ಪೂಜಾದಿ ಸಮಸ್ತ ಕಾರ್ಯಗಳನ್ನು ಆಚರಿಸಬೇಕು. ಕೇವಲ ಹೃದಯಾದಿ ಮಂತ್ರಗಳ ಉದ್ಧಾರ ಮತ್ತು ವಿನಿಯೋಗಗಳನ್ನು ನಿರೂಪಿಸಿದ್ದಾಯಿತು. ಇನ್ನು ಅಸ್ತ್ರಭೇದವನ್ನು ನಿರೂಪಿಸುವೆನು. ॥೧೦೦॥

ಶಿವಾಸ್ತ್ರ ಕ್ಷುರಿಕಾಸ್ತ್ರ ಪಾಶುಪತಾಸ್ತ್ರ ವ್ಯೋಮಾಸ್ತ್ರ ಮತ್ತು ಅಘೋರಾಸ್ತ್ರವೆಂದು ಅಸ್ತ್ರ ಮಂತ್ರವು ಐದುವಿಧ. ॥ ೧೦೧ ॥

ಶಿವಾಸ್ತ್ರ ಮಂತ್ರದಲ್ಲಿ ಆರಕ್ಷರಗಳೂ, ಕ್ಷುರಿಕಾಸ್ತ್ರ ಮಂತ್ರದಲ್ಲಿ ಎಂಟಕ್ಷರಗಳೂ

---

[1] ಅಂಗಭೇದ ಮಥ ಶೃಣು — ಪ.
ಮಂತ್ರಭೇದ ಮಥ ಶೃಣು — ಕ, ಟ, ಠ, ಢ, ತ, ಥ, ದ, ಧ.
ಅಥ ಮಂತ್ರಭೇದಮುಚ್ಯತೇ — ಛ.

[2] ಪಂಚಾಸ್ತ್ರಂ ಚೇತಿ ಕೀರ್ತಿತಂ — ಕ, ಖ, ಛ, ಟ, ಠ, ಢ,
ತ, ಥ, ದ, ಧ, ಪ.

[3] ಕ್ಷುರಿಕಂ ತ್ವಷ್ಟ — ಪ.
ಕ್ಷುರಿಕಾ ಚಾಷ್ಟ — ಧ.
ಕ್ಷುರಿಕಾಸ್ತ್ರಂಚ — ಚ.
ಕ್ಷುರಿಕಾದ್ಯಷ್ಟ — ತ.

ಪಾಶುಪತಂ ತು ಪಂಚಾರ್ಣಂ[1]
ವ್ಯೋಮಾಸ್ತ್ರಂ ತು ದಶಾರ್ಣಕಮ್[2] ॥ ॥ ೧೦೩ ॥

ಚತ್ವಾರಿಂಶದಘೋರಾಸ್ತ್ರಂ
ಏವಂ[3] ಪಂಚಾಸ್ತ್ರಮುಚ್ಯತೇ ।
ಸರ್ವಕರ್ಮಾರ್ಹಕಂ[4] ವಿದ್ಯಾತ್[5]
ಪೂಜಕ[6] : ಸರ್ವಕರ್ಮಸು ॥ ॥ ೧೦೪ ॥

ಶಿವಾಂಗಾದಿ[7] ಷಡಂಗಾನಿ
ಕೀರ್ತಿತಾನಿ ಷಡಾನನ ।
ಅಂಗಭೇದೋ[8] ಮಯಾ ಽಽ ಖ್ಯಾತ :
ಮಂತ್ರಜಾತ[9]ಮಥ[10] ಶೃಣು ॥ ॥ ೧೦೫ ॥

ಪಾಶುಪತಾಸ್ತ್ರ ಮಂತ್ರದಲ್ಲಿ ಐದಕ್ಷರಗಳೂ, ವ್ಯೋಮಾಸ್ತ್ರ ಮಂತ್ರದಲ್ಲಿ ಹತ್ತಕ್ಷರಗಳೂ ಇವೆ. ॥ ೧೦೩ ॥

ಅಘೋರಾಸ್ತ್ರ ಮಂತ್ರದಲ್ಲಿ ನಲವತ್ತು ವರ್ಣಗಳಿವೆ. ಸಮಸ್ತತತ್ವಗಳಿಗೂ ಜನ್ಮಸ್ಥಲವಾದ ಮಹಾಲಿಂಗವನ್ನು ಪೀಠದಲ್ಲಿ ಆರಾಧಿಸುವ ಬಾಹ್ಯಪೂಜಕನಾದ ಶುದ್ಧಶೈವನು ಈ ಐದೂ ಅಸ್ತ್ರಮಂತ್ರಗಳನ್ನು ಶಿವಪೂಜಾಡಿ ಸಮಸ್ತಕ್ರಿಯೆಗಳಿಗೂ ಅರ್ಹವೆಂದು ಭಾವಿಸಬೇಕು. ॥ ೧೦೪ ॥

ಷಣ್ಮುಖನೇ ಶಿವಾಂಗಾದಿ ಷಡಂಗಗಳನ್ನು ವಿವರಿಸಿದ್ದಾಯಿತು. ॥ ೧೦೫ ॥

ಇನ್ನು ಮಂತ್ರಜಾತವನ್ನು ನಿರೂಪಿಸುವೆನು. ॥ ೧೦೬ ॥

---

[1] ಪಂಚಾಸ್ತ್ರಂ — ಭ.
[2] ದಶಾಕ್ಷರಂ — ಥ.
[3] ಏವ — ಛ,
[4] ಕರ್ಮಾರ್ಣಕಂ — ಚ.
[5] ವಿಂದ್ಯಾತ್ — ಕ, ಘ, ಟ, ಠ, ಢ, ತ, ಥ, ದ, ಧ.
[6] ಪೂಜಕಂ — ಢ, ದ, ಪ.
[7] ಶಿವಾಂಗಾನಿ — ಗ. ಝ.
[8] ಅಂಗಭೇದೋ ಮಯಾಽಽಖ್ಯಾತ :– ಝ
ಅಂಗಭೇದಮಿದಂ ಖ್ಯಾತಂ — ಧ.
ಅಂಗಭೇದಮಿದಂ ಪ್ರೋಕ್ತಂ —ಪ.
[9] ಮಂತ್ರಭೇದ — ಥ.
[10] ಮತ :—. ಥ, ಧ.

ಇತಿ ಶ್ರಿ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರ ಗ್ರಂಥ
ಸಂಹಿತಾಯಾಂ ಅಂಗಭೇದೋ ನಾಮ
ಅಷ್ಟಮ : ಪಟಲ :

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ
ಸಂಹಿತಾಯಾಂ ಅಂಗಭೇದೋ ನಾಮ
ಅಷ್ಟಮಃ ಪಟಲ :

ಅಥ ಮಂತ್ರಜಾತಪಟಲಃ

ನವಮಃ

[1]ವಿಷ್ಣು ಬ್ರಹ್ಮ[2] ಸುರೇಂದ್ರ ಚಂದ್ರ[3]ರವಿಭಿಃ ಸದ್ಭೂತಿಮದ್ಭಿಃ
ಪರೈ[4]ಃ
ದೇವಾದ್ಯೈಃ ಪರಮಂತ್ರವಿದ್ಭಿರಖಿಲೈಃ[5] ಸದ್ಭಕ್ತಿಮದ್ಭಿಃ
ನೃಭಿಃ ।
ಸದ್ಭಿಃ ಸತ್ಪಥ[6]ವರ್ತಿಭಿಃ[7] ಮನುಮುನಿವ್ರಾತೈಃ[8] ಉಪಾಸ್ಯಂ
ಮಹತ್
ಶ್ರೀಲಿಂಗಂ ಶಿವತತ್ತ್ವ ಮುಖ್ಯ ನಿಲಯಂ ಹೃದ್ಯಂ ಪ್ರಪದ್ಯೇ
ನಿಶಮ್[9] ॥ ॥ ೧ ॥

ವಿಷ್ಣು ಬ್ರಹ್ಮ ದೇವೇಂದ್ರ ಚಂದ್ರ ಸೂರ್ಯರು, ಮಹಾವಿಭೂತಿ ಶಾಲಿಗಳು, ದೇವಾದಿಗಳು, ಪ್ರಾಸಾದಾದಿ ಮಂತ್ರಜ್ಞರು, ಶ್ರೇಷ್ಠ ಭಕ್ತಿಯನ್ನುಳ್ಳ ಮಾನವರು, ಸತ್ಪುರುಷರು, ಸನ್ಮಾರ್ಗಗಾಮಿಗಳು, ಮನುಗಣ, ಮುನಿಗಣ ಈ ಎಲ್ಲರೂ ಸೇವಿಸುವ ಪರಮಪೂಜ್ಯವಾದ ಶಿವತತ್ತ್ವಕ್ಕೆ ಮುಖ್ಯಸ್ಥಾನವಾದ ಮನೋಹರವಾದ ಶ್ರೀ ಶಿವ ಲಿಂಗವನ್ನು ನಾನು ಸದಾ ಭಜಿಸುತ್ತೇನೆ. ॥ ೧ ॥

---

[1] ಈ ಪದ್ಯ—ಖ, ಝ, ಫ, ಪುಸ್ತಕಗಳಲ್ಲಿಲ್ಲ.

[2] ಬ್ರಹ್ಮ ವಿಷ್ಣು—ಗ, ಚ.

[3] ಇಂದ್ರ—ಛ.

[4] ಪದ್ವೈಃ—ಧ.

[5] ರ ಪರೈಃ—ಗ, ಚ.

[6] ಸತ್ಪದ—ಕ
ತತ್ಪಥ—ಪ

[7] ವರ್ತ್ಮಗಭಿಃ—ಗ, ಚ.

[8] ಮುನಿಮುನೀಂದ್ರಾದ್ಯೈಃ—ಧ

[9] ಪ್ರಪದ್ಯೇ ಧಿಯಾ—ಗ, ಚ, ಜ.

ಅಥಾತ : ಸಂಪ್ರವಕ್ಷ್ಯಾಮಿ
ಮಂತ್ರಜಾತವಿಧಿಂ ಶೃಣು[1] ।
ಯಸ್ಮಾನ್ಮಂತ್ರಾಶ್ಚ ಜಾಯನ್ತೇ[2]
ಮಂತ್ರಜಾತಮಿತಿ ಸ್ಮೃತಮ್[3] ॥ ॥ ೧ ॥

ತಸ್ಮಾನ್ಮನ್ತ್ರ ಮಯಂ ಲಿಂಗಂ
ವಕ್ಷ್ಯೇ ಸಂಕ್ಷೇಪತ : ಶೃಣು ।
ಸರ್ವಲೋಕ ಹಿತಾರ್ಥಾಯ
ಸರ್ವಪ್ರಾಣಿ ಹಿತಾಯ ಚ ॥ ॥ ೨ ॥

ಸರ್ವಮನ್ತ್ರ[4]ಪ್ರಸಿದ್ಧ್ಯರ್ಥಂ
ಭುಕ್ತಿ ಮುಕ್ತ್ಯರ್ಥ ಮುಚ್ಯತೇ ।

ಎಲೈ ಷಣ್ಮುಖನೇ ! ಅಂಗಭೇದನಿರೂಪಣದ ತರುವಾಯ ಮಂತ್ರಜಾತವಿಧಿಯನ್ನು ನಿರೂಪಿಸುವೆನು. ಸೃಷ್ಟಿಸ್ಥಿತಿ ಸಂಹಾರಸ್ಥಾನವಾದ ಯಾವಲಿಂಗದಿಂದ ಸಮಸ್ತ ದೇವತಾರೂಪವಾದ ಮಂತ್ರಗಳು ಮೂಡುತ್ತವೆಯೋ ಆ ಲಿಂಗವು ಮಂತ್ರಜಾತವೆನಿಸುತ್ತದೆ. ॥ ೧ ॥

ಆದ್ದರಿಂದ ಜಗಜ್ಜನ್ಮಾದಿ ಸ್ಥಲವೆನಿಸಿದ ಶಿವಲಿಂಗವು ಮಂತ್ರಮಯವಾದುದು. ಸರ್ವಲೋಕಹಿತ, ಸರ್ವಾತ್ಮಹಿತ, ॥ ೨ ॥

ಸರ್ವಮಂತ್ರ ಸಿದ್ಧಿ, ಭುಕ್ತಿ ಮತ್ತು ಮುಕ್ತಿಗಳಿಗಾಗಿ ಆ ಮಂತ್ರಮಯವಾದ ಲಿಂಗದ ಉದ್ಧಾರವನ್ನು ಸಂಕ್ಷೇಪವಾಗಿ ನಿರೂಪಿಸುವೆನು. ಗೋಮಯಲಿಪ್ತವಾದ

---

[1] ಮಂತ್ರಜಾತಂ ತತಃ ಶೃಣು—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.
ಮಂತ್ರಜಾತಮಥ ಶೃಣು—ಗ, ಚ.
ಮಂತ್ರಜಾತಂ ಷಡಾನನ—ಫ.
[2] ಮಂತ್ರಾಣಿ ಜಾಯ ತೇ ಯಸ್ಮಾತ್—ಕ, ಗ, ಚ.
ಮಂತ್ರಶ್ಚ ಜಾಯ ತೇ ಯಸ್ಮಾತ್—ಖ, (ಪಾ)
ಯಸ್ಮಾತ್ಮಂತ್ರಾಣಿ ಜಾಯಂತೇ—ಧ, ಪ.
ಯತೋ ಮಂತ್ರಾಣಿ ಜಾಯಂತೇ—ಚ.
[3] ಮತಃ ಸ್ಮೃತಂ—ಚ.
ಇಲ್ಲಿಂದ 'ಇದಂಮತಂ' (ಶ್ಲೋ 22) ವರೆಗೆ ಫ, ಪುಸ್ತಕದಲ್ಲಿಲ್ಲ.
[4] ತಂತ್ರಮಂತ್ರ—ಧ.

ಶಾಲಿಪಿಷ್ಟಾಕ್ತ ಸೂತ್ರೇಣ
ಸೂತ್ರಪಾತಮಥಾಚರೇತ್[1] ॥ ॥ ೪ ॥

ಗೋಮಯಾಲೇಪಿತೇ[2] ಕ್ಷೇತ್ರೇ
ನಿಮ್ನೋನ್ನತ ವಿವರ್ಜಿತೇ ।
ಪ್ರಾಕ್ ಸೂತ್ರಾಣಿ ಸಪ್ತದಶ
ತಥೈವೋದಗ್ಗತಾನಿ ಚ[3] ॥ ॥ ೫ ॥

ಪಂಕ್ತಯ : ಷೋಡಶ ಸ್ಯುಸ್ತಾ :
ಪ್ರಾಗುತ್ತರ ಮುಖಾಸ್ತಥಾ[4] ।
ಷಟ್ಪಂಚಾ ಶತ್ಸಮಾಧಿಕ್ಯ
ಕೋಷ್ಠಾನಿ ದ್ವಿಶತಾನಿ ಚ ॥ ॥ ೬ ॥

ಪಶ್ಚಿಮಾದಿಂದ್ರ ಪರ್ಯನ್ತಂ[5]
ಲಿಂಗಾರ್ಥಂ ವೀಥಿಕಾಸ್ತ್ರ್ಯಜೇತ್[6] ।

ತಗ್ಗುದಿಣ್ಣೆಗಳಿಲ್ಲದ ಸ್ಥಣ್ಡಿಲಪ್ರದೇಶದಲ್ಲಿ ಪಟ್ಟಸೂತ್ರ (ರೇಷ್ಮೆದಾರ)ವನ್ನು ಅಕ್ಕಿಹಿಟ್ಟನಲ್ಲಿ ಅದ್ದಿ ಎಳೆಗಳು ಬೀಳುವಂತೆ ಮಿಡಿಯುವುದು. ಪೂರ್ವಪಶ್ಚಿಮವಾಗಿ ಹದಿನೇಳು ಸೂತ್ರಗಳನ್ನೂ ಮಿಡಿಯುವುದು. ॥ ೪–೫ ॥

ಹೀಗೆ ಮಿಡಿದರೆ ಪೂರ್ವಪಶ್ಚಿಮ ಮುಖವಾಗಿಯೂ, ಮತ್ತು ದಕ್ಷಿಣೋತ್ತರ ಮುಖವಾಗಿಯೂ, ಹದಿನಾರು ಹದಿನಾರು ಪಂಕ್ತಿಗಳಾಗುತ್ತವೆ, ಈ ಹದಿನಾರು ಪಂಕ್ತಿಗಳಲ್ಲಿ ಒಟ್ಟು ಇನ್ನೂರ ಐವತ್ತಾರು ಕೋಷ್ಠಕ (ಚತುರಸ್ರ) ಗಳಾಗುತ್ತವೆ. ॥ ೬ ॥

ಪಶ್ಚಿಮದಿಂದ ಪೂರ್ವದವರೆಗೆ ಲಿಂಗನಿರ್ಮಾಣಕ್ಕಾಗಿ ವೀಥಿ (ಬೀದಿ) ಗಳನ್ನು

---

[1] ಸೂತ್ರಪಾತ ಮುದಾಚರೇತ್—ಟ.

[2] ಗೋಮಯಾಲೇಪನೇ—ಥ.

[3] ಪ್ರಾಕ್ ಪಶ್ಚಿಮಾಃ ಷೋಡಶಸ್ಯುಃ ಪ್ರಾಗುತ್ತರಮುಖಾಸ್ತಥಾ—ಗ, ಚ, ಜ.
ಪ್ರಾಚೀಸ್ತಂತರ್ೂ ಯಥಾಸಪ್ತದಶೋತ್ತರಗತಾಂಸ್ತಥಾ—ಝ.

[4] ಪ್ರಾಙ್ಮುಖಾಶ್ಚೋತ್ತರಾಮುಖಾಃ—ಖ, ಗ, ಫ.
ಪ್ರಾಗುದಙ್ಮುಖಾಸ್ತಥಾ—ಕ, ಘ, ಛ, ಟ, ಠ, ಢ, ತ, ದ, ಧ, ಪ.

[5] ಪಶ್ಚಿಮಾದೀಂದ್ರಪರ್ಯಾಂತಂ—ಗ, ಝ.
ಪಶ್ಚಿಮಾದ್ರಿಪರ್ಯಂತಂ—ಘ, ಟ.

[6] ವೀಥಿಕಾಂ ತ್ರ್ಯಜೇತ್—ಗ, ಚ, ಝ.
ವೀಥಿಕಾಃ ಸೃಜೇತ್—ಢ.

ಪಶ್ಚಾಚ್ಚತ್ವಾರಿ ಚತ್ವಾರಿ
ವೀಥ್ಯೋ :[1] ಕೋಷ್ಠಾನಿ ಮಧ್ಯಮೇ ॥ ॥ ೭ ॥

ಸಂರಕ್ಷ್ಯ ಪಾರ್ಶ್ವದ್ವಿತಯೇ[2]
ಷಟ್ ಷಟ್ ಕೋಷ್ಠಾನಿ ಲೋಪಯೇತ್ ।
ತದೂರ್ಧ್ವ[3] ಪಂಕ್ತಿಂ ಸಂರಕ್ಷ್ಯ
ತದೂರ್ಧ್ವಂ[4] ದ್ವಾದಶ[5]ಕ್ಷಿಪೇತ್ ॥ ॥ ೮ ॥

ಪಾರ್ಶ್ವಯೋರುಭಯೋ ಸ್ತತ್ರ [6]
ದ್ವೆದ್ವೇ ಕೋಷ್ಠೇ ಚ[7] ಲೋಪಯೇತ್ ।

ಬಿಡಬೇಕು. ಮಧ್ಯದಲ್ಲಿ ಎರಡೆರಡು ವೀಥಿಗಳ ನಾಲ್ಕು ನಾಲ್ಕು ಕೋಷ್ಠಗಳನ್ನು ಉಳಿಸಿಕೊಂಡು, ॥ ೭ ॥

ಅವುಗಳ ಎರಡೂ ಪಾರ್ಶ್ವಗಳಲ್ಲಿ ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಲೋಪಗೊಳಿಸಿದ ಪಂಕ್ತಿಗಳ ಮುಂದಣ ಪಂಕ್ತಿಯನ್ನುಳಿಸಿಕೊಂಡು ಅದರಲ್ಲಿ ಹನ್ನೆರಡು ಕೋಷ್ಠಕಗಳನ್ನು ರಕ್ಷಿಸಿಕೊಂಡು ॥ ೮ ॥

ಅದರ ಎರಡೂ ಪಾರ್ಶ್ವಗಳಲ್ಲಿ ಎರಡೆರಡು ಕೋಷ್ಠಗಳನ್ನು ಲೋಪಗೊಳಿಸಬೇಕು.

---

[1] ವಿಥ್ಯೋಃ—ಘ, ಟ, ಛ, ದ, ಧ.
ವಿಧ್ಯಃ— ಡ, ಪ.
ವೀಥ್ಯಾಃ—ಢ.
ವೀಥ್ಯಃ—ಗ, ಚ, ಜ, ಝ.

[2] ಪಾರ್ಶ್ವದ್ವಿತಯೋಗಃ—ಗ, ಚ.
ಪಾರ್ಶ್ವದ್ವಿತೀಯೋಃ—ಕ.
ಪಾರ್ಶ್ವದ್ವಿತಯ ಯೋಃ—ಢ.

[3] ತದೂರ್ಧ್ವಂ—ಥ.
ತದೂರ್ಧ್ವೇ—ಟ.

[4] ತದೂರ್ಧ್ವೇ—ಗ, ಚ, ಝ.

[5] ದ್ವಾದಶಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ.

[6] ತಸ್ಯಾಃ ಪಾರ್ಶ್ವಯೋರುಭಯೋಃ—ಠ, ಢ, ಥ.
ಪಾರ್ಶ್ವಯೋರುಭಯೋ ಸ್ತಸ್ಯಾಃ—ಕ, ಖ, ದ, ಪ.
ಪಾರ್ಶ್ವಯೋದುಭಯೋಸ್ತಸ್ಯಾ—ಘ, ಛ, ಟ, ತ, ದ.
ಕೋಷ್ಠಾನಿ—ಗ, ಚ, ಝ.

[1]ತದೂರ್ಧ್ವೇ ದಶಕೋಷ್ಠಾನಿ
ರಕ್ಷೇತ್[2] ಪಾರ್ಶ್ವತ್ರಯಂ[3] ತ್ಯಜೇತ್ ॥ ॥ ೯ ॥

[4]ತತ: ಷಟ್ ಕೋಷ್ಠಕಂ ರಕ್ಷೇತ್[5]
ಪಾರ್ಶ್ವಯೋ: ಪಞ್ಚಪಞ್ಚ ಚ[6] ।
[7]ಲೋಪಯೇಚ್ಚ ತದೂರ್ಧ್ವೇ ತು
ರಕ್ಷೇತ್[8] ಚತ್ವಾರಿ ಪಾರ್ಶ್ವಯೊ: ॥ ॥ ೧೦ ॥

ಷಟ್ ಷಟ್ ಕೋಷ್ಠಾನಿ[9] ಸಂತ್ಯಾಜ್ಯ[10]
ತದೂರ್ಧ್ವೇ ತದ್ವದಾಚರೇತ್[11]

ಅದರ ಮುಂದಿನ ಪಂಕ್ತಿಯಲ್ಲಿ ಹತ್ತು ಕೋಷ್ಠಗಳನ್ನುಳಿಸಿಕೊಂಡು ಅದರ ಎರಡೂ ಪಾರ್ಶ್ವದಲ್ಲಿ ಮೂರು ಮೂರು ಕೋಷ್ಠಗಳನ್ನು ಲೋಪಗೊಳಿಸಬೇಕು. ॥ ೯ ॥

ಆದರ ಮುಂದಿನ ಪಂಕ್ತಿಯಲ್ಲಿ ಆರು ಕೋಷ್ಠಗಳನ್ನುಳಿಸಿಕೊಂಡು, ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ಐದೈದು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಿನ ಪಂಕ್ತಿಯಲ್ಲಿ ನಾಲ್ಕು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ॥ ೧೦ ॥

ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಣ ಪಂಕ್ತಿಯಲ್ಲಿಯೂ ಹಿಂದಿನಂತೆ ನಾಲ್ಕು ಕೋಷ್ಠಗಳನ್ನುಳಿಸಿಕೊಂಡು, ಆ ಪಂಕ್ತಿಯ ಎರಡು

---

[1] ಈ ಅರ್ಧಪದ್ಯ—ತ, ಪುಸ್ತಕದಲ್ಲಿಲ್ಲ.

[2] ರಕ್ಷಯೇತ್—ಛ.

[3] ಪಾರ್ಶ್ವದ್ವಯಂ—ಥ.

[4] ಇಲ್ಲಿಂದ ತದದ್ವಾಚರೇತ್ (ಶ್ಲೋ ೧೧) ವರೆಗೆ ತ. ಪುಸ್ತಕದಲ್ಲಿಲ್ಲ.

[5] ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.

[6] ಪಂಚ ಲೋಪಯೇತ್—ಕ.

[7] ಇಲ್ಲಿಂದ 'ಲೋಪಯೇತ್' (ಶ್ಲೋ-೧೧) ವರೆಗೆ ಕ, ಚ. ಪುಸ್ತಕಗಳಲ್ಲಿಲ್ಲ.

[8] ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಠ, ಡ, ಢ, ತ, ಥ, ದ, ಫ.
ರಕ್ಷಯೇತ್—ದ, ರಕ್ಷ್ಯಃ—ಟ.

[9] ಷಟ್‌ಕೋಷ್ಠಾಽಚ—ಗ, ಚ, ಝ.

[10] ಸಂತ್ಯಕ್ತ್ವ—ಘ, ಛ, ಠ, ಢ, ಥ, ದ, ಧ.

[11] ಊರ್ಧ್ವೇ ತು—ಪ.

ತತಃ ಷಟ್ ಕೋಷ್ಠಕಂ ರಕ್ಷೇತ್[1]
ಪಾರ್ಶ್ವಯೋಃ ಪಞ್ಚ ಲೋಪಯೇತ್[2] ॥ ॥ ೧೧ ॥

[3]ತದೂರ್ಧ್ವೇ ದಶ ಸಂರಕ್ಷ್ಯ[4]
ಪಾರ್ಶ್ವಯೋಃ ತ್ರಿ [ತ್ರೀಣಿ] ಲೋಪಯೇತ್
ತದೂರ್ಧ್ವೇ[5] ದ್ವಾದಶಂ [ಶಾ] ರಕ್ಷೇತ್[6]
ದ್ವೇದ್ವೇ ಪಾರ್ಶ್ವೇ ಚ ಲೋಪಯೇತ್ ॥ ॥ ೧೨ ॥

ತದೂರ್ಧ್ವಂ[7] ಪಂಕ್ತಿಂ ಸಂರಕ್ಷ್ಯ
ತತೋ ಲಿಂಗಂ ದ್ವಿಪಂಕ್ತಿತಃ ।

ಪಾರ್ಶ್ವಗಳಲ್ಲಿಯೂ ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಆದರ ಮುಂದಿನ ಪಂಕ್ತಿಯಲ್ಲಿ ಆರು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ಐದೈದು ಕೋಷ್ಠಗಳನ್ನು ಲೋಪಮಾಡಬೇಕು. ॥ ೧೧ ॥

ಈ ಆರು ಕೋಷ್ಠಗಳ ಪಂಕ್ತಿಯ ಮುಂದಿನ ಪಂಕ್ತಿಯಲ್ಲಿ ಹತ್ತು ಕೋಷ್ಠಗಳನ್ನು ಉಳಿಸಿಕೊಂಡು ಆ ಪಂಕ್ತಿಯ ಎರಡೂ ಪಾರ್ಶ್ವದಲ್ಲಿ ಮೂರು ಮೂರು ಕೋಷ್ಠಗಳನ್ನು ಲೋಪಗೊಳಿಸಬೇಕು. ಆದರ ಮುಂದಿನ ಪಂಕ್ತಿಯಲ್ಲಿ ಹನ್ನೆರಡು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡೂ ಪಾರ್ಶ್ವಗಳಲ್ಲಿ ಎರಡೆರಡು ಕೋಷ್ಠಗಳನ್ನು ಲೋಪಗೊಳಿಸಬೇಕು. ॥ ೧೨ ॥

ಹನ್ನೆರಡು ಕೋಷ್ಠಗಳ ಪಂಕ್ತಿಯ ಮುಂದಿನ ಪಂಕ್ತಿಯನ್ನು ಉಳಿಸಿಕೊಳ್ಳಬೇಕು. ಈ ಪಂಕ್ತಿಯ ತರುವಾಯ ಎರಡು ಪಂಕ್ತಿಗಳಿಂದ ಲಿಂಗಾಕಾರವಾಗುತ್ತದೆ.

---

[1] ಇದಾದನಂತರ—ಗ, ಚ, ಝ. ಪುಸ್ತಕಗಳಲ್ಲಿಲ್ಲ
"ತದೂರ್ಧ್ವ ಪಂಕ್ತಿದ್ವಿತಯೇ
ಚತುಷ್ಕೋಷ್ಠಾನಿ ರಕ್ಷಯೇತ್ ।
ಪಾರ್ಶ್ವಯೋಶ್ಚ ದ್ವಯೋಃ ಷಷ್ಠ
ಕೋಷ್ಠಾನಿ ಚ ಪರಿತ್ಯಜೇತ್ ॥"
ಎಂಬ ಶ್ಲೋಕವು ಇದೆ. ಆದರೆ ಇತರ ಯಾವ ಪುಸ್ತಕದಲ್ಲೂ ಇಲ್ಲವಾದ್ದರಿಂದ ಇದನ್ನು ಮೂಲಕ್ಕೆ ಸೇರಿಸಲಿಲ್ಲ.
ಈ ಅರ್ಧಪದ್ಯವು —ತ. ಪುಸ್ತಕದಲ್ಲಿಲ್ಲ.

[2] ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ.

[3] ಇಲ್ಲಿಂದ 'ಪೀಠಕಂ' (೧೪) ವರೆಗೆ—ಪ. ಪುಸ್ತಕದಲ್ಲಿಲ್ಲ.

[4] ಸಂರಕ್ಷೇತ್—ಖ.

[5] ತದೂರ್ಧ್ವಂ—ಫ.

[6] ರಕ್ಷ್ಯ—ಘ, ಛ, ಟ, ಠ, ಢ, ಥ.

[7] ತದೂರ್ಧ್ವಂ—ಕ.
ತದೂರ್ಧ್ವೇ—ಢ, ದ, ಧ.

ಪಂಕ್ತ್ಯೋ : ಚತ್ವರಿ[1] ಚತ್ವಾರಿ
ಕೋಷ್ಠಾನ್ಯೂರ್ಧ್ವೇ[2] ಚ ರಕ್ಷಯೇತ್[3] ॥ ॥ ೧೩ ॥

ಷಟ್ ಷಟ್ ಕೋಷ್ಠಾನಿ ಪಂಕ್ತ್ಯೋಶ್ಚ
ಪಾರ್ಶ್ವಯೋ ಶುಭಯೋ ಸ್ತ್ಯಜೇತ್[4] ।
ಏವಂ ಲಿಂಗಂ[5] ಸಮಾಸಾದ್ಯ
ಬ್ರಹ್ಮ ವಿಷ್ಣ್ವೀಶ ಪೀಠಕಮ್[6] । ॥ ೧೪ ॥

ಪಟ್ಟಿಕಾ ಕಂಜ[7] ಕಂಠಾಬ್ಜ
ಪಟ್ಟ ಕಾಜ್ಯ ಪ್ರಧಾರಿ ಕಾ :[8]

ಈ ಎರಡು ಪಂಕ್ತಿಗಳಲ್ಲಿ ನಾಲ್ಕುನಾಲ್ಕು ಕೋಷ್ಠಗಳನ್ನುಳಿಸಿಕೊಂಡು, ॥ ೧೩ ॥

ಆ ಎರಡೂ ಪಂಕ್ತಿಗಳ ಎರಡೂ ಪಾರ್ಶ್ವಗಳಲ್ಲಿ ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಹೀಗೆ ಸೃಷ್ಟಿಸ್ಥಿತಿಲಯ ಕರ್ತೃಗಳಾದ ಬ್ರಹ್ಮ ವಿಷ್ಣುರುದ್ರರೂಪವಾದ ಪೀಠವನ್ನುಳ್ಳ ಲಿಂಗವನ್ನು ನಿರ್ಮಿಸಬೇಕು. ॥ ೧೪ ॥

ಎಲೈ ಷಣ್ಮುಖನೇ ! ಅಧಃಪಟ್ಟಿಕೆ ಅಧಃಕಂಜ ಕಣ್ಠ (ವೃತ್ತ) ಊರ್ಧ್ವಾಬ್ಜ,

---

[1] ಪಂಕ್ತಿಶ್ಚತ್ವಾಂ—ಟ.

[2] ನ್ಯೂರ್ಧ್ವಗಂ—ಗ, ಚ, ಝ.

[3] ಇಲ್ಲಿಂದ ಮುಂದೆ ಪ. ಪುಸ್ತಕವನ್ನುಳಿದ ಇತರ ಪುಸ್ತಕಗಳಲ್ಲಿ ॥ಏಕಾ ಸರ್ವಾಂತರಾ ಶಕ್ತಿಃ ಕರೋತಿ ವಿವಿಧಂ ಜಗತ್ । ಆಸ್ಥಾಯ ಬ್ರಹ್ಮಣೋರೂಪಂ ಮನ್ಮಯೀ ಮದಧಿಷ್ಠಿತಾ॥" ಎಂಬ ಶ್ಲೋಕವೂ, ಇದಾದ ನಂತರ—ಎಲ್ಲ ಮಾತೃಕೆಗಳಲ್ಲೂ ॥ ಅನ್ಯಾ ಚ ಶಕ್ತಿರ್ವಿಪುಲಾ ಸಂಸ್ಥಾಪಯತಿ ಮೇ ಜಗತ್ । ಭೂತ್ವಾ ನಾರಾಯಣೋಽನಂತಃ ಜಗನ್ನಾಥೋ ಜಗನ್ಮಯಃ । ತೃತೀಯಾ ಮಹತೀ ಶಕ್ತಿಃ ನಿಹಂತಿ ಸಕಲಂ ಜಗತ್ । ತಾಮಸೀ ಮೇ ಸಮಾಖ್ಯಾತಾ ಕಾಲಾಖ್ಯಾ ರುದ್ರರೂಪಿಣೀ॥ ಎಂಬ ಶ್ಲೋಕಗಳೂ ಹೆಚ್ಚಾಗಿವೆ.

[4] ಪಾರ್ಶ್ವಯೋರುಭಯೋಶ್ಚೈವ ಷಟ್‌ಕೋಷ್ಠಾನಿ ಪರಿತಜ್ಯೇತ್—ಗ, ಚ, ಝ.
ಷಟ್‌ಷಟ್ ಕೋಷ್ಠಾಶ್ಚ ಪಂಕ್ತ್ಯೋಶ್ಚ ಪಾರ್ಶ್ವಯೋರುಭಯೋಸ್ತ್ಯಜೇತ್—ಠ, ತ, ಧ.
ಷಟ್‌ಷಟ್ ಕೋಷ್ಠಾನಿ ಪಂಕ್ತ್ಯಾಶ್ಚ ಪಾರ್ಶ್ವಯೋರುಭಯೋಸ್ತ್ಯಜೇತ್—ಕ.

[5] ಅಂಗಂ—ಖ.

[6] ಪೀಠಿಕಂ—ಢ.

[7] ಕರ್ಣ—ಗ, ಚ, ಝ.

[8] ಪ್ರಧಾರಿಕಾ—ಕ, ಘ, ಛ, ಠ, ಢ, ತ, ಪ.

ಷಡಂಗಾನಿ ಚ ಪೀಠಸ್ಯ
    ಕ್ರಮಾತ್ ಪ್ರೋಕ್ತಾನಿ ಷಣ್ಮುಖ ॥ ॥ ೧೫ ॥

ಮಂತ್ರನ್ಯಾಸ ಕ್ರಮಂ ಲಿಂಗೇ
    ಶೃಣು ವತ್ಸ ಸಮಾಸತ[1] : ।
ಅಂಗಭೇದೇ[2] ಷಡಂಗಾನಿ
    ಪ್ರೋಕ್ತಮಂತ್ರಾಣಿ ವಿನ್ಯಸೇತ್ ॥ ॥ ೧೬ ॥

ಹೃದಯಂ ಪಟ್ಟಿಕಾಯಾಂ ತು
    ಶಿರ : ಕಂಜೇ ಶಿಖಾಂ ಗಲೇ
ಕವಚಂ ಕಮಲೇ ನೇತ್ರಂ
    ಪಟ್ಯಾಮಸ್ತ್ರಂ ಚ ಧಾರಿಕೇ[3] ॥ ॥ ೧೭ ॥

ಪ್ರೋಕ್ತ : ಷಡಂಗವಿನ್ಯಾಸ :[4]
    ವಕ್ಷ್ಯೈ ಮ್ಯಾಧಾರ[5] ಷಟ್ ಕ್ರಮಾತ್ ।

ಊರ್ಧ್ವಪಟ್ಟಿಕೆ ಮತ್ತು ಆಜ್ಯಪ್ರಧಾರಿಕೆಯೆಂದು ಪೀಠಕ್ಕೆ ಕ್ರಮವಾಗಿ ಆರು ಅಂಗಗಳಿವೆ. ॥ ೧೫ ॥

ಇನ್ನು ಮುಂದೆ ಶಿವಲಿಂಗದಲ್ಲಿ ಮಂತ್ರನ್ಯಾಸ ಕ್ರಮವನ್ನು ತಿಳಿಸುವೆನು. ಅಂಗಭೇದಪಟಲದಲ್ಲಿ ಷಡಂಗಗಳೆಂದು ನಿರೂಪಿತವಾದ ಮಂತ್ರಗಳನ್ನು ಶಿವಲಿಂಗದಲ್ಲಿ ವಿನ್ಯಾಸಮಾಡಬೇಕು. ॥ ೧೬ ॥

ಅಧಃ ಪಟ್ಟಿಕೆಯಲ್ಲಿ ಹೃದಯಮಂತ್ರವನ್ನೂ, ಅಧಃ ಕಂಜದಲ್ಲಿ ಶಿರೋಮಂತ್ರವನ್ನೂ, ಕಣ್ಠದಲ್ಲಿ ಶಿಖಾಮಂತ್ರವನ್ನೂ ಊರ್ಧ್ವಕಂಜದಲ್ಲಿ ಕವಚಮಂತ್ರವನ್ನು, ಊರ್ಧ್ವಪಟ್ಟಿಕೆಯಲ್ಲಿ ನೇತ್ರಮಂತ್ರವನ್ನೂ, ಆಜ್ಯಪ್ರಧಾರಿಕೆಯಲ್ಲಿ ಅಸ್ತ್ರಮಂತ್ರವನ್ನೂ ನ್ಯಾಸಮಾಡಬೇಕು. ॥ ೧೭ ॥

ಷಡಂಗ ಮಂತ್ರವಿನ್ಯಾಸವನ್ನು ಹೇಳಿದ್ದಾಯಿತು. ಇನ್ನು ಆಧಾರಮೊದಲಾದ

---

[1] ಸಮಾಹಿತಃ—ಜ (ಪಾ)

[2] ಅಂಗಭೇದ—ಗ, ಚ, ಝ.

[3] ಮಸ್ತ್ರಂಪ್ರಧಾರಿಕೇ—ಚ.
ಮಸ್ತ್ರಂ ಚಾಧಾರಿಕೇ—ಪ.

[4] ಪ್ರೋಕ್ತಂ ಷಡಂಗವಿನ್ಯಾಸಂ—ಕ, ಗ, ಛ, ಜ.

[5] ವಕ್ಷ್ಯೇ ಚಾಧಾರ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ.

ಕಂಜಸ್ಯ ಚಾಧ[1] ಆಧಾರಂ[2]
ವಾದಿಸಾನ್ತಂ[3] ಚತುರ್ದಲೇ[4] ॥ ॥ ೧೮ ॥

ಸ್ವಾಧಿಷ್ಠಾನೇ ಚ ಷಟ್ಪತ್ರೇ
ಬಾದಿಲಾನ್ತಂ[5] ಕ್ರಮಾನ್ನ್ಯಸೇತ್[6] ।
ತತೋ ಮಣೌ[7] ದಶದಲೇ
ಡಾದಿ ಫಾನ್ತಂ[8] ನ್ಯಸೇತ್ತ ತಃ[9] ॥ ॥ ೧೯ ॥

ಆರು ಚಕ್ರಗಳನ್ನು ಕ್ರಮವಾಗಿ ಹೇಳುವೆನು ಅಧಃಕಂಜದ ಕೆಳಗಣ ಅಧಃ ಪಟ್ಟಿಕೆಯು ಆಧಾರಸ್ಥಾನ, ನಾಲ್ಕು ಕೋಷ್ಠಗಳೇ ನಾಲ್ಕುದಳಗಳು. ಇವುಗಳಲ್ಲಿ ವ ಶ ಷ ಸ ಗಳೆಂಬ ನಾಲ್ಕು ಅಕ್ಷರಗಳನ್ನು ನ್ಯಾಸಬೇಕು. ॥ ೧೮ ॥

ಅಧಃ ಕಂಜವು ಸ್ವಾಧಿಷ್ಠಾನ, ಆದರ ಆರು ಕೋಷ್ಠಗಳೇ ಆರು ಪತ್ರಗಳು. ಇವುಗಳಲ್ಲಿ ಬ ಭ ಮ ಯ ರ ಲ ಎಂಬ ಆರಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ಸ್ವಾಧಿಷ್ಠಾನದ ಮುಂದಿನಸ್ಥಾನವು ಮಣಿಪೂರಕ. ಇದರ ಹತ್ತು ದಳಗಳಲ್ಲಿ ಡ ಢ ಣ ತ ಥ ದ ಧ ನ ಪ ಫ, ಎಂಬ ಹತ್ತು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ॥ ೧೯ ॥

---

[1] ಕಂಜಸ್ಯಾಧಶ್ಚ—ಥ.
[2] ಕಂಜಸ್ಯಾಧ ಅಥಾಧಾರಂ—ಕ, ಖ, ಛ, ಟ, ಠ, ದ, ಚ.
ಕಂಜಸ್ಯ ಚಾಧಮಾಧಾರೇ—ಥ.
ಕಂಜಸ್ಯ ಚ ಮದಾಧಾರಂ—ತ.
[3] ಶಾಂತಂ—ಧ.
[4] ಚತುರ್ದಶೇ—ಚ.
[5] ವಾದಿಲಾಂತಂ—ಗ, ಚ, ಜ, ಪ.
[6] ತತೋ—ಗ, ಚ, ಜ.
[7] ಇಲ್ಲಿ—ಖ, ಟಿಪ್ಪಣೀ—ಮಣಾ ಮಣಿಪೂರೇ ಹ, ಓ, ಮ, ಉ, ಅ ಎಂದಿದೆ.
[8] ಕಾದಿಬಾಂತಂ—ಥ.
[9] ತತೋ ನ್ಯಸೇತ್—ಗ, ಚ.
ಪ್ರವಿನ್ಯಸೇತ್—ಝ.

[1]ಹೃದಯೇ ದ್ವಾದಶದಲೇ
ಕಾದಿ ಠಾನ್ತಂ ನ್ಯಸೇತ್ತತ[2] : |
ಪಟ್ಯಾಂ ಕಣ್ಠೇ[3] ಷೋಡಶಕ–
ಆದಿವರ್ಗಂ[4] ನ್ಯಸೇತ್ತತ : || || ೨೦ ||

ಆಜ್ಞಾಯಾಂ ದ್ವಿದಲೇ ಚೋರ್ಧ್ವಂ[5]
ಳಕ್ಷಯುಗ್ಮಂ ನ್ಯಸೇತ್ತತ :[6] |
[7]ಇತ್ಯೇಕ ಪಂಚಾಶದ್ವರ್ಣಾ :
ರುದ್ರ ಬೀಜಾನಿ ಮುಖ್ಯತ : || || ೨೧ ||

ಮಣಿಪೂರಕದ ಮುಂದಿನ ಊರ್ಧ್ವಕಂಜವೆಂಬುದು ಹೃದಯಸ್ಥಾನ. ಇದರ ಹನ್ನೆರಡು ದಳಗಳಲ್ಲಿ ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಎಂಬ ಹನ್ನೆರಡು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ಹೃದಯಸ್ಥಾನದ ಮುಂದಿನ ಊರ್ಧ್ವಪಟ್ಟಿಕೆಯೆಂಬ ಕಣ್ಠಸ್ಥಾನದ ಹದಿನಾರು ದಳಗಳಲ್ಲಿ ಅ ಆ ಇ ಈ ಉ ಊ ಋ ೠ ಇ ಇ ಏ ಐ ಓ ಔ ಅಂ ಅಃ ಎಂಬ ಹದಿನಾರು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. || ೨೦ ||

ಕಣ್ಠಸ್ಥಾನದ ಮುಂದಿನ ಆಜ್ಯಪ್ರಧಾರಿಕೆಯೆಂಬ ಆಜ್ಞಾಚಕ್ರದ ನಾಲ್ಕು ಕೋಷ್ಠಗಳ ಮಧ್ಯದ ಎರಡು ಕೋಷ್ಠಗಳಲ್ಲಿ ಳ. ಕ್ಷ ಎಂಬ ಎರಡು ವರ್ಣಗಳನ್ನೂ ಕ್ರಮವಾಗಿ ವಿನ್ಯಾಸಮಾಡಬೇಕು. ಹೀಗೆ ವಿನ್ಯಾಸಮಾಡಿದ ಐವತ್ತೊಂದು ಅಕ್ಷರಗಳು ರುದ್ರಬೀಜಗಳೆನಿಸುತ್ತವೆ. || ೨೧ ||

---

[1] ಈ ಅರ್ಧಪದ್ಯ ಧ. ಪುಸ್ತಕದಲ್ಲಿಲ್ಲ.
[2] ಠಾಂತಂ ಪ್ರವಿನ್ಯಸೇತ್—ಗ, ಚ, ಝ.
[3] ಕರ್ಣೇ—ಗ, ಚ, ಝ.
[4] ಸರ್ಗಂ—ಕ, ಘ, ಛ, ಟ, ಠ, ಢ, ತ.
[5] ಚೋರ್ಧ್ವೇ—ಕ, ಖ, ಘ, ಛ, ಝ, ಠ, ತ, ಥ, ದ, ಧ.
[6] ಹಕ್ಷಯುಗ್ಮಂ ನ್ಯಸೇತ್ಯತಃ—ಗ, ಚ.
ಹಂಕ್ಷಂಯುಗ್ಮಂ ನ್ಯಸೇತ್ತತಃ—ಕ.
ಹಂಕ್ಷಂಯುಗ್ಮಂ ಪ್ರವಿನ್ಯಸೇತ್—ಝ.
[7] ಈ ಅರ್ಧವು—ಖ. ಪುಸ್ತಕದಲ್ಲಿಲ್ಲ.

ಏತಾನಿ ಶಿವಚಕ್ರಾಣಿ
ಶಕ್ತಿಚಕ್ರಾಣ್ಯ ಥೋ ನ್ಯಸೇತ್[1] |
ಆಧಾರಾದಿ ಗಲಾಂತಂ ಚ[2]
ವರ್ಣಾನಿ[3] ಪ್ರ್ಯೂರ್ವವನ್ನ್ಯಸೇತ್[4] || || ೨೨ ||

ಆಜ್ಞಾಯಾಂ ತು ವಿಶೇಷೋಽಸ್ತಿ[5]
ಶಕ್ತಿಪಕ್ಷೇ ಹಳೇ[6] ನ್ಯಸೇತ್ |
ವರ್ಣಾಧಿ[7] ದೇವತಾಸ್ತತ್ರ[8]
ಪೂರ್ವವತ್ಪರಿಕಲ್ಪಯೇತ್ || || ೨೩ ||

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಆಜ್ಞಾ ಎಂಬ ಈ ಆರುಚಕ್ರಗಳಲ್ಲಿ ಶಿವಬೀಜಗಳನ್ನು ವಿನ್ಯಾಸಮಾಡುವುದರಿಂದ ಇವುಗಳಿಗೆ ಶಿವಚಕ್ರಗಳೆಂದು ಹೆಸರು. ಶಿವಚಕ್ರನ್ಯಾಸದ ಅನನ್ತರ ಶಕ್ತಿಚಕ್ರನ್ಯಾಸವನ್ನು ಮಾಡಬೇಕು. ರುದ್ರಬೀಜಗಳೆಂಬ ಈ ಐವತ್ತೊಂದು ಅಕ್ಷರಗಳು ಶಿವಶಕ್ತ್ಯುಭಯರೂಪಗಳಾದುದರಿಂದ ಶಿವಮಂತ್ರೋದ್ಧಾರಕಾಲದಲ್ಲಿ ಶಕ್ತಿ ಬೀಜಗಳೂ ಆಗುತ್ತವೆ. ಆಧಾರ ಸ್ವಾಧಿಷ್ಠಾನ ಮಣಿಪೂರಕ ಆನಾಹತ ವಿಶುದ್ಧಿ ಎಂಬ ಐದು ಚಕ್ರಗಳಲ್ಲಿ ಶಿವ ಚಕ್ರನ್ಯಾಸವನ್ನು ಮಾಡಿದಂತೆ ಶಕಾರಾದಿ ಶಕ್ತಿ ಬೀಜಗಳನ್ನೂ ನ್ಯಾಸಮಾಡಬೇಕು. || ೨೨ ||

ಆಜ್ಞಾ ಚಕ್ರದಲ್ಲಿ ಶಿವಚಕ್ರದ ದೃಷ್ಟಿಯಿಂದ ವಿಶೇಷವಿದೆ. ಶಕ್ತಿ ಚಕ್ರಗಳಲ್ಲಿ ವಿನ್ಯಾಸಮಾಡುವಾಗ ಆಜ್ಞಾ ಚಕ್ರದ ಸಮೀಪದಲ್ಲಿರುವ ಎರಡು ಚಕ್ರಗಳ ಮಧ್ಯದಲ್ಲಿರುವ ಚತುಷ್ಕೋಷ್ಠಗಳ ಮಧ್ಯದ ಎರಡುದಳಗಳಲ್ಲಿ ಳಕಾರಕ್ಷಕಾರಗಳಿಗೆ ಬದಲಾಗಿ ಹಕಾರಳಕಾರಗಳನ್ನು ವಿನ್ಯಾಸಮಾಡಬೇಕು. ಚಕ್ರಭೇದ ಪಟಲದಲ್ಲಿ ಕಲ್ಪಿಸಿರುವಂತೆ ಇಲ್ಲಿಯೂ ರುದ್ರರನ್ನೂ ರುದ್ರ ಶಕ್ತಿಗಳನ್ನೂ ಕಲ್ಪಿಸಿಕೊಳ್ಳಬೇಕು. || ೨೩ ||

---

[1] ಣ್ಯಥೋಽಚ್ಯತೇ—ಗ, ಚ, ಝ.

[2] ಗಲಾಂತಂ ತು—ಥ.

[3] ವರ್ಣಾಂಶ್ಚ—ಥ.

[4] ನ್ಯಸೇದ್ವರ್ಣಾನಿ ಪೂರ್ವವತ್—ಗ, ಚ, ಝ.

[5] ಷಟ್‌ಚಕ್ರಾಣ್ಯಾದಿ ತಾನ್ಯೇವಂ—ಝ.
ಆಜ್ಞಾಯಾಂ ತು ವಿಶೇಷೇಣ—ಗ, ಚ, ಝ.

[6] (ಹ) ಕ್ಷಳಂ—ಚ.
ಹಳಂ—ಪ.

[7] ವರ್ಣಾದಿ—ಗ, ಚ, ಝ.

[8] ದೈವತಂ ತತ್ರ—ಟ, ಠ, ಥ.

ಏವಂ ಷಟ್ಚಕ್ರ ಮಾಖ್ಯಾತಂ
　　ಮೂರ್ತಿಮನ್ತ್ರಂ[1]ನ್ಯ ಸೇತ್ತತ :[2]
ನಾದಂ ಲಿಂಗೇಚ[3] ವಿನ್ಯಸ್ಯ[4]
　　ಬಿನ್ದು ಮಾಜ್ಯಪ್ರಧಾರಿಕೇ[5] ॥ ॥ ೨೪ ॥

ಪಟ್ಯಾದಿ ಕಂಜ ಪರ್ಯನ್ತಂ
　　ಮಕಾರಂ ವಿನ್ಯಸೇತ್ತತ: [6] ।
ವೃತ್ತೇ ತೂಕಾರಂ ವಿನ್ಯಸ್ಯ[7]
　　ಚಾಕಾರಂ[8] ಕಂಜಪಟ್ಟಕೇ[9] ॥ ॥ ೨೫ ॥

ಹೀಗೆ ಆರು ಚಕ್ರಗಳ ನ್ಯಾಸವನ್ನು ಹೇಳಿದ್ದಾಯಿತು. ಚಕ್ರನ್ಯಾಸದ ತರುವಾಯ ಮೂರ್ತಿಮನ್ತ್ರನ್ಯಾಸವನ್ನು ಮಾಡಬೇಕು. ಆಜ್ಯ ಪ್ರಧಾರಿಕೆಯ ಮೇಲಣ ಚತುಷ್ಕೋಷ್ಠಗಳ ಮಧ್ಯದಲ್ಲಿ ಹಕಾರವನ್ನು ವಿನ್ಯಾಸಮಾಡಿ ಓಂಕಾರವನ್ನು ಆಜ್ಯ ಪ್ರಧಾರಿಕೆಯಲ್ಲಿ ವಿನ್ಯಾಸಮಾಡಬೇಕು. ॥ ೨೪ ॥

ಊರ್ಧ್ವಪಟ್ಟಿಕೆ ಮೊದಲಾಗಿ ಊರ್ಧ್ವಕಂಜದವರೆಗೆ ಮಕಾರವನ್ನು ವಿನ್ಯಾಸ ಮಾಡಬೇಕು. ವೃತ್ತವೆಂದು ಕರೆಯುವ ಕಣ್ಠಸ್ಥಾನದಲ್ಲಿ ಉಕಾರವನ್ನೂ ಅಧಃ ಕಂಜಪಟ್ಟಿಕೆಯಲ್ಲಿ ಅಕಾರವನ್ನೂ ವಿನ್ಯಾಸಮಾಡಬೇಕು. ॥ ೨೫ ॥

---

[1] ಮೂರ್ತಂ ತಂತ್ರಂ—ಥ.
ಮೂಲಮಂತ್ರಂ—ಧ.
ಮೂರ್ತಮಂತ್ರಂ—ಘ, ಛ, ಟ, ಢ, ತ, ದ.

[2] ಪ್ರವಿನ್ಯಸೇತ್—ಗ, ಚ, ಝ.

[3] ತು—ಪ.

[4] ವಿನ್ಯಸೇತ್—ಟ.

[5] ಪ್ರಸಾರಿಕೇ—ಗ, ಚ, ಝ, ಥ.

[6] ವಿನ್ಯಸೇತ್ ಕ್ರಮಾತ್—ಗ, ಚ, ಜ, ಝ.

[7] ವೃತ್ತೇ ಉಕಾರಂ ವಿನ್ಯಸ್ಯ—ಗ, ಚ, ಜ, ಝ.
ವೃತ್ತ ತೂಕಾರಾಂ ನ್ಯಸ್ಯ—ಪ.
ವೃತ್ತೇತೂಕಾರಂ ನ್ಯಸ್ತ್ಯ—ಕ, ಘ, ಛ, ಟ, ಠ, ತ, ಥ, ದ.
ವೃತ್ತೇ ಕ್ಷಕಾರಕಂ ನ್ಯಸ್ಯ—ಧ.

[8] ಹಕಾರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ.
ಯಕಾರಂ—ಫ.

[9] ಕಮಲಪಟ್ಟಕೇ—ಕ, ಘ, ಚ, ಟ, ಡ, ತ, ಥ, ದ.
ಕಮಲಪಟ್ಟಕೇ—ಖ.
ಕಂಜಪಟ್ಟಕೇ—ಗ, ಜ, ಝ.

ಸೂಕ್ಷ್ಮ ಪಂಚಾಕ್ಷರಂ ಪ್ರೋಕ್ತಂ[1]
ಸ್ಥೂಲಪಂಚಾಕ್ಷರಂ ಶೃಣು ।
ನಕಾರಾದಿ[2] ಯಕಾರಾನ್ತಂ
ಪಂಚಾರ್ಣಂ ತತ್ರವಿನ್ಯಸೇತ್ ॥ ॥ ೨೬ ॥

ಪಂಚಾಕ್ಷರಮಿದಂ[3] ಪ್ರೋಕ್ತಂ
ಷಡಕ್ಷರ ಮಥೋಚ್ಯತೇ ।
ತಾರಂ[4] ಲಿಂಗೇ ಪ್ರವಿನ್ಯಸ್ಯ
ಪಟ್ಟಿಕಾಯಾಂ ನಕಾರಕಮ್[5] ॥ ॥ ೨೭ ॥

ಮಕಾರ ಮೂರ್ಧ್ವ ಕಂಜೇ ತು[6]
ಶಿಕಾರಂ ವೃತ್ತ ಮಧ್ಯಕೇ[7] ।

ಹೀಗೆ ಹ. ಓಂ ಮ ಉ ಅ ಎಂಬ ಸೂಕ್ಷ್ಮ ಪಂಚಾಕ್ಷರಗಳ ನ್ಯಾಸವನ್ನು ಹೇಳಲಾಯಿತು. ಇನ್ನು ಸ್ಥೂಲ ಪಂಚಾಕ್ಷರಗಳ ನ್ಯಾಸವನ್ನು ತಿಳಿಸುವೆನು, ನ, ಮಃ, ಶಿ, ವಾ, ಯ, ಎಂಬ ಪಂಚಾಕ್ಷರಗಳನ್ನು ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಎಂಬ ಚಕ್ರಗಳ ಸ್ಥಾನಗಳಲ್ಲಿ ಕ್ರಮವಾಗಿ ವಿನ್ಯಾಸಮಾಡಬೇಕು. ॥ ೨೬ ॥

'ನಮಃ ಶಿವಾಯ' ಎಂಬ ಸ್ಥೂಲಪಂಚಾಕ್ಷರನ್ಯಾಸವನ್ನು ಹೇಳಿದ್ದಾಯಿತು. ಇನ್ನು ಷಡಕ್ಷರ ನ್ಯಾಸವನ್ನು ಹೇಳುವೆನು ಶಿವಲಿಂಗದಲ್ಲಿ ಓಂಕಾರವನ್ನೂ ಊರ್ಧ್ವಪಟ್ಟಿಕೆಯಲ್ಲಿ ನಕಾರವನ್ನು ವಿನ್ಯಾಸಮಾಡಬೇಕು. ॥ ೨೭ ॥

ಊರ್ಧ್ವಕಂಜದಲ್ಲಿ ಮಕಾರವನ್ನು, ವೃತ್ತ ಮಧ್ಯದಲ್ಲಿ ಶಿಕಾರವನ್ನು, ಅಧಃ ಕಂಜದಲ್ಲಿ ವಾಕಾರವನ್ನು ಅಧಃಪಟ್ಟಿಕೆಯಲ್ಲಿ ಯಕಾರವನ್ನು ವಿನ್ಯಾಸಮಾಡಬೇಕು.

---

[1] ನ್ಯಸ್ತಂ—ಛ, ಠ, ಘ, ದ, ಧ.
ನ್ಯಸ್ಯ—ಪ.

[2] ಅಕಾರಾದಿ—ಪ.

[3] ಮಿತಿ—ಪ.

[4] ಓಂಕಾರಂ—ಪ.

[5] ಅಕಾರಕಂ—ತ.

[6] ಕಂಠಂ ತು—ಥ.

[7] ಮಧ್ಯಮೇ—ಝ.
ಮಧ್ಯಗೇ—ಗ, ಚ.

ಅಧ: ಕಂಜೇ ಚ ವಾಕಾರಂ[1]
ಚಾಧ: ಪಟ್ಯಾಂ ಯಕಾರಕವ್[2] ॥ ॥ ೨೮ ॥

[3]ಏವಂ ಷಡಕ್ಷರಂ [ಃ] ಪ್ರೋಕ್ತಂ [ಃ]
ಷಡಧ್ವನ್ಯಾಸ[4]: ಉಚ್ಯತೇ ।
ಜಗತ್ಯಾಂ ಭುವನಾಧ್ವಾನಂ
ಪದಾಧ್ವಾನಂ[5] ಚ[6] ಪಂಕಜೇ ॥ ॥ ೨೯ ॥

[7]ವರ್ಣಾಧ್ವಾನಂ ಚ ವೃತ್ತೇತು
ಕಲಾಧ್ವಾನಂ ಚ ಪಂಕಜೇ ।
ತತ್ತ್ವಾಧ್ವಾನಂ ಪಟ್ಟಿಕಾಯಾಂ
ಮನ್ತ್ರಾಧ್ವಾನಂ ಪ್ರಧಾರಿಕೇ[8] ॥ ॥ ೩೦ ॥

ಹೀಗೆ ಮಾಡುವುದರಿಂದ 'ಓಂನಮಃ ಶಿವಾಯ' ಎಂಬ ಷಡಕ್ಷರಮಂತ್ರವನ್ನು ನ್ಯಾಸ ಮಾಡಿದಂತಾಗುತ್ತದೆ. ॥ ೨೮ ॥

ಹೀಗೆ ಷಡಕ್ಷರ ಮನ್ತ್ರನ್ಯಾಸವನ್ನು ನಿರೂಪಿಸಿದ್ದಾಯಿತು. ಇನ್ನು ಭುವನಾದಿ ಷಡಧ್ವನ್ಯಾಸವನ್ನು ಹೇಳುವೆನು. ಪೃಥ್ವೀಸ್ಥಾನವಾದ ಆಧಾರಸ್ಥಾನದಲ್ಲಿ ಭುವನಾಧ್ವಾನವನ್ನೂ, ಅಧಃ ಕಂಜದಲ್ಲಿ ಪದಾಧ್ವಾನವನ್ನೂ. ॥ ೨೯ ॥

ವೃತ್ತವೆಂಬ ಮಣಿಪೂರಕಸ್ಥಾನದಲ್ಲಿ ವರ್ಣಾಧ್ವಾನವನ್ನೂ, ಊರ್ಧ್ವಪಂಕಜದಲ್ಲಿ ಕಲಾಧ್ವಾನವನ್ನೂ ವಿಶುದ್ಧಿಸ್ಥಾನವಾದ ಊರ್ಧ್ವಪಟ್ಟಿಕೆಯಲ್ಲಿ ತತ್ತ್ವಧ್ಯಾನವನ್ನೂ ಆಜ್ಯಪ್ರಧಾರಿಕೆಯಲ್ಲಿ ಮಂತ್ರಾಧ್ವಾನವನ್ನೂ ನ್ಯಾಸಮಾಡಬೇಕು. ॥ ೩೦ ॥

---

[1] ವಕಾರಂ—ಗ, ಚ.

[2] ಮಕಾರಕಂ ಛ.

[3] ಈ ಅರ್ಧಪದ್ಯ—ಕ, ಛ, ಜ, ಟ, ಢ, ತ, ದ, ಪ. ಪುಸ್ತಕಗಳಲ್ಲಿಲ್ಲ.

[4] ನ್ಯಾಸಂ—ಘ, ಠ, ಥ.

[5] ಷಡಾಧ್ವಾನಂ—ದ.

[6] ತು—ಧ.

[7] ಈ ಅರ್ಧಪದ್ಯ—ತ. ಪುಸ್ತಕದಲ್ಲಿಲ್ಲ.

[8] ಪ್ರಸಾರಿಕೇ—ಗ, ಚ, ಝ.

ಏವಂ ಷಡಧ್ವನೋ[1] ನ್ಯಸ್ಯ[2]
ಸರ್ವಮನ್ತ್ರಾತ್ಮಕಂ ಶಿವಮ್[3] ।
ಸಪ್ತಕೋಟಿಮಹಾಮನ್ತ್ರೈಃ
ಮನ್ತ್ರಿತಂ ಲಿಂಗಮುಚ್ಯತೇ ॥ ॥ ೩೧ ॥

ಜ್ಞಾತ್ವಾ ಸಮರ್ಚಯೇನ್ಮನ್ತ್ರೀ[4]
ತ್ವನ್ಯಥಾ[5] ನಿಷ್ಫಲಂ ಭವೇತ್ ।
ಕಾಮಿಕಾದಿಷು ತಂತ್ರೇಷು[6]
ಹ್ಯಷ್ಟಾ[7]ವಿಂಶತಿಭೇದತಃ[8] ॥ ॥ ೩೨ ॥

ಪ್ರೋಕ್ತಾನಿ ಮನ್ತ್ರಜಾತಾನಿ
ತತ್ಸರ್ವಂ ವಿನ್ಯಸೇದ್ಬುಧಃ ।

ಹೀಗೆ ಷಡಧನ್ಯಾಸವನ್ನು ಮಾಡಬೇಕು. ಅನಂತರ ಶಿವಲಿಂಗವನ್ನು ಸರ್ವ ಮಂತ್ರಸ್ವರೂಪವಾದುದೆಂದು ತಿಳಿಯಬೇಕು. ಶಿವಲಿಂಗ ಏಳುಕೋಟಿ ಮಹಾಮಂತ್ರ ಗಳಿಂದ ಮಂತ್ರಿತವಾದುದೆಂದು ಹೇಳಲಾಗಿದೆ. ॥ ೩೧ ॥

ಶಿವಮಂತ್ರಜ್ಞನಾದ ಮಹಾತ್ಮನು ಶಿವಲಿಂಗವನ್ನು ಸಪ್ತಕೋಟಿ ಮಹಾ ಮಂತ್ರ ಸ್ವರೂಪವೆಂದು ತಿಳಿದು ಪೂಜಿಸಬೇಕು. ಹೀಗೆ ತಿಳಿಯದೇ ಪೂಜಿಸಿದರೆ ಆ ಪೂಜೆಯು ನಿಷ್ಫಲವಾಗುತ್ತದೆ. ಇಪ್ಪತ್ತೆಂಟು ವಿಧವಾದ ಕಾಮಿಕಾದಿ ವಾತುಲಾಂತ ಆಗಮಗಳಲ್ಲಿ— ॥ ೩೨ ॥

—ಹೇಳಿರುವ ಸಮಸ್ತ ಮಂತ್ರಗಳನ್ನೂ ಆಗಮಜ್ಞನಾದ ವಿದ್ವಾಂಸನು ಶಿವ

---

[1] ಷಡಧ್ವಕಂ—ಕ, ಖ, ಘ, ಛ, ಬ, ಟ, ಠ, ಢ, ತ, ಥ, ದ, ಧ.
ಷಡಕ್ಷರಂ—ಪ.

[2] ನ್ಯಸ್ತ್ವಾ—ಕ, ಘ, ಛ, ಟ, ಠ, ಢ, ತ, ಥ, ದ.

[3] ನ್ಮಹೇಶ್—ಝ.
ತ್ಮಕಂ ವಿದುಃ—ಪ.

[4] ನ್ಮಂತ್ರಂ—ಗ, ಜ, ಠ, ತ, ಧ.

[5] ಅನ್ಯಥಾ—ಕ, ಖ, ಘ, ಛ, ಟ, ಠ, ಢ, ತ, ದ, ಪ.
ಚಾನ್ಯಥಾ—ಧ.

[6] ಮನ್ತ್ರೇಷು—ಜ, ತ.

[7] ಅಷ್ಟಾ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಪ.
ಚಾಷ್ಟಾ—ಧ.

[8] ಭೇದಕಾಃ—ಢ.

ತಸ್ಮಾತ್ ಸರ್ವ ಪ್ರಯತ್ನೇನ
ಮಂತ್ರಜಾತಮಿದಂ ಮತಮ್ ॥ ॥ ೩೩ ॥

ಅತಿಬಾಲಂ[1] ಸಬಾಲಂ ಚ[2]
ಕೌಮಾರಂ ಚ ತ್ರಿಕೋಣಕಮ್ ।
ಯೌವನಂ ಚೈವ ಜಾತೀನಾಂ[3]
ಪ್ರಕೃತಿ ರ್ವಿಕೃತಿಸ್ತಥಾ[4] ॥ ॥ ೩೪ ॥

ಬ್ರಾಹ್ಮಣ : ಕ್ಷತ್ರಿಯೋ ವೈಶ್ಯಃ
ಶೂದ್ರಜಾತಿರನನ್ತವರ್[5] ।
ಸ್ತ್ರೀ ಪುಂನಪುಂಸಕಂ ಚೈವ[6]
ಚಲನ[7] ಸ್ಥಾನಮಾಸನಮ್ ॥ ॥ ೩೫ ॥

ಲಿಂಗದಲ್ಲಿ ಧ್ಯಾನಮಾಡಬೇಕು. ಆದುದರಿಂದ ಈ ಎಲ್ಲಾ ಪ್ರಯತ್ನದಿಂದಲೂ ಶಿವ ಲಿಂಗವನ್ನು ಮಂತ್ರ ಸಮೂಹಾತ್ಮಕವೆಂದು ತಿಳಿಯುವುದು. ॥ ೩೩ ॥

ಅತಿಬಾಲ ಸಬಾಲ ಕೌಮಾರ ಯೌವನ ಪ್ರಕೃತಿ ವಿಕೃತಿ ॥ ೩೪ ॥

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಸ್ತ್ರೀ ಪುರುಷ ನಪುಂಸಕ ಚಲನ ಸ್ಥಾನ ಆಸನ— ॥ ೩೫ ॥

---

[1] ಆದಿಬಾಲಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ, ಫ.
[2] ಸ್ವಬಾಲಂ ಚ—ಫ.
[3] ಸರ್ವೇಷಾಂ—ಚ.
[4] ಕೃತಿಸ್ತು ವಾ—ಖ, ಗ, ಚ, ಬ, ಝ.
[5] ಜಾತಿಃ ಪ್ರಕೀರ್ತಿತಃ—ಕ, ಘ, ಟ, ಠ, ಥ, ಪ.
ಜಾತಿಃ ಪ್ರಕೀರ್ತಿತಾಃ—ಖ.
ಜಾತಿಃ ಪ್ರಕೀರ್ತಿತಾಃ—ಛ, ಢ, ತ, ದ, ಧ.
ಜಾತಿಸ್ತಥಾ ಪುನಃ—ಫ.
[6] ಪುಂಸಕೇಂದ್ರಾದಿ—ಬ.
ಪುಂಸಕಂ ಚಾತಿ—ಕ, ಘ, ಛ, ಟ, ಠ, ಢ, ತ, ದ, ಧ, ಪ, ಫ.
[7] ಶಯನಂ—ಫ.
ಶಯನ—ಗ, ಚ.

ಶುದ್ಧಂ ಮಿಶ್ರಂ ಚ ಸಂಕೀರ್ಣಂ[1]
ಮಂತ್ರರೂಪ ಮಥ[2] ಶೃಣು[3] ।
[4]ಏಕೋನವಿಂಶತಿರ್ಮನ್ತ್ರಾ :
ತೇಷಾಂ ಲಕ್ಷಣಮುಚ್ಯತೇ ॥ ॥ ೩೬ ॥

ಶುದ್ಧಂ ಚಾಕಾರಸಂಯುಕ್ತಂ
ಅತಿಬಾಲಂ[5] ಪ್ರಕೀರ್ತಿತಮ್ ।[6]
ಅಷ್ಟ ಬೀಜ[7]ಸಮಾಯುಕ್ತಂ
ಸಬಾಲಮಿತಿ[8] ಕೀರ್ತಿತಮ್ ॥ ॥ ೩೭ ॥

ಪಂಚಾಕ್ಷರ[9] ಸಮಾಯುಃಕ್ತಂ
ಕೌಮಾರಂ ತು ಪ್ರಕೀರ್ತಿತಮ್[10] ।

—ಶುದ್ಧ ಮಿಶ್ರ ಸಂಕೀರ್ಣ ಎಂದು ಹತ್ತೊಂಬತ್ತು ಮಂತ್ರನಾಮಗಳಿವೆ. ಇನ್ನು ಅತಿಬಾಲಾದಿ ಮಂತ್ರಗಳ ಸ್ವರೂಪವನ್ನು ನಿರೂಪಿಸುವೆನು— ॥ ೩೬ ॥

ಅಕಾರ ಸಹಿತವಾದ ಶುದ್ಧಪ್ರಸಾದಮಂತ್ರಕ್ಕೆ ಅತಿಬಾಲವೆಂದು ಹೆಸರು. ಎಂಟು ಬೀಜಾಕ್ಷರಗಳಿಂದ ಕೂಡಿದ ಮಂತ್ರವು ಸಬಾಲ. ॥ ೩೭ ॥

ಐದು ಬೀಜಾಕ್ಷರಗಳಿಂದ ಕೂಡಿದ ಮಂತ್ರವು ಕೌಮಾರ. ಸಮಸ್ತ ದೇವತಾ

---

[1] ಮಿಶ್ರಮಸಂಕೀರ್ಣಂ—ಫ.
ಮಿಶ್ರಂ ತು ಸಂಕೀರ್ಣಂ—ಕ, ಘ, ಛ, ಟ, ಠ, ಢ, ತ, ದ, ಧ, ಪ, ಫ.

[2] ಮತಃ—ಕ, ಘ, ತ, ಧ.

[3] ಮಥೋಚ್ಯತೇ—ಫ.

[4] ಈ ಅರ್ಧಪದ್ಯ—ಕ, ಖ, ಛ, ಟ, ಢ, ತ, ಥ, ದ ಪುಸ್ತಕಗಳಲ್ಲಿಲ್ಲ.

[5] ಅದಿಬಾಲಂ—ಕ, ಘ, ಛ.

[6] ಪ್ರಕೀರ್ತಿತಃ—ಪ.
ಇತಿ ಸ್ಮೃತಂ—ಗ, ಚ.

[7] ಅಷ್ಟಬೀಜಂ—ಕ, ಘ, ಟ, ಠ, ಢ, ತ, ದ.

[8] ಸಬಾಲಂಚೇತಿ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ.

[9] ಪಂಚಸ್ವರ—ಖ, ಘ, ಛ, ಟ, ಠ, ಢ, ತ, ಧ, ದ, ಥ, ಪ.

[10] ಕೌಮಾರಂ ಪರಿಕೀರ್ತಿತಂ—ಚ.
ಕೌಮಾರಂ ಚೇತಿ ಕೀರ್ತಿತಂ—ಚ.

ಯೌವನಂ ಚೈವ ಸರ್ವೇಷಾಂ
ಮಂತ್ರಜಾತಂ ಪ್ರಕೀರ್ತಿತಮ್[1] || || ೩೮ ||

ಏಕಾಕ್ಷರಂ [ಃ] ಬ್ರಾಹ್ಮಣಂ [ಃ] ಸ್ಯಾತ್
ಕ್ಷತ್ರಂ ಪಂಚಾಕ್ಷರಂ ಭವೇತ್[2] |
ಷಡಕ್ಷರ[3] ಸಮಾಯುಕ್ತಂ [ಃ]
ವೈಶ್ಯಂ [ಃ] ಶೂದ್ರಂ[4] [ಃ] ಪ್ರಕೀರ್ತಿತಃ[5] || || ೩೯ ||

[6]ಏವಂ ಕ್ರಮೇಣ ನಿರ್ಣೀತಂ[7]
ಚತುರ್ಥಾನ್ತಂ[8] ಪ್ರಕೀರ್ತಿತಮ್ |
ಸ್ವಾಹಾಕಾರೋ ಭವೇನ್ನಾರೀ
ನಮೋಽನ್ತಂ ಪುರುಷಾಕೃತಿ[9] || || ೪೦ ||

ಮಂತ್ರ ಸಮೂಹವು ಯೌವನ. || ೩೮ ||

ಏಕಾಕ್ಷರ ಮಂತ್ರವು ಬ್ರಾಹ್ಮಣ ಮಂತ್ರವೆನಿಸುತ್ತದೆ. ಪಂಚಾಕ್ಷರ ಮಂತ್ರವು ಕ್ಷತ್ರಮಂತ್ರ, ಷಡಕ್ಷರ ಮಂತ್ರವು ವೈಶ್ಯಮಂತ್ರವೂ ಶೂದ್ರಮಂತ್ರವು ಆಗುತ್ತದೆ. || ೩೯ ||

ಹೀಗೆ ಕ್ರಮವಾಗಿ ನಿರ್ಣಯಗೊಂಡ ವರ್ಣಮಂತ್ರವು ನಾಲ್ಕು ವಿಧ. ಸ್ವಾಹಾ ಪಲ್ಲವವನ್ನುಳ್ಳ ಮಂತ್ರವು ಸ್ತ್ರೀಮಂತ್ರ. ನಮಃ ಪಲ್ಲವವನ್ನುಳ್ಳ ಮಂತ್ರವು ಪರುಷಮಂತ್ರ. || ೪೦ ||

---

[1] ಇಲ್ಲಿಂದ ಮುಂದೆ ಪ್ರಕೃತಿ ವಿಕೃತಿಗಳ ಲಕ್ಷಣಭಾಗವು ಮೂಲದಲ್ಲಿಲ್ಲ.
ಶಿವಾಕ್ಷರಂ ಬ್ರಾಹ್ಮಣೋ ಜಾತಂ ಪಂಚಾಕ್ಷರಂ ನೃಪಸ್ಯ ತು—ಕ.

[2] ಶಿವಾಕ್ಷರಂ ಬ್ರಹ್ಮಣೋ ಜಾತಂ ಪಂಚಾರ್ಣಂ ತು ಶಿವಸ್ಯ ತು—ಧ.

[3] ಷಡಕ್ಷರಂ—ಕ, ಥ.

[4] ವೈಶ್ಯಶೂದ್ರಂ—ಕ, ಖ, ಗ, ಛ, ಟ, ಠ, ಢ, ತ, ದ,ಪ.
ವೈಶ್ಯಾದೀನಾಂ—ಖ (ಪ.)
ವೈಶ್ಯಶೂದ್ರೌ—ಧ.

[5] ಪ್ರಕೀರ್ತಿತಂ—ಕ, ಖ, ಗ, ಘ, ಚ, ಛ, ಜ, ಠ, ಢ, ತ, ದ, ಧ, ಪ.
ಇತಿ ಸ್ಮೃತಂ—ಝ.

[6] ಈ ಅರ್ಧಪದ್ಯ—ಝ. ಪುಸ್ತಕದಲ್ಲಿಲ್ಲ.

[7] ಗಣಿತಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ತ, ದ, ಧ, ಪ.

[8] ಚತುರ್ಥ್ಯಂತಂ—ಗ, ಚ, ಜ,ಝ.

[9] ಕೃತಿಃ—ಕ, ಖ, ಘ, ಚ, ಜ, ಝ, ಟ, ಠ, ಢ, ತ, ಥ, ದ, ಧ, ಪ.

ಫಟ್ಕಾರಂ ಚ ವಷಟ್ಕಾರಂ
ನಪುಂಸಕಮಿತಿ[1] ಸ್ಮೃತಮ್ ।
ವಿಪ್ರಂ[2] ಸ್ವಾಹಾನ್ತಕಂ ಪ್ರೋಕ್ತಂ
ನೃಪವೈಶ್ಯಾದಿ ಸಂಯುತಮ್ ॥ ॥ ೪೧ ॥

[3]ಶೂದ್ರಾಣಾಂ ತು ನಮಶ್ಚೈವ
ಮನ್ತ್ರಜಾತಂ ಪ್ರಕೀರ್ತಿತಮ್[4] ।
ಇಂದ್ರಾದಿಶಯನಸ್ಥಾನಂ
ಮನ್ತ್ರಜಾತಂ ಪ್ರಕೀರ್ತಿತಮ್[5] ॥ ॥ ೪೨ ॥

ಶುದ್ಧಮೇಕಾಕ್ಷರಂ ಪ್ರೋಕ್ತಂ
ವೇದವರ್ಣಾಶ್ಚ ಮಿಶ್ರಕಾ :[6] ।

ಅಂತ್ಯದಲ್ಲಿ ಫಟ್ಕಾರವನ್ನಾಗಲಿ ವಷಟ್ಕಾರವನ್ನಾಗಲಿ ಹೊಂದಿರುವ ಮಂತ್ರವು ನಪುಂಸಕಮಂತ್ರ. ಸ್ವಾಹಾನ್ತವಾದ ಮಂತ್ರವು ಕ್ಷತ್ರಿಯ–ವೈಶ್ಯ–ಶೂದ್ರ–ಸಮನ್ವಿತವಾದ ವಿಪ್ರಮನ್ತ್ರ. ॥ ೪೧ ॥

ನಮೋಂತವಾದ ಮಂತ್ರಸಮೂಹವು ಶೂದ್ರಮಂತ್ರ. ಮಂತ್ರಗಳ ಸಮೂಹವು ಇಂದ್ರಾದಿ ದೇವತೆಗಳ ಅಧಿಷ್ಠಾನ. ॥ ೪೨ ॥

ಏಕಾಕ್ಷರಮಂತ್ರವು ಶುದ್ಧ. ಚತುರಕ್ಷರಮಂತ್ರವು ಮಿಶ್ರ. ಬಹುಪ್ರಕಾರಾಕ್ಷರ

---

[1] ನಪು. ಸಕ ಇತಿ—ಟ.
[2] ವಿಪ್ರೇ—ಥ.
[3] ಈ ಅರ್ಧಪದ್ಯ—ಕ, ಖ, ಘ, ಛ, ಜ, ಟ, ಠ, ಢ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.
[4] ಆಸನಂ ಮಂತ್ರಪೀಠಕಂ—ಖ (ಪಾ) ಗ, ಙ, ಝ.
[5] ಚಲನ—ಆಸನಗಳ ಸ್ವರೂಪ ವಿವರಣಭಾಗವು ಮೂಲದಲ್ಲಿಲ್ಲ.
[6] ವೇದಾಕ್ಷರಂ ತು ಮಿಶ್ರಕಂ—ಖ, ಘ, ಛ, ಠ, ತ, ಧ.
ವೇದಾಕ್ಷರಂ ತು ಮಿಶ್ರಿತಂ—ಕ, ಟ, ಢ, ದ.

ಸಂಕೀರ್ಣೋ[1] ಬಹುವರ್ಣಶ್ಚ[2]
ತ್ರಿವಿಧೋ[3] ಮನ್ತ್ರ[4] ಈರಿತಃ ||[5] || ೪೩ ||

ಮನ್ತ್ರಾದೌ ಶೀರ್ಷಕಂ[6] ಪ್ರೋಕ್ತಂ
ಮನ್ತ್ರೋರ್ಧ್ವೇ ವದನಂ ಮತಮ್[7] |
ಮನ್ತ್ರಬಾಹ್ಯೇ[8] ತು ಬಾಹೂ ಚ[9]
ತಸ್ಯಾಪ್ಯಧರಸಂಯುತಮ್[10] || || ೪೪ ||

ಪಾರ್ಶ್ವೇ ತು ಚಕ್ಷುಃ ಶ್ರೋತ್ರಾಣಿ[11]
ಚತುರ್ಮಧ್ಯೇ[12]ತು ನಾಸಿಕಾ |

ಮಂತ್ರವು ಸಂಕೀರ್ಣ. ಹೀಗೆ ಮಂತ್ರವು ತ್ರಿವಿಧ. || ೪೩ ||

ಮಂತ್ರಾದಿಯೇ ಶಿರಸ್ಸು, ಮಂತ್ರದ ಊರ್ಧ್ವ ಪ್ರದೇಶವೇ ವದನ. ಮಂತ್ರದ ಪಾರ್ಶ್ವದ್ವಯವು ಬಾಹುದ್ವಯ. ಈ ಬಾಹುದ್ವಯವು ಮಂತ್ರದ ಅಧೋಭಾಗ ದಿಂದಲೂ ಕೂಡಿರುವುದು. || ೪೪ ||

ಮಂತ್ರದ ಉಭಯ ಪಾರ್ಶ್ವಗಳಲ್ಲಿ ಕಣ್ಣುಗಳೂ ಕಿವಿಗಳೂ ಇವೆ. ಈ

---

[1] ಸಂಕೀರ್ಣಂ—ಕ, ಘ, ಛ, ಜ, ಟ, ಢ, ತ, ದ.
[2] ಬಹುಧಾ ಮಂತ್ರಃ—ಖ.
ಬಹುಧಾ ಮಂತ್ರಂ—ಧ.
[3] ತ್ರಿವಿಧಂ—ಕ, ಘ, ಛ, ಟ, ಢ, ತ, ದ, ಧ.
ತ್ರಿಭೇದಂ—ಪ.
[4] ಮಂತ್ರಂ—ಕ, ಘ, ಛ, ಟ, ಠ, ಢ, ತ, ದ, ಪ.
[5] ಉಚ್ಯತೇ—ಕ, ಖ, ಘ, ಛ, ಟ, ಠ, ಢ, ತ, ದ, ಧ, ಪ.
[6] ಶೀರ್ಷಂ—ಢ, ದ.
[7] ವದನಂ ಭವೇತ್—ಜ.
[8] ಮಂತ್ರಪಾರ್ಶ್ವೇ—ಕ, ಖ, ಛ, ಟ, ಠ, ಢ, ತ, ಥ, ದ, ಧ.
[9] ಬಾಹಾಹೂತಂ—ಕ, ಘ, ಛ, ಟ, ಠ, ಢ, ತ, ಥ, ದ.
[10] ಪ್ಯಾಧಾರಸಂಯುತಂ—ಗ, ಙ.
ಪ್ಯದಃ ಸ್ಥಾನ ಸಂಯುತಂ—ಝ.
[11] ಶ್ರೋತ್ರಂ ಚ—ಜ.
[12] ಚಕ್ಷುರ್ಮಧ್ಯೇ—ಗ, ಙ.
ತಯೋರ್ಮಧ್ಯೇ—ಜ.

ತಸ್ಯಾ ಊರ್ಧ್ವೇ[1] ಲಲಾಟಂ ಚ[2]
ಬಿನ್ದುರ್ಮಸ್ತಕಮುಚ್ಯತೇ[3] || || ೪೫ ||

ನಾದೋ ಜಿಹ್ವಾ ಸಮಾಖ್ಯಾತ[4] :
ಶಬ್ದ : ಶಬ್ದ ಇತಿ ಸ್ಮೃತ :[5] |
ಓಷ್ಠ :[6] ಶಬ್ದೇನ ಭಿನ್ನ :[7] ಸ್ಯಾತ್
ಆಸ್ಯಾನ್ತರ[8] ಸಮನ್ವಿತ :[9] || || ೪೬ ||

ವಾಗ್ಭವಂ ಮುಖಮಿತ್ಯಾಹು :
ಓಷ್ಠಾನ್ತಂ ಕಣ್ಠ ಏವ ಚ[10] |

ನಾಲ್ಕರ ಮಧ್ಯದಲ್ಲಿ ನಾಸಿಕೆಯಿದೆ. ನಾಸಿಕೆಯ ಮೇಲೆ ಲಲಾಟವಿದೆ. ಬಣ್ಣವು ಮಸ್ತಕವೆನಿಸುತ್ತದೆ. || ೪೫ ||

ಮಂತ್ರದ ನಾದವು ಜಿಹ್ವೆ. ಜಿಹ್ವೆಯಿಂದಲುಚ್ಚರಿಸುವ ವರ್ಣನಾತ್ಮಕಧ್ವನಿಯು ಶಬ್ದ. ಮುಖದಲ್ಲಿರುವ ಓಷ್ಠವು ಶಬ್ದದಿಂದ ಭಿನ್ನವಾಗುತ್ತದೆ. || ೪೬ ||

ವಾಗ್ಭವವು ಮಂತ್ರದ ಮುಖ. ಓಷ್ಠದವರೆಗಿನ ಭಾಗವು ಮಂತ್ರದ ಕಣ್ಣು.

---

[1] ತಸ್ಯಾಪ್ಯೂರ್ಧ್ವೇ—ಜ.

[2] ಲಲಾಟಶ್ಚ—ಥ.

[3] ಮಸ್ತಕ ಉಚ್ಯತೇ—ಗ, ಚ, ಝ.

[4] ನಾದಂ ಜಿಹ್ವಾ ಸಮಾಖ್ಯಾತಃ—ಕ, ಛ, ಜ, ಟ, ಡ, ಢ, ತ, ಥ, ಧ.
ನಾದಂ ಜಿಹ್ವಾ ಸಮಾಖ್ಯಾತಾ—ಠ, ದ, ಪ.
ನಾದಂ ಜಿಹ್ವೇಯಮಾಖ್ಯಾತಾ—ಗ, ಝ.
ನಾಪ ಜಿಹ್ವೇಯಮಾಖ್ಯಾತಾ—ಚ.

[5] ಶಬ್ದಂ ಶಬ್ದ ಮಿತಿ ಸ್ಮೃತಂ—ಕ, ಗ, ಘ, ಚ, ಛ, ಜ, ಝ, ಠ, ಢ, ತ, ಥ, ದ, ಧ, ಪ.
ಶಬ್ದ ಶಬ್ದ ಮಿತೀರಿತಂ—ಢ.

[6] ಓಷ್ಠಂ—ಕ, ಗ, ಘ, ಚ, ಛ, ಜ, ಝ, ಢ, ತ, ಥ, ದ, ಧ, ಪ.

[7] ಭಿನ್ನಂ—ಗ, ಘ, ಚ, ಛ, ಜ, ಝ, ಢ, ತ, ಥ, ದ, ಧ, ಪ.

[8] ಆಸ್ಯಾಧಾರ—ಜ.

[9] ಸಮನ್ವಿತಂ—ಕ, ಗ, ಘ, ಚ, ಛ, ಜ, ಝ, ಟ, ಠ, ಢ, ತ, ಥ, ದ, ಧ,ಪ.

[10] 'ಕಂಠ ಏವ ಚ' ಎಂಬುದರ ಸ್ಥಾನದಲ್ಲಿ ಶಿವಮೇವ ಚ—ಪ.
ಗ್ರೀವಮೇವ ಚ—ಘ, ಛ, ಜ, ಟ, ಠ, ಢ, ತ, ದ, ಧ.
ಶ್ರಿಯಮೇವ ಚ—ಘ.

ಪಾರುಷ್ಯರೂಪ ಮೇವಂ ತು[1]
ವಾಸವಾಹನಮುಚ್ಯತೇ[2] ॥ ॥ ೪೭ ॥

ಪ್ರಣವಾನ್ತಸಮಾಯುಕ್ತಂ
ಮನ್ತ್ರಾನ್ತೇ ಚ ಪ್ರತಿಷ್ಠಿತಮ್[3] ।
[4]ಮನ್ತ್ರರೂಪಮಿದಂ ಪ್ರೋಕ್ತಂ
ಮನ್ತ್ರವಾಸಸ್ತಥೋಚ್ಯತೇ ॥ ॥ ೪೮ ॥

ಇದು ಮಂತ್ರದ ಪರುಷರೂಪ. ಇನ್ನು ವಾಸ ಮತ್ತು ವಾಹನವನ್ನು ನಿರೂಪಿಸುವೆನು. ॥ ೪೭ ॥

ಮಂತ್ರ ಸ್ವರೂಪವು ಪ್ರಣವದ ಆದಿಯಿಂದ ಪಲ್ಲವದ ಅಂತ್ಯದವರೆಗೆ ವ್ಯಾಪಿಸಿರುತ್ತದೆ. ಇದು ಮಂತ್ರ ಸ್ವರೂಪ. ಇನ್ನು ಮಂತ್ರವಾಸವನ್ನು ಹೇಳುತ್ತೇನೆ. ॥ ೪೮ ॥

---

[1] ಪಾರುಷ್ಯರೂಪಮೇವಂ—ಥ. ಪುಸ್ತಕವನ್ನುಳಿದು ಬಾಕಿ ಪುಸ್ತಕಗಳಲ್ಲಿ.
ಪಾರ್ಶ್ವೇ ಚು ರೂಪಮೇವಂ—ಗ, ಚ.
ಪಾರುಷ್ಯಮೇವ ರೂಪಂ—ಝ, ಪ.

[2] ಇದಾದ ನಂತರ—ಗ, ಚ, ಝ. ಪುಸ್ತಕಗಳಲ್ಲಿ.
"ಅಕಾರಂ ಚ ಇಕಾರಂ ಚ ಉಕಾರಂ ಚ ಋಕಾರಕಂ। ಇಕಾರಂ ಚೈವ ಏಕಾರಂ ಓಕಾರಂ ಚ ತಥೈವ ತು। ಏತೇ ಸಪ್ತ ಸ್ವರಾದೀನಿ ಮಂತ್ರ ಪ್ರಕೃತಿ ರುಚ್ಯತೇ" ಎಂದಿದೆ.

[3] ಪ್ರಣವೋಽಯ ಮಿತಿ ಪ್ರೋಕ್ತಂ ಮಂತ್ರಜಾತಸ್ತು ಪಾರ್ಷತಃ—ಫ.
ಪ್ರಣವಾಂತೇ ಸಮಾಯುಕ್ತಂ ಮಂತ್ರಾಂತೇ ಚ ಪ್ರತಿಷ್ಠಿತಂ—ಗ, ಚ.
ಪ್ರಣವಾಂತ ಸಮಾಯುಕ್ತಂ ಮಂತ್ರಾಂತೇ ಚ ಪ್ರತಿಷ್ಠಿತಂ—ಠ.
ಪ್ರಣವಾಂತ ಸಮಾಯುಕ್ತಂ ಮಂತ್ರಾತಂ ಚ ಪ್ರತಿಷ್ಠಿತಂ—ಟ, ಥ, ಪ.
ಪ್ರಣವಾಂತ ಸಮಾಯುಕ್ತಂ ಮಂತ್ರಾಂತಾಂತೇ ಪ್ರತಿಷ್ಠಿತಂ—ಕ, ಛ, ಟ, ಠ, ದ, ಧ.

[4] ಈ ಅರ್ಧಪದ್ಯ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.
ಇದಾದ ನಂತರ—ಗ, ಚ, ಝ. ಪುಸ್ತಕಗಳಲ್ಲಿ.
"ಪ್ರಣವಾಂತೇ ಸಮಾಯುಕ್ತಂ ಮಂತ್ರಾಂತೇ ಚ ಪ್ರತಿಷ್ಠಿತಂ" ಎಂಬ ಅರ್ಧವು ಪುನರುಕ್ತವಾಗಿ ಮತ್ತೆ ಇದೆ.

ಮನ್ತ್ರಾಣಾಂ[1] ಪ್ರಕೃತಿರ್ವಾಸ:
    ವಾಹನಂ ವಿಕೃತಿಸ್ತ್ಥಾ[2] |
ಪ್ರಕೃತಿರ್ವರ್ಣಭಾವಶ್ಚ[3]
    ವರ್ಣಾನಾಂ[4] ವಾಸಜಿಹ್ವಯಾ[5] || || ೪೯ ||

ಆಸ್ಯೇ ತು ಜಿಹ್ವಾವಾಸಶ್ಚ[6]
    ಆಸ್ಯಾನಾಂ ಬುದ್ಧಿ[7]ವಾಸನಮ್ |
ಬುದ್ಧ್ಯರ್ಣಂ ಹೃದಯೇ ವಾಸಂ[8]
    ಹೃದಯಂ ಪಿಂಡವಾಸನಮ್[9] || || ೫೦ ||

ಮಂತ್ರಗಳಲ್ಲಿರುವ ಪ್ರಕೃತ್ಯಕ್ಷರವು ಮಂತ್ರಗಳ ವಾಸಸ್ಥಾನ. ಹೀಗೆಯೇ ಮಂತ್ರಗಳಲ್ಲಿರುವ ಪ್ರಕೃತ್ಯಕ್ಷರವು ಮಂತ್ರಗಳ ವಾಹನ. ಮಂತ್ರಗಳ ವಾಸವೆನಿಸಿದ ಪ್ರಕೃತಿಯೇ ವರ್ಣ. ವರ್ಣಗಳಿಗೆ ವರ್ಣತ್ವವು ಜಿಹ್ವಾವಾಸದಿಂದ ಸಿದ್ಧಿಸುತ್ತದೆ. (ಜಿಹ್ವೆಯಿಂದ ಉಚ್ಚರಿಸಿದ ಮೇಲೆ ವರ್ಣಗಳೆನಿಸುತ್ತವೆ.) || ೪೯ ||

ಅಕ್ಷರಾಶ್ರಯವಾದ ಜಿಹ್ವೆಗೆ ಮುಖವು ವಾಸಸ್ಥಾನ. ಮುಖಕ್ಕೆ ಬುದ್ಧಿಯು ವಾಸಸ್ಥಾನ. ಶಬ್ದಾನುವಿದ್ಧವಾದ ಬುಧ್ಯಕ್ಷರಕ್ಕೆ ಹೃದಯುವು ವಾಸಸ್ಥಾನ. ಬುದ್ಧಿ ವ್ಯಾಪಾರಕ್ಕೆ ಕಾರಣವಾದ ಮನಸ್ಸಿಗೆ ಪಿಂಡವು ವಾಸಸ್ಥಾನ. || ೫೦ ||

---

[1] ಮಂತ್ರಾಣೆ—ಕ.
[2] ಸ್ತತಃ—ಗ, ಚ, ಝ.
[3] ಭಾವಂಚ—ಕ, ಗ, ಘ, ಚ, ಛ, ಜ, ಝ, ಟ, ಠ, ಢ, ತ, ಥ, ದ.
ವಾಸಂಚು—ಧ.
[4] ವರ್ಣಾರ್ಣಂ—ಕ, ಘ, ಢ, ತ, ದ.
[5] ವರ್ಣವಾಸೋ ರಸಕಃ—ಖ, ಪ್ರಾ, ಝ.
[6] ಜಿಹ್ವಾಸ್ಯೇ ತು ವಾಸಂ ಚ—ಗ, ಚ.
[7] ಬುದ್ಧ—ಗ, ಚ.
[8] ವಾಸೋ—ಘ.
[9] ವಾಸನೆ—ಘ.
ವಾಸಕಂ—ಧ.

ಪಿಣ್ಡಾರ್ಣಂ ವಾಸಯೇ ನ್ನಾಡ್ಯಾಂ[1]
ನಾಡೀನಾಂ ವಾಯುವಾಸನಮ್[2] |
ವಾಯುವಾಸಶ್ಚ[3] ಶಕ್ತೀನಾಂ
ಶಕ್ತಿವಾಸಂಚ [ಸಶ್ಚ][4] ವೈ ಶಿವ: || || ೫೧ ||

ಶಿವವಾಸಂಚ [ಸಶ್ಚ] ಸರ್ವೇಷಾಂ
ಮನ್ತ್ರವಾಸಂ [ಃ][5] ಪ್ರಕೀರ್ತಿತಂ [ಃ][6] |
ನಿತ್ಯೋ ನೈಮಿತ್ತಿಕಶ್ಚೈವ
ಪರಂ ಚಾಪರಮೇವ ಚ[7] || || ೫೨ ||

ಪಿಂಡಾಕ್ಷರಕ್ಕೆ ನಾಡಿಯು ವಾಸಸ್ಥಾನ. ನಾಡಿಗಳಿಗೆ ವಾಯುವು ವಾಸಸ್ಥಾನ. ವಾಯುವಿಗೆ ಶಕ್ತಿಗಳು ವಾಸಸ್ಥಾನ. ಆ ಶಕ್ತಿಗಳಿಗೆ ಶಿವನು ಆವಾಸ || ೫೧ ||

ಸರ್ವತತ್ತ್ವಗಳಿಗೂ ಶಿವನು ವಾಸಸ್ಥಾನ. ಹೀಗೆ ಮಂತ್ರವಾಸವು ನಿರೂಪಿತವಾಯಿತು. ಎಲೈ ಸುರಶ್ರೇಷ್ಠನೇ! ನಿತ್ಯ, ನೈಮಿತ್ತಿಕ, ಪರ ಅಪರ,— || ೫೨ ||

---

[1] ಪಿಂಡಾರ್ಣಂ ವಾಸಯೇನ್ನಾಡೀ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.
ಪಿಂಡಾತ್ತು ವಾಸಯೋರ್ನಾಡೀ—ಫ.
ಪಿಂಡಾರ್ಣಂ ವಾಸಯೇನ್ನಾಡ್ಯಾಃ—ಗ, ಚ, ಝ.

[2] ವಾಯುರಾಸನಂ—ಫ.
ವಾಯುವಾ ಸಕಂ—ಧ.

[3] ವಾಯುವಾ ಸನಂ—ಪ.
ವಾಯುರಾ ಸಕಂ—ಫ.

[4] ಶಕ್ತ್ಯಾವಾಸಂ—ತ, ಖ, ಘ, ಛ, ಢ, ತ, ಥ, ದ.

[5] ಮಂತ್ರಾವಾಸಂ—ಪ.

[6] ಉದೀರಿತಂ—ಫ.
ಇದಂಪ್ರೋಕ್ತಂ—ಕ, ಗ, ಘ, ಛ, ಜ, ಝ, ಟ, ಠ, ಢ, ತ, ಥ, ದ. ಧ, ಪ.

[7] ಇಲ್ಲಿಂದ "ಸದಾಶಿವಸಮಾಶ್ರಿತಾ" ವರೆಗಿನ ಭಾಗ ಕ, ಖ, ಘ, ಛ, ಜ, ಟ, ಠ, ಢ, ತ, ಥ, ದ, ಪ, ಫ. ಪುಸ್ತಕಗಳಲ್ಲಿಲ್ಲ.
ಆದರೆ—ಗ, ಚ, ಝ. ಪುಸ್ತಕಗಳಲ್ಲಿ 'ತಸ್ಯಾನಾಂ ಬುದ್ಧಿವಾಸನಂ' ಎಂಬುವ ಅರ್ಧ ಪದ್ಯದ ನಂತರ ಕಾಣುವ ಈ ಭಾಗವನ್ನು ವಿಷಯಾನುಗುಣವಾಗಿ ಇಲ್ಲಿಯೇ ಜೋಡಿಸಲಾಗಿದೆ.

ಸಚ್ಚಾಸಚ್ಚ ಸುರಶ್ರೇಷ್ಠ !
ಕರ್ತೃ ಭರ್ತೃ ತಥೈವ ಚ ।
ಹೃದ್ಯಂ ಚೈವ ತಥಾಽಹೃದ್ಯಂ
ಅದ್ಯ ಹ್ಯ : ಶ್ವಸ್ತಥೈವ ಚ ॥ ॥ ೫೩ ॥

ವಾಚ್ಯಂ ಚ ವಾಚಕಂ ಯತ್ತತ್
ಆಧಾರಾಧೇಯಮೇವ ಚ ।
ಸುಸ್ಥಿತಂ ದುಃಸ್ಥಿತಂ ಚೈವ
ಚಲಂ ಚಾಚಲಮೇವ ಚ ॥ ॥ ೫೪ ॥

ಶೀತ ಮುಷ್ಣಂ ಚ ಯತ್ ಪ್ರೋಕ್ತಂ
ಸುಖಂ ದು:ಖಂ ತಥೈವ ಚ ।
ಪವಿತ್ರಂ ಚಾಪವಿತ್ರಂ ಚ
ಮೃದು ತೀಕ್ಷ್ಣಂ ತಥೈವ ಚ ॥ ॥ ೫೫ ॥

ರಾಗದ್ವೇಷಂ ಚ ಯದ್ ಜ್ಞಾನಂ
ಯಚ್ಚಾಲಭ್ಯಂ ತಥೈವ ಚ ।
ಉನ್ನತಂ ಚಾನತಂ ಚೈವ
ಸಂಪಚ್ಚಾಸಮ್ಪದೇವ ಚ ॥ ॥ ೫೬ ॥

ಸತ್, ಅಸತ್, ಕರ್ತೃ, ಭರ್ತೃ, ಹೃದ್ಯ, ಅಹೃದ್ಯ, ಇಂದು, ನೆನ್ನೆ, ನಾಳೆ, ॥ ೫೩ ॥

ವಾಚ್ಯ, ವಾಚಕ, ಆಧಾರ, ಆಧೇಯ, ಸುಸ್ಥಿತ, ದುಃಸ್ಥಿತ, ಚಲ, ಅಚಲ, ॥ ೫೪ ॥

ಶೀತ, ಉಷ್ಣ, ಸುಖ, ದುಃಖ, ಪವಿತ್ರ, ಅಪವಿತ್ರ, ಮೃದು, ತೀಕ್ಷ್ಣ ॥ ೫೫ ॥

ರಾಗಬುದ್ಧಿ, ದ್ವೇಷಬುದ್ಧಿ, ಅಲಭ್ಯ, ಉನ್ನತ, ಅನತ, ಸಂಪತ್ತು, ಅಸಂಪತ್ತು,– ॥ ೫೬ ॥

ಸರ್ವಮೇತಚ್ಚ ದೇವೇಶ :
ತಸ್ಮಾದನ್ಯನ್ನ ವಿದ್ಯತೇ ।
ಪಕೃತಿ : ಶಬ್ದಮಾತ್ರಂ ತು
ರೂಪಮಾತ್ರಂ ತಥಾಪರವಮ್ ॥ ॥ ೫೭ ॥

ರಸಮಾತ್ರಂ ಗನ್ಧಮಾತ್ರಂ
ಶ್ರೋತ್ರತ್ವಕ್ ಚಕ್ಷುರೇವ ಚ ।
ಜಿಹ್ವಾಘ್ರಾಣಂ ಚ ವಾಕ್ಪಾಣಿ–
ಪಾದಂ ಪಾಯುರುಪಸ್ಥಕಮ್ ॥ ॥ ೫೮ ॥

ಮನಸಾ ಚ ಪೃಥಿವ್ಯಾದಿ
ಪಂಚಕಂ ಪುರುಷೇಣ ತು ।
ರಾಗ [ಗೋ] ಮಾಯಾ ಚ ವಿದ್ಯಾಂ [ದ್ಯಾ] ಚ
ಕಲಾ ನಿಯಮಮೇ [ಏ]ವ ಚ ॥ ॥ ೫೯ ॥

ವಿಗ್ರಹೇಶಂಚ [ಶಶ್ಚ] ಶಕ್ತಿಂಚ[ಶ್ಚ]
ಶುದ್ಧಮಾಯಾಂ [ಯಾ] ತಥೈವ ಚ ।
ಶುದ್ಧವಿದ್ಯಾ ಶುದ್ಧಕಲಾ
ಸದಾಶಿವಶ್ಶಿವಂ ವಿದು : ॥ ॥ ೬೦ ॥

ಈ ಎಲ್ಲವೂ ದೇವೇಶನಾದ ಶಿವನೇ, ಶಿವನಿಂದ ಭಿನ್ನಭಿನ್ನವಾದುದು ಯಾವುದೂ ಇಲ್ಲ. ಮೂಲ ಪ್ರಕೃತಿ, ಶಬ್ದತನ್ಮಾತ್ರ, ರೂಪತನ್ಮಾತ್ರ, ಸ್ಪರ್ಶತನ್ಮಾತ್ರ ॥ ೫೭ ॥

ರಸತನ್ಮಾತ್ರ, ಗಂಧತನ್ಮಾತ್ರ, ಶ್ರೋತ್ರೇಂದ್ರಿಯ, ತ್ವೋಂದ್ರಿಯ, ಚಕ್ಷುರಿಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ, ವಾಗಿಂದ್ರಿಯ, ಪಾಣೇಂದ್ರಿಯ, ಪಾದೇಂದ್ರಿಯ, ಪಾಯ್ವಿಂದ್ರಿಯ, ಉಪಸ್ಥೇಂದ್ರಿಯ,– ॥ ೫೮ ॥

ಮನಸ್ಸು, ಪೃಥಿವ್ಯಾದಿ ಪಂಚಭೂತಗಳು, ಪುರುಷ, ರಾಗ, ಮಾಯೆ, ವಿದ್ಯೆ, ಕಲೆ, ನಿಯತಿ,– ॥ ೫೯ ॥

ವಿಗ್ರಹೇಶ, ಶಕ್ತಿ, ಶುದ್ಧಮಾಯೆ, ಶುದ್ಧವಿದ್ಯೆ, ಶುದ್ಧಕಲೆ, ಸದಾಶಿವ, ಈ ಎಲ್ಲವೂ ಶಿವನೇ. ॥ ೬೦ ॥

ಈಶ್ವರಂ ಚ [ರಶ್ಚ] ಸ ಏವ ಸ್ಯಾತ್
ಸ ಏವಾಹಂ ಭವಾಂಸ್ತಥಾ ।
ಸ ಏವ ದೇವ ಬ್ರಹ್ಮಾದಿ [ಃ]
ಕಾರ್ಯ [ಶ್ಯ] ಪಾದ್ಯಪ್ರಜಾ ಸೃಜಾ[ಜಃ] ॥ ॥ ೬೧ ॥

ಸ ಏವ ಮುನಯಸ್ಸಪ್ತ
ಚನ್ದ್ರಾದಿತ್ಯೌ ಗ್ರಹೇಶ್ವರೌ ।
ಸ ಏವ ದೇವರಾಜೋಽಪಿ
ಕುಬೇರೋ ವರುಣಸ್ತಥಾ ॥ ॥ ೬೨ ॥

ಸಮಯೋಽಗ್ನಿಶ್ಚ ನಾಗೇಶಃ
ನಿ ರ್ರ್ ತಿರ್ವಾಯುರೇವ ಚ ।
ಈಶಾನೋ ಗಣಪಾಸ್ಸರ್ವೇ
ವಸವೋಽಕ್ಷ್ಟ ತಥೈವ ಚ ॥ ॥ ೬೩ ॥

ರುದ್ರಾ ಏಕಾದಶಾನ್ಯೇ ಚ
ದೇವದಾನವಪುಂಗವಾಃ ।
ದೈವಮಷ್ಟವಿಕಲ್ಪಂ ಚ
ಧೈರ್ಯಮನ್ಯೋನ್ಯಪಂಚಕವ್ ॥ ॥ ೬೪ ॥

ಈಶ್ವರನೂ ಶಿವತತ್ತ್ವವೇ ನಾನೂ ನೀನೂ ಶಿವತತ್ತ್ವವೇ, ಬ್ರಹ್ಮನೇ ಮೊದಲಾದ ಸಕಲ ದೇವತೆಗಳೂ, ಕಾಶ್ಯಪನೇ ಮೊದಲಾದ ಸಕಲ ಪ್ರಜಾಪತಿಗಳೂ ಶಿವತತ್ತ್ವವೇ. ॥ ೬೧ ॥

ಸಪ್ತರ್ಷಿಗಳೂ ಗೃಹೇಶ್ವರರಾದ ಚಂದ್ರಸೂರ್ಯರೂ ಶಿವತತ್ತ್ವವೆ, ಇಂದ್ರ ಕುಬೇರ ವರುಣ– ॥ ೬೨ ॥

ಯಮ, ಅಗ್ನಿ, ಆದಿಶೇಷ, ನಿರೃತಿ, ವಾಯು ಇವರೆಲ್ಲರೂ ಶಿವತತ್ತ್ವವೇ. ಈಶಾನನೂ ಸಕಲ ಗಣೇಶರೂ, ಎಂಟು ವಸುಗಳೂ,– ॥ ೬೩ ॥

ಏಕಾದಶರುದ್ರರೂ, ದೇವದಾನವಶ್ರೇಷ್ಠರೂ ಎಂಟು ವಿಧವಾದ ದೈವವೂ ಪಂಚವಿಧವಾದ ಧೈರ್ಯವೂ, ॥ ೬೪ ॥

ಮಾನುಷ್ಯಂ ಚ ಜಗತ್ ಕೃತ್ಸ್ನಂ
ಸ ಏವ ಶಿವ ಉಚ್ಯತೇ ।
ಚತ್ವಾರಶ್ಚ ತಥಾ ವೇದಾ :
ರಹ ಸ್ಯೇನ ವದನ್ತಿ ಕಮ್ ॥ ॥ ೬೫ ॥

ಸಿದ್ಧಾನ್ತೇ ಭೂತತನ್ತ್ರೇ ಚ
ವಾಮೇ ಸ್ರೋತಸಿ ದಕ್ಷಿಣೇ ।
ಭೈರವೇಷು ತಥಾಽನ್ಯೇಷು
ಪಶುಪಾಶುಪತಾದಿಷು ॥ ॥ ೬೬ ॥

ವಿಷ್ಣುತಂತ್ರೇ ಚ ಬೌದ್ಧೇ ಚ
ತಥಾ ದಿಕ್ಪ್ರತಿದರ್ಶನೇ ।
ಅಷ್ಟಾದಶಪುರಾಣೇಷು
ಷಡಂಗೇಷು ಪರೇಷು ಚ ॥ ॥ ೬೭ ॥

ಯೋಗಶಾಸ್ತ್ರೇಷು ಸರ್ವೇಷು
ನ್ಯಾಯವೈಶೇಷಿಕಾದಿಷು ।
ಯೈರ್ಯೈರ್ಯದ್ಯತ್ಪರಿ ಕ್ರಮ್ಯ
ತತ್ಸರ್ವಂ ಪ್ರೋಚ್ಯತೇ ಬುಧೈ : ॥ ॥ ೬೮ ॥

ಮನುಷ್ಯವರ್ಗವೂ, ಸಮಸ್ತಜಗತ್ತೂ ಶಿವತತ್ತ್ವವೇ, ನಾಲ್ಕೂ ವೇದಗಳು ಉಪನಿಷತ್ತುಗಳ ಮೂಲಕ ಯಾವುದನ್ನು ಪ್ರತಿಪಾದಿಸುತ್ತವೆಯೋ, ಆದೂ, ॥ ೬೫ ॥

ಸಿದ್ಧಾಂತಗ್ರಂಥಗಳು, ಭೂತತತ್ತ್ವಗಳು, ವಾಮಮಾರ್ಗಗ್ರಂಥಗಳು, ದಕ್ಷಿಣ ಮಾರ್ಗಗ್ರಂಥಗಳು, ಭೈರವತಂತ್ರಗಳು, ಪಶುಪಾಶಪತಾದಿಗ್ರಂಥಗಳು– ॥ ೬೬ ॥

ವಿಷ್ಣುತಂತ್ರಗಳು, ಬೌದ್ಧಗ್ರಂಥಗಳು, ದಿಕ್ಪ್ರತಿದರ್ಶನಗ್ರಂಥಗಳು, ಹದಿನೆಂಟು ಪುರಾಣಗ್ರಂಥಗಳು, ಶಿಕ್ಷಾದಿ ವೇದಷಡಂಗಗಳು, ಇತರಗ್ರಂಥಗಳು ॥ ೬೭॥

ಯೋಗಶಾಸ್ತ್ರಗ್ರಂಥಗಳು ಮತ್ತು ಸಮಸ್ತನ್ಯಾಯ ವೈಶೇಷಿಕಾದಿ ಗ್ರಂಥಗಳಲ್ಲಿ ಯಾವ ಯಾವ ವಿದ್ವಾಂಸರು ಪರಿಶೀಲಿಸಿ ಯಾವ ಯಾವುದನ್ನು ನಿರೂಪಿಸಿದ್ದಾರೆಯೋ,– ॥ ೬೮ ॥

ತತ್ತತ್ಸ ಏವ ದೇವೇಶ:
ಶಿವಶಾಸ್ತ್ರೇ ಸನಾತನ: |
ಆದಿ ಮಧ್ಯಾನ್ತ ನಿರ್ಮುಕ್ತಃ
ಸ್ವಭಾವ ವಿಮಲಃ ಪ್ರಭು: || || ೧೯ ||

ಸರ್ವಜ್ಞ : ಪರಿಪೂರ್ಣಶ್ಚ
ಶಿವೋ ಜ್ಞೇಯ : ಶಿವಾಗಮೇ |
ಕೇವಲಾದ್ಯನವಚ್ಛಿನ್ನ[1] :
ವಾಮೇನೊದಿತಗೇಚರೇ ||
[ವಾಙ್ಮನೋಽತೀತಗೋಚರ : ||] || ೨೦ ||

ನಿಷ್ಕಲೋಽ [ಸಕಲೋ] ನಿಷ್ಕಲಶ್ಚಾಪಿ
ಸರ್ವಗನ್ಧರ್ವದಿಕ್ ಸದಾ ||
[ಸರ್ವಗ : ಸರ್ವವಿತ್ ಸದಾ] ||
ಅನ್ತರ್ಯಾಗೇ ಹಿ ತತ್ಪೂಜಾ
ಯೋಗಿನಾಮೇವ ಸಾ ಭವೇತ್ || || ೨೧ ||

ಯೋಗಾಭ್ಯಾಸರತೈ : ಸದ್ಭಿ :
ಹೃತ್ಕುಶೇಶಯಮಧ್ಯಮೇ |

ಅವೆಲ್ಲವೂ ಶಿವಶಾಸ್ತ್ರಗಳಲ್ಲಿ ಉಕ್ತವಾದ, ಸನಾತನ ಶಿವತತ್ತ್ವವೇ ಆಗಿದೆ. ಶಿವಾಗಮಗಳಲ್ಲಿ ಪ್ರತಿಪಾದಿತನಾದ ಆ ಶಿವನು ಆದಿಮಧ್ಯಾಂತ ಶೂನ್ಯನು ಸ್ವತಃ ಶುದ್ಧನೂ, ಸ್ವಯಂ ಪ್ರಭುವೂ,- || ೧೯ ||

ಸರ್ವಜ್ಞನೂ, ಪರಿಪೂರ್ಣನೂ; ಕೇವಲಾದ್ಯನವಚ್ಛಿನ್ನನೂ ವಾಙ್ಮನಸ್ಸುಗಳಿಗೆ ನಿಲುಕದೇ ಅನುಭವೈಕವೈದ್ಯನೂ || ೨೦ ||

ನಿಷ್ಕಲನೂ, ಸಕಲನಿಷ್ಕಲನೂ, ಸಕಲನೂ, ಸರ್ವವ್ಯಾಪಕನೂ, ಸರ್ವಜ್ಞನೂ ಆಗಿದ್ದಾನೆ. ಅವನ ಪೂಜೆಯು ಅನ್ತರ್ಯಾಗರೂಪವಾದುದು. ಅದು ಯೋಗಿಗಳಿಗೆ ಮಾತ್ರ ಸಾಧ್ಯ. || ೨೧ ||

ಯೋಗಾಭ್ಯಾಸನಿರತರಾದ ಸತ್ಪುರುಷರು ಆ ಶಿವನನ್ನು ಯಮನಿಯಮಾದ್ಯ

---

[1] ದೇಶಕಾಲಾನವಚ್ಛಿನ್ನೋ—ಗ.

ಯಮಾದ್ಯಷ್ಟಾಂಗಯೋಗೇನ
ವಿಮಲೀಕೃತಮಾನಸೇ ॥ ॥ ೭೨ ॥

ಪೂಜ್ಯತೇ ನೇತರೈ ಸ್ತಸ್ಯ
ಪೂಜಾ ಕರ್ತುಂ ವಿಶಿಷ್ಯತೇ ।
ಹಿತ್ವಾ ತದರ್ಚನಾಂ ನಾನ್ಯತ್[1]
ಶ್ರೇಯೋ ಭವತಿ ದೇಹಿನಾಮ್ ॥ ॥ ೭೩ ॥

ಅನ್ತರ್ಯಾಗಾಧಿಕಾರೋಽತ್ರ
ಕ್ವಚಿತ್ ಕಸ್ಯಾಪಿ ಜಾಯತೇ ।
ಬಹಿರ್ಯಾಗಾಧಿಕಾರೋಽಯಂ
ಕಿಂಚಿತ್ ಜ್ಞಾನೇನ ಜಾಯತೇ ॥ ॥ ೭೪ ॥

ಇತ್ಯವೇತ್ಯ ಸ ದೇವೇಶಃ
ಶಿವಃ ಸರ್ವಾನ್ತರ ಸ್ಥಿತಃ ।
ಲೋಕಾನುಗ್ರಾಹಕೋ ಭೂತ್ವಾ
ಜನ್ತೂನಾಂ ಭುಕ್ತಿಮುಕ್ತಿದಃ ॥ ॥ ೭೫ ॥

ಷ್ಟಾಂಗಯೋಗದಿಂದ ನಿರ್ಮಲವಾದ ಹೃದಯಕಮಲದಲ್ಲಿ ಪೂಜಿಸುತ್ತಾರೆ. ॥ ೭೨ ॥

ಅನ್ತರ್ಯಾಗರೂಪವಾದ ಪೂಜೆಯು ಅಷ್ಟಾಂಗಯೋಗರಹಿತರಿಗೆ ಸಾಧ್ಯವಿಲ್ಲ. ಈ ಅನ್ತರ್ಯಾಗರೂಪವಾದ ಪೂಜೆಯನ್ನು ಬಿಟ್ಟು ದೇಹಿಗಳಿಗೆ ಬೇರೆ ಶ್ರೇಯಸ್ಸಾಧನವಿಲ್ಲ. ॥ ೭೩ ॥

ಈ ಅನ್ತರ್ಯಾಗಪೂಜಾಧಿಕಾರವು ಯಾವುದಾದರೊಂದು ಕಡೆ ಒಬ್ಬಾನೊಬ್ಬನಿಗೆ ಲಭಿಸುತ್ತದೆ. ಎಲ್ಲೆಲ್ಲೂ ಎಲ್ಲರಿಗೂ ಲಭಿಸುವುದಿಲ್ಲ. ಬಹಿರ್ಯಾಗಪೂಜಾಧಿಕಾರವು ಪೂಜೋಪಯೋಗಿಯಾದ ಜ್ಞಾನದಿಂದ ಲಭಿಸುತ್ತದೆ. ॥ ೭೪ ॥

ಇದನ್ನು ತಿಳಿದು ಸರ್ವಾಂತರ್ಯಾಮಿಯೂ, ದೇವೇಶನೂ ಆದ ಸಾಕ್ಷಾತ್ ಪರಶಿವನು ಲೋಕಾನುಗ್ರಹಕ್ಕಾಗಿ ಸಮಸ್ತ ಪ್ರಾಣಿಗಳಿಗೆ ಭೋಗ ಮೋಕ್ಷದಾಯಕವಾದ– ॥ ೭೫ ॥

---

[1] ತದರ್ಚನಾದನ್ಯತ್—ಗ, ಝ.

ಪಞ್ಚ ಬ್ರಹ್ಮತನು : ಸಾಕ್ಷಾತ್
ಸ ಶಿವೋಽಭೂತ್ ಸದಾಶಿವ : |
ತಸ್ಮಾದೀಶ್ವರ ಉತ್ಪನ್ನ :
ಸರ್ವದೇವಾದಿರವ್ಯಯ : || || ೭೬ ||

ತತೋ ಹಿ ಮತ್ತ : ಸವಜ್ಞ :
ಸಮುತ್ಪನ್ನೋ ಜಗದ್ಗುರು : |
ತನ್ನಾಭಿ ಕಮಲೋದ್ಭೂತೋ-
ಹ್ಯಜೋ ಲೋಕಪಿತಾಮಹ : || || ೭೭ ||

ಅಧಿಶ್ರಿತಾ ಭವೇದ್ವಿದ್ಯಾ
ಸೈವ ಮಾಯೇತಿ ಕೀರ್ತಿತಾ |
ಮೂಲಪ್ರಕೃತಿರಿತ್ಯೇಷಾ
ಸಾಽಪಿ ಪಞ್ಚಸು ಮು [ಶ] ಕ್ತಿಷು || || ೭೮ ||

ಕಾರ್ಯಕಾರಣ ಭಾವೇನ
ಸ್ಥಿತ : [ತಾ] ತಸ್ಯ [ಸ್ಯಾ :] ಸ್ಥಿತಿಂ ಶೃಣು |
ತಸ್ಯಾ : [ತಾಸಾಂ] ಮನೋನ್ಮ ನೀ ದೇವೀ
ಸದಾಶಿವಸಮಾಶ್ರಿತಾ || || ೭೯ ||

—ಪಂಚಬ್ರಹ್ಮತನುವುಳ್ಳ ಸದಾಶಿವನಾಗುತ್ತಾನೆ. ಈ ಸದಾಶಿವನಿಂದ ಸಮಸ್ತ ದೇವತೆಗಳಿಗೆ ಆದ್ಯಾನೂ ಅವಿನಾಶಿಯೂ ಆದ ಮಹೇಶ್ವರನು ಉದ್ಭವಿಸುತ್ತಾನೆ. || ೭೬ ||

ನನ್ನ ರೂಪವೇ ಆದ ಮಹೇಶ್ವರನಿಂದ ಸರ್ವಜ್ಞನೂ ಜಗದ್ಗುರುವೂ ಆದ ವಿಷ್ಣುವು ಉದ್ಭವಿಸುತ್ತಾನೆ. ವಿಷ್ಣುವಿನ ನಾಭಿಕಮಲದಿಂದ ಲೋಕಪಿತಾಮಹನಾದ ಬ್ರಹ್ಮನು ಉದ್ಭವಿಸುತ್ತಾನೆ. || ೭೭ ||

ವಿದ್ಯೆಯು ಶಿವತತ್ತ್ವವನಾಶ್ರಯಿಸಿರುತ್ತದೆ ಆ ವಿದ್ಯೆಯೇ ಮಾಯೆ, ಈ ಮಾಯೆಯನ್ನು ಮೂಲಪ್ರಕೃತಿಯೆಂದು ಹೇಳುತ್ತಾರೆ. ಈ ಮೂಲಪ್ರಕೃತಿಯು ಪಂಚ ಶಕ್ತಿಗಳಲ್ಲಿ — || ೭೮ ||

ಕಾರ್ಯಕಾರಣಭಾವದಿಂದ ಇರುತ್ತದೆ. ಅವಿದ್ಯಾರೂಪವಾದ ಮೂಲಪ್ರಕೃತಿಯ ಸ್ಥಿತಿಯನ್ನು ಕೇಳು. ಆ ಶಕ್ತಿಗಳಲ್ಲಿ ಮನೋನ್ಮನೀಶಕ್ತಿಯು ಸದಾಶಿವನನ್ನು ಆಶ್ರಯಿಸಿರುತ್ತದೆ. || ೭೯ ||

ಮಂತ್ರವಾಸೋ ಮಯಾ ಪ್ರೋಕ್ತಃ
ಮಂತ್ರವಾಹನಮುಚ್ಯತೇ ।
ಲಿಂಗೇ ಚ ಪ್ರತಿಮಾಕುಮ್ಭೇ
ವಾಸ್ತೌ ವಹ್ನೌ ಚ ಮೂಲಕೇ ॥ ॥ ೮೦ ॥

ಅನ್ಯೈ [ನ್ಯ] ಕುಮ್ಭೇ ಚ ವಾಸ್ಯೇ ಚ
ಯುಕ್ತಂ ಮನ್ತ್ರಸ್ಯ ವಾಹನಮ್ ।
ಏವಂ ನವದಶ ಪ್ರೋಕ್ತಂ
ಮನ್ತ್ರಜಾತಸ್ಯ ಲಕ್ಷಣಮ್ ॥ ॥ ೮೧ ॥

ಮನ್ತ್ರ ಜಾತಮಿದಂ ಪ್ರೋಕ್ತಂ
ಮನ್ತ್ರ ಕೀಲಮಥ ಶೃಣು ॥ ॥ ೮೨ ॥

ಇತಿಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ
ಸಂಹಿತಾಯಾಂ ಮಂತ್ರಜಾತಂ ನಾಮ
ನವಮಃ ಪಟಲಃ

ಮನ್ತ್ರವಾಸವನ್ನು ಹೇಳಿದ್ದಾಯಿತು. ಇನ್ನು ಮಂತ್ರವಾಹನವನ್ನು ನಿರೂಪಿಸುವೆನು. ಲಿಂಗ, ಪ್ರತಿಮೆ, ಕುಂಭ, ವಾಸ್ತು, ಅಗ್ನಿ, ಮೂಲಸ್ಥಾನ- ॥ ೮೦ ॥

ದೀಕ್ಷೆ ಮತ್ತು ಪ್ರೋಕ್ಷಣ ಕಾಲದಲ್ಲಿ ಸ್ಥಾಪಿತವಾದ ಕಲಶ ಮತ್ತು ವಾಸಯೋಗ್ಯವಾದ ವಸ್ತು ಇವೆಲ್ಲವೂ ಮಂತ್ರಕ್ಕೆ ಯೋಗ್ಯವಾದ ವಾಹನ. ॥ ೮೧ ॥

ಹೀಗೆ ಮಂತ್ರಜಾತವನ್ನು ನಿರೂಪಿಸಿದ್ದಾಯಿತು.
ಇನ್ನು ಮಂತ್ರಕೀಲವನ್ನು ಹೇಳುವೆನು.

ಇತಿಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ
ಸಂಹಿತಾಯಾಂ ಮಂತ್ರಜಾತಂ ನಾಮ
ನವಮಃ ಪಟಲಃ

ಅಥ ಮಂತ್ರಕೀಲಪಟಲಃ

ದಶಮಃ

[1]ಸಕಲ ಭುವನ ಭೂತ ಭಾವನಾಭ್ಯಾಂ
ಜನನವಿನಾಶವಿಹೀನವಿಗ್ರಹಾಭ್ಯಾಮ್ ।
ನರವರಯುವತೀವಪುರ್ಧರಾಭ್ಯಾಂ
ಸತತಮಹಂ ಪ್ರಣತೋಽಸ್ಮಿ ಶಙ್ಕರಾಭ್ಯಾಮ್ ॥ ॥ ೧ ॥

[2]ಜ್ಞಾತ್ವಾ ತ್ರಿಂಶದತೀತಮೇಕ[3]ಮಧಿಕಂ[4] ಶೈವಂಮಹಾತತ್ತ್ವಕಂ
ತದ್ಭೇದಂ[5] ಬಹುಲೀಲಯಾ[6] ಚ ಸಹಿತಂ ನಾನಾವತಾರಾ
ನ್ವಿತಮ್ ।
ಸಾಮಾತ್ಯಾದಿಸಮಸ್ತಶೈವಕುಶಲಂ[7] ವೀರಾಖ್ಯಶೈವಂ[8] ಮಹತ್

ಸಮಸ್ತಲೋಕಗಳಲ್ಲಿರುವ ಸರ್ವಪ್ರಾಣಿಗಳಿಗೆ ರಕ್ಷಕರೂ, ಉತ್ಪತ್ತಿವಿನಾಶ ರಹಿತವಾದ ದೇಹವುಳ್ಳವರೂ, ಶ್ರೇಷ್ಠರಾದ ಸ್ತ್ರೀಪುರುಷ ಶರೀರವನ್ನು ಧರಿಸಿದವರೂ ಆದ, ಪಾರ್ವತೀ ಪರಮೇಶ್ವರರನ್ನು ನಾನು ಸದಾ ವಂದಿಸುತ್ತೇನೆ. ॥ ೧ ॥

ದಿವ್ಯಲಿಂಗವನ್ನು ಶಿವಾದಿಯಾದ ಮೂವತ್ತೊಂದು ಭೇದಗಳನ್ನುಳ್ಳದ್ದೆಂದೂ ಶಿವಸಂಬಂಧವಾದ ಮಹಾತತ್ತ್ವಸ್ವರೂಪವಾದುದೆಂದೂ, ನಾನಾ ಲೀಲೆಗಳನ್ನುಳ್ಳದ್ದೆಂದೂ, ಚಂದ್ರಶೇಖರನೇ ಮುಂತಾದ ಅನೇಕ ಅವತಾರಗಳನ್ನು ಧರಿಸಿದುದೆಂದೂ, ಸಾಮಾನ್ಯಾದಿ ಸಮಸ್ತಶೈವರಿಗೂ ಕ್ಷೇಮಕರವಾದುದೆಂದೂ, ಶ್ರೇಷ್ಠವಾದ ವೀರಶೈವ

---

[1] ಈ ಮಂಗಲಪದ್ಯ ಗ. ಚ. ಪುಸ್ತಕಗಳಲ್ಲಿ ಮಾತ್ರ ಇದೆ.

[2] ಈ ಪದ್ಯ—ಘ, ಛ, ಟ, ಠ, ಢ, ತ, ಥ, ದ, ಧ, ಪ. ಪುಸ್ತಕಗಳಲ್ಲಿ ಮಾತ್ರ ಇದೆ.

[3] ದಧಿಕ—ಕ, ಘ, ಛ, ಟ, ತ, ಥ, ದ, ಪ.

[4] ಮಮಿತಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.

[5] ತಸ್ಯೇದಂ—ಟ, ಢ, ಧ.

[6] ಬ್ರಹ್ಮಲೀಲಯಾ—ಪ.
ಬಹುಕೀಲಯಾ—ಟ, ಢ, ಥ.

[7] ಶೈವನಿವಹಂ—ಗ.

[8] ವೀರಂ ಚ ಶೈವಂ—ಗ.

ಸಂಶ್ರಿತ್ಯಾತ್ಮನಿ ದಿವ್ಯಲಿಙ್ಗಮನಿಶಂ ಧ್ಯಾಯೇ ತದೀಳೇ ಭಜೇ[1]
॥ ೨ ॥

ಅಥಾತಃ ಸಂಪ್ರವಕ್ಷ್ಯಾಮಿ
ಮನ್ತ್ರಕೀಲಮಥ[2] ಶೃಣು ।
ಅಕೀಲಂ[3] ಕೀಲಮಿತ್ಯುಕ್ತಂ
ಕೀಲಮನ್ತ್ರಂ[4] ವಿಸರ್ಜಯೇತ್ ॥ ॥ ೩ ॥

[5]ನೇತ್ರೇ ಲಲಾಟವಕ್ಷಶ್ಚ[6]
ಶ್ರೋತ್ರೇ[7]ಚಾಸ್ಯಂ ಚ ನಾಸಿಕಾ[8] ।
ಪಾದೌ[9] ಬಾಹೂ ಚ ದೇಹಶ್ಚ[10]
ಮನ್ತ್ರ[11] ಉಚ್ಚಾರ್ಯತೇ ಬುಧೈಃ ॥ ॥ ೪ ॥

ಸ್ವರೂಪವಾದುದೆಂದೂ ತಿಳಿದು ಅದನ್ನು ನನ್ನ ಹೃದಯದಲ್ಲಿ ಧರಿಸಿ ಮನೋವಾಕ್ಕಾಯಗಳಿಂದ ಸದಾ ಭಜಿಸುತ್ತೇನೆ. ॥ ೨ ॥

ಇನ್ನು ಮಂತ್ರಕೀಲವನ್ನು ನಿರೂಪಿಸುವೆನು. ಮಂತ್ರಜಾತವು ಅಕೀಲ ಮತ್ತು ಕೀಲವೆಂದು ಎರಡುವಿಧ ಅದರಲ್ಲಿ ಕೀಲಮನ್ತ್ರವನ್ನು ತ್ಯಜಿಸಬೇಕು. ॥೩ ॥

ಇದು ನೇತ್ರಮಂತ್ರ, ಇದು ಲಲಾಟಮಂತ್ರ, ಇದು ವಕ್ಷೋಮಂತ್ರ, ಇದು ಶ್ರೇತ್ರಮಂತ್ರ, ಇದು ಆಸ್ಯಮಂತ್ರ, ಇದು ನಾಸಿಕಾಮಂತ್ರ, ಇದು ಪಾದಮಂತ್ರ, ಇದು ಹಸ್ತ ಮಂತ್ರ, ಇದು ದೇಹಮಂತ್ರ ಎಂದು ತಿಳಿದು ಮಂತ್ರಜ್ಞರು ಮಂತ್ರವನ್ನು ಉಚ್ಚರಿಸುತ್ತಾರೆ. ॥ ೪ ॥

---

[1] ಧ್ಯಾಯೇ ತದೀಶಂ ಭಜೇ—ಗ.

[2] ಮತಃ—ತ, ಧ.

[3] ಅಖಿಲಂ—ಥ, ಅಕಿಲಂ—ಘ, ಛ, ಟ, ತ, ಕೀಲಕಂ—ದ, ಅಕಾರಂ—ಗ, ಚ.

[4] ಕೀಲಮಂತ್ರೇ—ಧ, ಖಿಲಮಂತ್ರಂ—ಥ, ಕೀಲಂ ಮಂತ್ರಂ—ಠ.

[5] ಈ ಪದ್ಯ—ಛ. ಪುಸ್ತಕದಲ್ಲಿಲ್ಲ.

[6] ಲಲಾಟೇ ಚಕ್ಷುಶ್ಚ—ಗ, ಚ.

[7] ಶ್ರೋತ್ರಂ—ಗ, ಚ.

[8] ಚಾಸ್ಯಂ ಚ ನಾಸಿಕೇ ಝ, ಧ.
ನಾಸಿಕಮಾಸ್ಯಕಂ—ಗ, ಚ.

[9] ಕರ್ಣಂ—ಗ, ಚ.

[10] ದೇಹೇಚ—ಗ, ಚ.

[11] ಮಂತ್ರಂ—ಕ, ಗ, ಘ, ಚ, ಛ, ಜ, ಝ, ಟ, ಠ, ಢ, ತ, ಥ, ದ, ಧ, ಪ.

ಅತ್ರ[1] ದೀರ್ಘಾಯತೇ ವೃತ್ತಂ
ಅಥ ದೀರ್ಘಾಕ್ಷ ವೃತ್ತ್ಯ ಚ [2]।
ಅರ್ಧಚನ್ದ್ರ ಸಮಾಕಾರಂ
ನಾದಂ [ದ:] ಆಯಾನ್ತ[3] ನಾದವತ್ ॥ ॥ ೫ ॥

[4]ಏವಮಾದಿಸ್ತು [ದಿ ತು][5] ಮನ್ತ್ರಾಣಾಂ
ಸರ್ವದು:ಖವಿನಾಶನಮ್[6] ।
ಭುಕ್ತಿಮುಕ್ತಿಪ್ರದಂ ಚೈವ
ಸರ್ವಕಾಮಾರ್ಥಸಾಧನಮ್ ॥ ॥ ೬ ॥

ವಿಪರೀತೋ ವಿಪತ್ತ್ಯೈ ಸ್ಯಾತ್
ಮನ್ತ್ರರೂಪಂ ಪ್ರಕೀರ್ತಿತಮ್[7] ।
ಗುರೌ ಲಿಂಗೇ ಽಕ್ಷಮಾಲಾಯಾಂ
ಮನ್ತ್ರೇ ಭಸ್ಮನಿ ಪಂಚಸು ॥ ॥ ೭ ॥

ಮಂತ್ರವೃತ್ತವು ದೀರ್ಘದೀರ್ಘತರವಾಗುತ್ತಿರುತ್ತದೆ. ಮಂತ್ರದ ಈ ದೀರ್ಘಾಯವು ಮಂತ್ರನೇತ್ರವನ್ನು ಸುತ್ತಿ ಅರ್ಧಚಂದ್ರನ ಆಕಾರವನ್ನು ಹೊಂದಿರುತ್ತದೆ. ಬರುವ ಧ್ವನಿಯಂತಿರುವ ಮಂತ್ರನಾದವು ಸಾಕ್ಷಾತ್ ನಾದಸ್ವರೂಪವಾಗಿರುತ್ತದೆ. ॥ ೫ ॥

ಹೀಗೆ ಪ್ರತಿಪಾದಿತವಾದ ಮಂತ್ರಸ್ವರೂಪವು ಸಮಸ್ತದುಃಖವಿನಾಶಕವೂ, ಭೋಗಮೋಕ್ಷದಾಯಕವೂ, ಸಮಸ್ತ ಇಷ್ಟಾರ್ಥಗಳಿಗೆ ಸಾಧಕವೂ ಆಗಿರುತ್ತದೆ. ॥೬॥

ಇದಕ್ಕಿಂತ ಭಿನ್ನವಾದ ಮಂತ್ರಸ್ವರೂಪವು ವಿನಾಶಕರವಾಗುತ್ತದೆ. ಗುರು, ಶಿವಲಿಂಗ ಜಪಮಾಲೆ, ಶಿವ ಮಂತ್ರ, ವಿಭೂತಿ,— ॥ ೭ ॥

---

[1] ಅಥ—ಕ, ಖ, ಘ, ಟ, ಢ, ತ, ಥ, ದ, ಧ, ಪ.

[2] ದೀರ್ಘಾಶ್ಚ ವೃತ್ತಕಂ—ಗ, ಚ, ದೀರ್ಘಾದ್ಯ ವೃತ್ತಕಂ—ಖ.
ದೀರ್ಘಂ ಚ ವೃತ್ತಕಂ—ಥ, ದೀರ್ಘಾಕ್ಷ ವೃತ್ತ ಚ—ಘ, ಛ, ಟ.

[3] ಆಯಾಂತಿ—ಖ, ಝ.

[4] ಇಲ್ಲಿಂದ 'ಪ್ರಕೀರ್ತಿತಂ' (೭) ವರೆಗೆ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.

[5] ಏವಮಾಕಾರ—ಝ.

[6] ವಿನಾಶಕೃತ್—ಥ. ವಿಮೋಚನಂ—ಝ.

[7] ಇಲ್ಲಿಯವರೆಗೆ ಮಾತ್ರ—ಜ:ಪುಸ್ತಕದಲ್ಲಿದೆ. ಇಲ್ಲಿಗೇ ಹತ್ತನೆಯ ಪಟಲ ಸಮಾಪ್ತವಂದಿದೆ.

ಏತಾಸು ಶಿವಮುದ್ರಾಸು
ಶಿವವದ್ಭಕ್ತಿಮಾಚರೇತ್[1] |
ಆತ್ಮೀಯಾನ್ ವಿವಿಧಾನ್ ಭೋಗಾನ್
ಸ್ತ್ರೀಪುತ್ರಪ್ರಮುಖಾನಪಿ || ||೮||

ಸ್ವಾತ್ಮಾನಂ ಚಿತ್ತ ಬುದ್ಧೀ ಚ[2]
ತೇಷಾಂ ಚ ವಶಮಾನಯೇತ್ |
ಯೋಭೇದಂ ಭಕ್ತಿಮಾನ್[3] ಭಕ್ತ[4]:
ತೇಷು ಮೋಹಾತ್ ಕರೋತಿ ಚ[5] || ||೯||

ಶಿವದ್ರೋಹೀ[6] ಸ ವಿಜ್ಞೇಯಃ
ಸರ್ವಕರ್ಮಬಹಿಷ್ಕೃತಃ |

ಈ ಐದು ಶಿವಮುದ್ರೆಗಳಲ್ಲಿಯೂ ಶಿವನಲ್ಲಿ ಭಕ್ತಿಯನ್ನಾಚರಿಸುವಂತೆ ಭಕ್ತಿಯನ್ನಾಚರಿಸಬೇಕು. ತನ್ನ ಸಮಸ್ತ ಉಪಭೋಗವಸ್ತುಗಳನ್ನೂ ಪತ್ನೀ ಪುತ್ರಾದಿಗಳನ್ನೂ,— ||೮||

ತನ್ನನ್ನೂ ತನ್ನ ಚಿತ್ತಬುದ್ಧಿಗಳನ್ನೂ, ಗುರು ಲಿಂಗರುದ್ರಾಕ್ಷಮಾಲೆ ಶಿವಮಂತ್ರ ಮತ್ತು ವಿಭೂತಿಗಳಿಗೆ ಸಮರ್ಪಿಸಬೇಕು. ತಾನು ಮಹಾಶಿವಭಕ್ತನೆಂಬ ಅಭಿಮಾನವುಳ್ಳವನಾಗಿ ಯಾವ ಭಕ್ತರು ಅಜ್ಞಾನದಿಂದ ಗುರ್ವಾದಿಗಳಲ್ಲಿ ಭೇದವನ್ನೆಣಿಸುವನೋ, ||೯||

ಅವನನ್ನು ಶಿವದ್ರೋಹಿಯೆಂದು ತಿಳಿಯಬೇಕು. ಅವನು ಸಮಸ್ತ ಶಿವಕಾರ್ಯ

---

[1] ಶಿವಭಕ್ತಿಂ ಸಮಾಚರೇತ್—ಗ, ಚ, ಝ.
ಶಿವಸದ್ಭಕ್ತಿಮಾಚರೇತ್—ಪ.

[2] ಸ್ವತ್ಮಾಸಂ ಚ ವಿಶೇಷಣ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಪ.
ಚಿತ್ತಬುದ್ಧೀ ವಿಶೇಷೇಣ—ಖ.

[3] ಶಕ್ತಿಮಾನ್—ಗ, ಚ.

[4] ಭಕ್ತಾಃ—ಗ, ಚ.

[5] ಮೋಹಾತ್ ಪ್ರಕುರ್ವತೇ—ಕ, ಘ, ಛ, ಝ, ಟ, ಠ, ಢ, ತ, ಥ, ದ, ಧ, ಪ.
ಮೋಹಾತ್ ಕರೋತಿಸಃ—ಗ, ಚ.

[6] ಶಿವದ್ರೋಹೀತಿ—ಖ, ಗ, ಘ, ಝ.

ಶೈವಂ ಚತುರ್ವಿಧಂ ಜ್ಞೇಯಂ
ಸಮಾಸಾತ್ ಶೃಣು ಷಣ್ಮುಖ || || ೧೦ ||
ಸಾಮಾನ್ಯಂ ಮಿಶ್ರಕಂ ಚೈವ
ಶುದ್ಧಂ[1] ವೀರಂ[2] ಯಥಾಕ್ರಮಮ್ |
ತತ್ರಾದೌ ಸಂ ಪ್ರವಕ್ಷ್ಯಾಮಿ
ಶೈವಸಾಮಾನ್ಯಲಕ್ಷಣಮ್ || || ೧೧ ||
ಶಿವಲಿಂಗಂ ಯದಾ[3] ಪಶ್ಯೇತ್
ತದಾ[4] ಕುರ್ಯಾತ್[5] ಸಮರ್ಚನಮ್ |
ಪ್ರದಕ್ಷಿಣಂ ಪ್ರಣಾಮಂ ವಾ
ದರ್ಶನಂ[6] ವಾತ್ರ[7] ಕಾರಯೇತ್ || || ೧೨ ||

ಗಳಿಂದಲೂ ಬಹಿಷ್ಕೃತನಾಗುತ್ತಾನೆ. ಎಲೈ ಷಣ್ಮುಖನೇ ! ಇನ್ನು ಚತುರ್ವಿಧವಾದ ಶೈವವನ್ನು ನಿರೂಪಿಸುವೆನು. || ೧೦ ||

ಶೈವವು— ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ ಮತ್ತು ವೀರಶೈವವೆಂದು ನಾಲ್ಕು ವಿಧ, ಕ್ರಮವಾಗಿ ಅವುಗಳಲ್ಲಿ ಮೊದಲು ಸಾಮಾನ್ಯಶೈವದ ಲಕ್ಷಣವನ್ನು ತಿಳಿಸುವೆನು. || ೧೧ ||

ಶಿವಭಕ್ತರು ಸ್ವಯಂಭುಲಿಂಗವನ್ನಾಗಲಿ, ದೇವದಾನವಮಾನವಾದಿ ಪ್ರತಿಷ್ಠಿತ ಲಿಂಗವನ್ನಾಗಲಿ ನೋಡಿದಾಗ ಕೂಡಲೇ ಆ ಲಿಂಗದ ಪೂಜೆಯನ್ನು ಮಾಡಬೇಕು. ಪೂಜೆಯು ಸಾಧ್ಯವಾಗದಿದ್ದರೆ ಪ್ರದಕ್ಷಿಣೆಯನ್ನಾಗಲಿ, ಅದೂ ಸಾಧ್ಯವಾಗದಿದ್ದರೆ ನಮಸ್ಕಾರವನ್ನಾಗಲಿ, ಅದೂ ಸಾಧ್ಯವಾಗದಿದ್ದರೆ ದರ್ಶನವನ್ನಾಗಲಿ ಮಾಡಬೇಕು. || ೧೨ ||

---

[1] ಶುದ್ಧಃ—ಥ.
[2] ವೀರಃ—ಕ, ಟ.
[3] ಯಥಾ—ಗ, ಚ ಝ.
[4] ತಥಾ—ಗ, ಚ, ಝ, ಸದಾ—ತ.
[5] ಕುರ್ಯಾಃ—ಟ.
[6] ಪ್ರದಕ್ಷಿಣಾ ಚ ಪ್ರಣತಿರ್ದರ್ಶನಂ—ಧ.
ಪ್ರದಕ್ಷಿಣಂ ವಾ ಪ್ರಣತಿಂ ದರ್ಶನಂ—ಕ, ಖ, ಛ, ಟ, ತ, ಥ, ಪ.
ಪ್ರದಕ್ಷಿಣಂ ವಾ ಪ್ರಣತಂ ದರ್ಶನಂ—ಟ, ಢ, ದ.
ಪ್ರದಕ್ಷಿಣಂ ಪ್ರಣಾಮಂ ಚ ದರ್ಶನಂ—ಗ, ಚ, ಝ.
[7] ಚಾತ್ರ—ಗ, ಚ, ಝ.

ಭಸ್ಮಧಾರಣಮಾತ್ರೇಣ[1]
ಶುದ್ಧೋ ಭವತಿ ಸರ್ವದಾ ।
ಶಿವಕೀರ್ತೌ[2] ತದಾಲಾಪೇ[3]
ಪ್ರೀತಿರ್ಮಾ ಶಿವಭಕ್ತಕೇ ॥ ॥ ೧೩ ॥

ಏತೇಷಾಂ ನಿಯತಿರ್ನಾಸ್ತಿ
ಯಥಾಲಾಭಂ[4] ಸಮಾಚರೇತ್ ।
ಸಾಮಾನ್ಯಲಕ್ಷಣಂ ಪ್ರೋಕ್ತಂ
ವಕ್ಷ್ಯೇ ಮಿಶ್ರಸ್ಯ ಲಕ್ಷಣಮ್ ॥ ॥ ೧೪ ॥

ಶೈವಂ ಚ ವೈಷ್ಣವಂ ಶಾಕ್ತಂ
ಕೌಮಾರಂ ಗಾಣಪತ್ಯಕಮ್ ।
ಸೌರಂ ಚಾಖಿಲದೈವತ್ಯಂ
ಪೂಜನಂ ಚ ಸಮಾಚರೇತ್ ॥ ॥ ೧೫ ॥

ಸಾಮಾನ್ಯಶೈವನು ಶಿವಾರ್ಚನಾದಿ ಸರ್ವಕಾರ್ಯಗಳಲ್ಲಿಯೂ ವಿಭೂತಿಧಾರಣಮಾತ್ರದಿಂದ ಯಾವಾಗಲೂ ಶುದ್ಧನಾಗುತ್ತಾನೆ. ಅವನು ಶಿವಕೀರ್ತನೆ ಶಿವಾಲಾಪ ಮತ್ತು ಶಿವಭಕ್ತರಲ್ಲಿ ಪ್ರೀತಿಯನ್ನುಳ್ಳವನಾಗಿರಬೇಕು. ॥ ೧೩ ॥

ಈ ಶಿವಾರ್ಚನಾದಿಗಳಲ್ಲಿ ನಿಯಮವಿಲ್ಲ, ಭಸ್ಮಾದಿಗಳು ಲಭ್ಯವಾದಂತೆ ಶಿವಾರ್ಚನಾದಿ ಕಾರ್ಯವನ್ನು ಮಾಡಬೇಕು. ಸಾಮಾನ್ಯಶೈವದ ಲಕ್ಷಣವನ್ನು ತಿಳಿಸಿದ್ದಾಯಿತು. ಇನ್ನು ಮಿಶ್ರಶೈವದ ಲಕ್ಷಣವನ್ನು ನಿರೂಪಿಸುವೆನು. ॥ ೧೪ ॥

ಶಿವಪೀಠದ ಮಧ್ಯದಲ್ಲಿ ಸ್ಥಾಪಿತವಾದ ಶಿವಲಿಂಗವನ್ನೂ ಆ ಶಿವಲಿಂಗದ ಆವರಣದಲ್ಲಿರುವ ವಿಷ್ಣುಪ್ರತಿಮೆಯನ್ನೂ ಶಕ್ತಿದೇವತೆಯನ್ನು ಷಣ್ಮುಖನನ್ನೂ ವಿಘ್ನೇಶ್ವರನ್ನನ್ನೂ ಸೂರ್ಯನನ್ನೂ ಬ್ರಹ್ಮೇಂದ್ರಾದ್ಯಖಿಲ ದೇವತೆಗಳನ್ನೂ ಪೂಜಿಸಬೇಕು. ॥ ೧೫ ॥

---

[1] ಮಂತ್ರೇಣ—ಖ, ಗ, ಚ, ಝ ಗಳನ್ನು ಬಿಟ್ಟು.

[2] ಶಿವಕೀರ್ತಿಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.
ಶಿವಕೀರ್ತಿಃ—ಗ, ಚ, ಝ.

[3] ತದಾಲಾಭೇ—ಪ.
ತಥಾಲಾಪೇ—ಛ, ಥ.

[4] ಯಥಾಲಬ್ಧಂ—ಕ, ಖ, ಗ, ಘ, ಚ, ಛ, ಝ, ಟ, ಠ, ಢ, ತ, ಥ, ದ, ಪ.

ಏತೇಷೂಕ್ತೇಷು ಸರ್ವೇಷು[1]
ತತ್ತನ್ಮನ್ತ್ರೇಷು ಮಿಶ್ರಕಾ [ಣಾ] ತ್[2] |
ಸಮ[3]ಭಕ್ತಿ ಸಮಾಯುಕ್ತಃ[4]
ಸರ್ವಾಣಿ ಲಿಂಗೇನ[5] ಭಾವಯೇತ್ ॥ ॥ ೧೬ ॥

ಮಿಶ್ರಶೈವಮಿತಿ[6] ಪ್ರೋಕ್ತಂ
ಶುದ್ಧ ಶೈವಮಥ[7] ಶೃಣು |
ಶುದ್ಧತ್ವಂ[8] ಶಿವಮುದ್ದಿಶ್ಯ[9]
ಶಿವಾಜ್ಞಾತಂ[10] ಹಿ ಶೈವಕಮ್ ॥ ॥ ೧೭ ॥

ವಿಷ್ಣ್ವಾದಿ ಸಕಲ ದೇವತಾ ಮಂತ್ರಗಳಲ್ಲಿ ಸರ್ವವರ್ಣಾಧಿದೇವತೆಗಳ ಸಂಭವಕ್ಕೆ ಕಾರಣವಾದ ಶಿವಮಂತ್ರಾಕ್ಷರವು ಬೆರೆತಿರುವುದರಿಂದ ಅತ್ರೋಕ್ತವಾದ ಶಿವಾರ್ಚಕರಾದ ವಿಷ್ಣ್ವಾದಿ ಪಂಚ ದೇವತೆಗಳಲ್ಲಿಯೂ, ಅನುಕ್ತವಾದ ಬ್ರಹ್ಮೇಂದ್ರಾದಿ ಸಕಲ ದೇವತೆಗಳಲ್ಲಿಯೂ ಶಿವಲಿಂಗಕ್ಕೆ ಸಮಾನವಾದ ಭಕ್ತಿಯುಳ್ಳವನಾಗಿ ಶಿವಲಿಂಗದೊಡಗೂಡಿ ಆ ಸಕಲ ದೇವತೆಗಳನ್ನೂ ಭಾವಿಸಬೇಕು. ॥ ೧೬ ॥

ಮಿಶ್ರಶೈವವನ್ನು ನಿರೂಪಿಸಿದ್ದಾಯಿತು, ಇನ್ನು ಶುದ್ಧಶೈವವನ್ನು ವಿವರಿಸುವೆನು. ಶಿವತತ್ತ್ವವನ್ನುದ್ದೇಶಿಸಿ ಪ್ರವೃತ್ತರಾಗಿರುವುದರಿಂದ ಶುದ್ಧವೆನಿಸುತ್ತದೆ. ಶಿವನಿಂದ ಆವಿರ್ಭವಿಸಿದುದರಿಂದ ಶೈವವೆನಿಸುತ್ತದೆ ॥ ೧೭ ॥

---

[1] ಶಾಸ್ತ್ರೇಷು—ಧ.
[2] ಮಿಶ್ರಿತಾಃ—ಗ, ಚ, ಝ, ಮಿಶ್ರವಾಃ—ಛ.
ಮಿಶ್ರಿಕಾಃ—ಥ. ಮಿಶ್ರಕಾಃ—ಪ.
ಸಮ್ಯಕ್—ಗ, ಚ, ಝ.
[3] ಸಮಾಯುಕ್ತಾಃ—ಧ.
[4] ಸಮಾಯುಕ್ತಂ—ಘ, ಥ.
[5] ಸರ್ವಾಲಿಂಗೇನ—ಕ.
[6] ಮಿಶ್ರಂ ಶೈವಮಿದಂ—ಧ.
[7] ಮತ—ಥ, ಧ.
[8] ಶುದ್ಧತತ್ತ್ವಂ—ಘ.
ಶುದ್ಧತ್ವಾತ್—ಗ, ಚ, ಝ.
[9] ಶಿವಮುದ್ದಿಷ್ಟಾತ್—ಕ, ಖ, ಘ, ಟ, ಠ, ತ, ಧ, ಪ.
[10] ಶಿವಾಖ್ಯಾತಂ—ಧ.

ಶುದ್ಧಶೈವಸಮಾಯೋಗಾತ್[1]
ಶುದ್ಧಶೈವ[2]ಮಿತಿ ಸ್ಮೃತಮ್ ।
ಶಿವೇನೋತ್ಪದ್ಯತೇ ಶೈವಃ[3]
ತಸ್ಮಾಜ್ಜಾತಃ ಶಿವದ್ವಿಜಃ[4] ॥ ॥ ೧೮ ॥

ಕಾಮಿಕಾದಿಷು ತನ್ತ್ರೇಷು
ಚಾಷ್ಟಾ[5]ವಿಂಶತಿಷು ಕ್ರಮಾತ್ ।
ವೇದಶಾಸ್ತ್ರಾದಿ[6]ವಿದ್ಯಾಸು[7]
ಕೃತಾಭ್ಯಾಸಃ ಶಿವವ್ರತೀ[8] ॥ ॥ ೧೯ ॥

ಶುದ್ಧ ಮತ್ತು ಶೈವಗಳ ಸಮಾಯೋಗದಿಂದ ಶುದ್ಧಶೈವವೆಂದಾಗುತ್ತದೆ. ಶಿವನಿಂದ ಶೈವವು ಉದಯಿಸುತ್ತದೆ. ಶೈವದಿಂದ ಶಿವದ್ವಿಜನು ಜನಿಸುತ್ತಾನೆ. ॥ ೧೮ ॥

ಶಿವವ್ರತಿಯು ಕಾಮಿಕಾದಿ ವಾತುಲಾಂತವಾದ ಇಪ್ಪತ್ತೆಂಟು ಆಗಮಗಳನ್ನೂ ಋಗಾದಿವೇದಗಳನ್ನೂ ಮನ್ವಾದಿ ಧರ್ಮಶಾಸ್ತ್ರಗಳನ್ನೂ ಪುರಾಣೇತಿಹಾಸಾದಿ ಸಮಸ್ತ ಗ್ರಂಥಗಳನ್ನೂ ಕ್ರಮವಾಗಿ ಅಭ್ಯಾಸಮಾಡಿ,— ॥ ೧೯ ॥

---

[1] ಶೈವ ಶಿವಯೋಗಾತ್— ತ.

[2] ಶುದ್ಧಂ ಶಿವ— ಗ, ಚ, ಛ.

[3] ಶೈವಂ— ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.

[4] ಇದರ ನಂತರ— ಕ, ಖ, ಗ, ಘ, ಚ, ಝ, ಟ, ಠ, ಢ, ತ, ಥ, ದ, ಧ, ಪ. ಪುಸ್ತಕಗಳಲ್ಲಿ—
“ವೀರಾಗಮೇ—
ಶಿವದ್ವಿಜಾಸ್ತು ವಿಪ್ರೇಂದ್ರ ! ಹ್ಯಾದಿಶೈವಾಃ ಪ್ರಕೀರ್ತಿತಾಃ ।
ಕೌಶಿಕಃ ಕಾಶ್ಯಪಶ್ಚೈವ ಭಾರದ್ವಾಜೋಽತ್ರಿರೇವ ಚ ।
ಗೌತಮಶ್ಚೇತಿ ಸಂಜ್ಞೈತೇ ಪಂಚ ವಕ್ತ್ರೇಷು ದೀಕ್ಷಿತಾಃ ।
ಏಷಾಂ ಋಷೀಣಾಂ ವಂಶೇಷು ಜಾತಾಸ್ತೇ ಹಿ ಶಿವದ್ವಿಜಾಃ ।
ಪುನರ್ದೀಕ್ಷಾಂ ನ ಚಾರ್ಹಂತಿ ಕೃತಾ ಚೇತ್ ಸಾ ತು ನಿಷ್ಫಲಾ ॥
ಇತಿ ॥” ಎಂದು ಅಧಿಕಪಾಠವಿದೆ.

[5] ಅಷ್ಟಾ— ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ.

[6] ಶಾಸ್ತ್ರೇಷು— ಟ.

[7] ಸರ್ವೇಷು— ಕ, ಖ, ಘ, ಛ, ಝ, ಟ, ಠ, ತ, ಥ, ದ, ಧ, ಪ.

[8] ಕೃತ್ವಾಽಭ್ಯಾಸಂ ಶಿವಂ ಪ್ರತಿ— ಗ, ಚ, ಝ.

ಕರ್ಷಣಾದಿ ಪ್ರತಿಷ್ಠಾನ್ತಂ
ಪ್ರತಿಷ್ಠಾದ್ಯುತ್ಸವಾನ್ತಕಮ್ ।
ಉತ್ಸವಾತ್ಪ್ರಾ[1]ಯಶ್ಚಿತ್ತಾನ್ತಂ
ಜ್ಞಾತ್ವಾ ಸರ್ವಂ ಸಮಾಚರೇತ್ ॥ ॥ ೨೦ ॥

ಮಂತ್ರಯಂತ್ರ[2]ಕ್ರಿಯಾ ಮುದ್ರಾ[3]
ನ್ಯಾಸಾ[4] ವಾಹನ ಕಾದಿಭಿ :[5] ।
ಉಪಚಾರೈ : ಬಹುವಿಧೈ :
ಲಿಂಗಂ ಸಿಂಹಾಸನೇ ಯಜೇತ್ ॥ ॥ ೨೧ ॥

ಆತ್ಮಾರ್ಥಂ ಚ ಪರಾರ್ಥಂ ಚ
ಪೂಜಾ ದ್ವಿವಿಧಮುಚ್ಯತೇ ।
ದತ್ತೇ ಚ ಗುರುಣಾ ಲಿಂಗೇ
ಸ್ಥಣ್ಡಿಲೇ ಸ್ವಯಮಾ [ಸ್ವಸ್ಯ ಚಾ]ತ್ಮನಿ ॥ ॥ ೨೨ ॥

ಶಿವಾಕರ್ಷಣದಿಂದ ಪ್ರಾರಂಭಿಸಿ ಶಿವಲಿಂಗಸ್ಥಾಪನೆ ಕಲಶಸ್ಥಾಪನೆ, ಶಕ್ತಿದೇವತಾ ಸ್ಥಾಪನೆ, ಪರಿವಾರ ದೇವತಾದಿ ಸ್ಥಾಪನೆಗಳವರೆಗಿನ ಕ್ರಿಯೆಯನ್ನು ಶಿವಲಿಂಗಪ್ರತಿಷ್ಠೆಯಿಂದ ಪ್ರಾರಂಭಿಸಿ ನಿತ್ಯೋತ್ಸವ ಶಿವೋತ್ಸವಗಳವರೆಗಿನ ಕ್ರಿಯೆಯನ್ನೂ ತಿಳಿದು ಎಲ್ಲಾ ಕ್ರಿಯೆಗಳನ್ನು ಆಚರಿಸಬೇಕು. ॥ ೨೦ ॥

